# ಬೌದ್ಧ ನಿತ್ಯಾಚರಣೆಗಳು

## ಪ್ರತಿದಿನ ಬೌದ್ಧ ಪೂಜಾ ಮತ್ತು ಸಂಸ್ಕಾರ ವಿಧಿಗಳ ಕೈಪಿಡಿ


ರಚನೆ :

**ವೈ. ಬಿ. ನಂದನ**



ಪ್ರಕಾಶಕರು

**ಮಹಾಬೋಧಿ ಸೊಸೈಟಿ**

**ಬುದ್ಧ ವಚನ ಟ್ರಸ್ಟ್**

ಬೆಂಗಳೂರು - ೫೬೦ ೦೦೯

**Bauddha Nityacharanegalu** - pages 106 written by Shri Y.B. Nandana, published by Maha Bodhi Society, Buddha Vachana Trust, Bangalore - 560 009, Printed and donated by the Corporate Body of the Buddha Educational Foundation, Taiwan.

ಹಕ್ಕುಗಳು : ಬುದ್ಧವಚನ ಟ್ರಸ್ಟ್

**ಪ್ರಕಾಶಕರು (ಪ್ರತಿಗಳಿಗೆ ಮತ್ತು ಪ್ರಶ್ನೆಗಳಿಗೆ ಸಂಪರ್ಕಿಸಿ)**

**ಬುದ್ಧ ವಚನ ಟ್ರಸ್ಟ್**

೧೪, ಕಾಳಿದಾಸ ಮಾರ್ಗ,

ಗಾಂಧಿನಗರ, ಬೆಂಗಳೂರು - ೫೬೦ ೦೦೯

ದೂರವಾಣಿ : ೦೮೦-೨೨೫೦೬೮೪, ಫ್ಯಾಕ್ಸ್ : ೦೮೦-೨೨೬೪೪೩೮

ಈಮೇಲ್ :mahabodhi@vsnl.com

ವೆಬ್ http://education.vsnl.com/mahabodhi

**ಮುಖಪುಟ ಕಲೆ :** ಶ್ರೀ ಸಿ. ಚಂದ್ರಶೇಖರ್

ಮುದ್ರಕರು :

Printed for free distribution by

**The Corporate Body of the Buddha Educational Foundation**

11F., 55 Hang Chow South Road Sec 1, Taipei, Taiwan, R.O.C.

Tel: 886-2-23951198 , Fax: 886-2-23913415

Email: overseas@budaedu.org

Website:http://www.budaedu.org

Mobile Web: m.budaedu.org

**This book is strictly for free distribution, it is not to be sold.**

ಈ ಪುಸ್ತಕ ಕೇವಲ ಉಚಿತ ಹಂಚಿಕೆಗಾಗಿ. ಮಾರಾಟ ಮಾಡಕೂಡದು

# ಪ್ರಕಾಶಕರ ಬಿನ್ನಹ

ಭಾರತದ ಸಾಹಿತ್ಯ ಕಲೆ ಮತ್ತು ಸಂಸ್ಕೃತಿಗೆ ಬುದ್ಧ ಧರ್ಮದ ಕೊಡುಗೆ ಅಪಾರ. ಒಂದು ಹೊಸ ಆಯಾಮ, ಹೊಸ ರೂಪ, ಹೊಸ ದಿಕ್ಕು, ಚಲನೆ ಹೀಗೆ ಹಲವು ಹೊಸತುಗಳನ್ನು ಜೋಡಿಸಿ, ವಿಶ್ವಮಾನ್ಯತೆಗಳಿಸಲು ಸಾಧ್ಯವಾಯಿತು.

ಪಾಲಿ ಭಾಷೆಯಲ್ಲಿರುವ ೩ ಪೀಟಕಗಳ ಅಗಾಧ ಸಾಹಿತ್ಯ ರಾಶಿ, ಅಜಂತ ಎಲ್ಲೋರಗಳಂತಹ ಕಲೆಯ ವೈಭವದ ಸ್ತೂಪ, ವಿಹಾರ, ಗುಹೆಗಳ ಮಹಾನತೆಯ ಛಾಪು, ಭಾರತದ ಪ್ರತಿ ಹಳ್ಳಿಯಲ್ಲಿಯೂ ಅಜರಾಮರವಾಗಿ ಸಾಂಸ್ಕೃತಿಕ ಸೇತುವಾಗಿ ಉಳಿದಿರುವ 'ಬೋಧಿವೃಕ್ಷ'' ಭಾರತೀಯ ಭವ್ಯ ಪರಂಪರೆಯಲ್ಲಿ ಹಾಸುಹೊಕ್ಕಾಗಿರುವ ಶಕಪುರುಷ ಭಗವಾನ್ ಬುದ್ಧರ ಉಪದೇಶ ಸಾರಸತ್ವಗಳು ಪ್ರಪಂಚದ ಮಾನವರ ಬದುಕನ್ನು ಹಸನುಗೊಳಿಸುವಲ್ಲಿ ಇಂದಿಗೂ ಮನಮುಟ್ಟುತ್ತಿವೆ.

ಇಂತಹ ಅಭೂತವಾದ ಭಗವಾನರ ನುಡಿಗಳನ್ನು ಜನಸಾಮಾನ್ಯರಿಗೆ ದೊರಕುವ ರೀತಿಯಲ್ಲಿ ಪ್ರಕಾಶನ ಮಾಡುವ ಜವಾಬ್ದಾರಿಯನ್ನು ಪೂಜ್ಯ ಆಚಾರ್ಯ ಬುದ್ಧರಕ್ಷಿತರವರ ನೇತೃತ್ವದಲ್ಲಿ ಮಹಾಬೋಧಿ ಸೊಸೈಟಿ, ಬುದ್ಧ ವಚನ ಟ್ರಸ್ಟ್ ಬೆಂಗಳೂರು ಆಸಕ್ತಿಯಿಂದ ವಹಿಸಿಕೊಂಡು ಬಂದಿದೆ. ೧೯೫೬ರಿಂದ ಸುಮಾರು ೪೫ ವರ್ಷಗಳ ಕಾಲ ಅವಿರತವಾಗಿ ಪ್ರಕಾಶನ ಕಾರ್ಯ ನಡೆಸುತ್ತಿದ್ದೇವೆ.

ಆಚಾರ್ಯ ಬುದ್ಧರಕ್ಷಿತ ಭಂತೇಜಿಯವರು ಕರ್ನಾಟಕದಲ್ಲಿ ಬೌದ್ಧ ಸಮಾಜವನ್ನು ಕಟ್ಟುವ ಒಂದು ದೊಡ್ಡ ಇಚ್ಛೆಯನ್ನು ಹೊಂದಿದ್ದರು. ಆ ಇಚ್ಛೆಯನ್ನು

ಪೂರೈಸಲು ನಾವು ಸತತ ಪ್ರಯತ್ನ ಮಾಡುತ್ತಿದ್ದೆವು. ಅವರ ೭೯ನೇ ಹುಟ್ಟು ಹಬ್ಬದಂದು ಇದನ್ನು ಬಿಡುಗಡೆ ಮಾಡುತ್ತಿದ್ದೇವೆ. ಈ ಗ್ರಂಥ ರಚನೆಯು ಸಂಕ್ಷಿಪ್ತವಾಗಿದ್ದರೂ ಬುದ್ಧರ ಮೂಲ ತತ್ವಗಳ ಮೇಲೆ ನಿಂತಿದೆ. ಉಪಾಸಕ- ಉಪಾಸಕಿಯರನ್ನು ಎಡೆಬಿಡದೇ ಬೌದ್ಧ ಮಾರ್ಗದಲ್ಲಿ ಕೊಂಡೊಯ್ಯಲು ಸಹಾಯಕವಾಗುತ್ತದೆ. ಪ್ರತಿನಿತ್ಯ ಜೀವನಕ್ಕೆ ಬೇಕಾದ ಇಂತಹ ಬೌದ್ಧ ಕೃತಿ ಮೊದಲಿಗೆ 'ಬೌದ್ಧ ಜೀವನ' ವೆಂಬ ಶೀರ್ಷಿಕೆಯಲ್ಲಿ ಇದೇ ಲೇಖಕರಿಂದ ರಚನೆ ಹೊಂದಿತ್ತು. ಇದು ಅದರ ಎರಡನೆಯ ಮುದ್ರಣ. ಅನೇಕ ತಿದ್ದುಪಡಿಗಳನ್ನೂ ಮಾಡಲಾಗಿದೆ. ಧಮ್ಮದ ತಿರುಳು, ಸಂಸ್ಕಾರದ ಅರಿವು, ಪೂಜಾ ವಿಧಿ, ನಿಯಮ ನೀತಿಯ ಸಾಧನೆ, ಈ ಚಿಕ್ಕ ಹೊತ್ತಿಗೆಯಲ್ಲಿ ಉಪಾಸಕ ಶ್ರೀ ನಂದನರವರು ಸಮರ್ಪಕವಾಗಿ ಮೂಡಿಸಿದ್ದಾರೆ. ಅವರ ೬೦೦ಪುಟಗಳ ಮತ್ತೊಂದು ಗ್ರಂಥ ''ಬುದ್ಧ ಚರಿತೆ ಮತ್ತು ಧಮ್ಮಸಾರ'' ತಯಾರಾಗಿದ್ದು ಸಾಧ್ಯವಾದಷ್ಟು ಬೇಗನೆ ಪ್ರಕಟಿಸಲು ಪ್ರಯತ್ನ ಕೂಡ ಪಡುತ್ತಿದ್ದೇವೆ. ಈ ರೀತಿಯ ಕಾರ್ಯವನ್ನು ಅವರು ಇನ್ನೂ ಹೆಚ್ಚು ಹೆಚ್ಚು ಮಾಡಲೆಂದು ತ್ರಿರತ್ನದಲ್ಲಿ ಪ್ರಾರ್ಥನೆ.

'ಸಬ್ಬದಾನಂ ಧಮ್ಮ ದಾನಂ ಜಿನಾತಿ' ಎಂದರೆ, ಎಲ್ಲ ದಾನಗಳಲ್ಲಿ ಧಮ್ಮದಾನವು ಶ್ರೇಷ್ಠವಾದುದು. ಇತರ ಬೌದ್ಧ ದೇಶಗಳಲ್ಲಿ ಮನೆಯಲ್ಲಿ ನಾಮಕರಮ, ಮದುವೆ, ಗೃಹ ಪ್ರವೇಶ ಅಥವಾ ಯಾರಾದರೂ ತೀರಿಕೊಂಡಾಗ ಅಥವಾ ಮತ್ತಾವುದೇ ಸಂದರ್ಭದಲ್ಲಿ ಜನರು ಆ ಸಂದರ್ಭದ ಹೆಸರಿನಲ್ಲಿ ಧರ್ಮ ಪುಸ್ತಕಗಳನ್ನು ಪ್ರಕಟಿಸಿ ಹಂಚುತ್ತಾರೆ. ಆ ಪದ್ಧತಿ ಇಲ್ಲಿಯೂ ಹರಡಬೇಕು.

ಖ್ಯಾತ ಕಲಾವಿದರಾದ ಶ್ರೀ ಸಿ. ಚಂದ್ರಶೇಖರರವರು ಬಹಳ ಉತ್ಸುಕತೆಯಿಂದ ಈ ಪುಸ್ತಕದೊಂದಿಗೆ ಹತ್ತು ಪುಸ್ತಕಗಳ ಮುಖಪುಟಗಳನ್ನು ರಚಿಸಿದ್ದಾರೆ. ಅವರಿಗೂ ಅನೇಕ ಧನ್ಯವಾದಗಳು. ಕಂಪ್ಯೂಟರ್ ಕೆಲಸಗಾರರಾದ ಗಿರಿಯಪ್ಪನವರಿಗೆ ಅನಂತ ಧನ್ಯವಾದಗಳು. ಅವರೆಲ್ಲರೂ ಬುದ್ಧರ ಆಶೀರ್ವಾದದಿಂದ ಸುಖದಿಂದಿರಲಿ !

ಕನ್ನಡ ಜನತೆ ಈ ಪುಸ್ತಕಗಳ ಉಪಯೋಗ ಪಡೆಯಲಿ, ಬಾಳು ಹಸನಾಗಲಿ ಎಂದು ಹಾರೈಸುತ್ತೇವೆ.

**ಪೂಜ್ಯ ಆಚಾರ್ಯ ಬುದ್ಧರಕ್ಷಿತರವರ ಹುಟ್ಟುಹಬ್ಬ**
ಹೋಳಿ ಹುಣ್ಣಿಮೆ
೧೯-೩-೨೦೦೦

ಪ್ರಕಾಶಕರು,
ಮಹಾಬೋಧಿ ಸೊಸೈಟಿ,
ಬುದ್ಧವಚನ ಟ್ರಸ್ಟ್, ಬೆಂಗಳೂರು.

**ಸುಖೋ ಬುದ್ಧಾನಂ ಉಪ್ಪಾದೋ,**
**ಸುಖಾ ಸದ್ಧಮ್ಮದೇಸನಾ,**
**ಸುಖಾ ಸಂಘಸ್ಸ ಸಾಮಗ್ಗಿ,**
**ಸಮಗ್ಗಾನಂ ತಪೋ ಸುಖೋ.**

ಬುದ್ಧರ ಹುಟ್ಟುವಿಕೆಯು ಮಂಗಳ,
ಸದ್ಧರ್ಮದ ಬೋಧನೆಯು ಮಂಗಳ
ಸಂಘದ ಒಗ್ಗಟ್ಟು ಮಂಗಳ,
ಸತ್ಯಸಾಧಕರ ಐಕ್ಯಮತ್ಯದ ಆಧ್ಯಾತ್ಮಿಕ ಸಾಧನೆಯು ಮಂಗಳವು.

# ಪರಿವಿಡಿ

## ಪರಿಚ್ಛೇದ - 1

ಬುದ್ಧ ಚರಿತ್ರೆ

1 ಬುದ್ಧ 9

2 ಧಮ್ಮ 15

3 ಸಂಘ 22

ಪರಿಚ್ಛೇದ - 2

1 ಪೂಜಾಪಾಠ 25

2 ಪಂಚಶೀಲಗಳು 27

3 ಅಷ್ಟಶೀಲಗಳು 27

4 ಬುದ್ಧಪೂಜಾವಿಧಿ 29

5 ಬುದ್ಧವಂದನೆ 31

6 ಧಮ್ಮವಂದನೆ 32

7 ಸಂಘ ವಂದನೆ 33

8 ಹೂವಿನ ಪೂಜೆ 34

9 ಪ್ರದೀಪ ಪೂಜೆ 35

10 ಸುಗಂಧ ಪೂಜೆ 35

11 ಧೂಪಪೂಜೆ 35

12 ಆಹಾರ ಪೂಜೆ 35

13 ಬೋಧಿ ವಂದನೆ 36

14 ಚೈತ್ಯ ವಂದನೆ 36

15 ಕ್ಷಮಾಯಾಚನೆ 37

16 ಆಚರಣೆಯ ಪೂಜೆ 37

17 ಪುಣ್ಯಾನುಮೋದನೆ 37

18 ಗತಿಸಿದ ಬಂಧುಗಳಿಗೆ ಪುಣ್ಯದಾನ 38

19 ಮರಣಾನುಸ್ಸತಿ ಭಾವನಾ 38

20 ಪರಿತ್ರಾಣದ ಆರಂಭ 39

21 ರತನ ಸುತ್ತ 40

22 ಮಹಾಮಂಗಳ ಸುತ್ತ 47

23 ಕರಣೀಯಮೆತ್ತಾ ಸುತ್ತ 50

24 ಮಹಾಜಯಮಂಗಳ ಗಾಥಾ 52

25 ಜಯಮಂಗಳ ಗಾಥಾ 55

26 ಪರಿತ್ರಾಣದ ಅಂತ್ಯ 59

**ಪರಿಚ್ಛೇದ - 3**

1 ದಾನ 60

2 ಶೀಲ 61

3 ಭಾವನಾ 62

4 ಆನಾಪಾನಾಸತಿ 63

5 ಮೈತ್ರಿಧ್ಯಾನ 63

**ಪರಿಚ್ಛೇದ-4**

**ಬೌದ್ಧ ಸಂಸ್ಕಾರ ವಿಧಿ** **65**

1 ಗರ್ಭಮಂಗಲ ಸಂಸ್ಕಾರ 65

2 ಜನ್ಮ ಸಂಸ್ಕಾರ 66

3 ನಾಮಕರಣ 67

4 ಅನ್ನಪ್ರಾಶನ68

5 ಕೇಶಕಂಪನ ಅಥವಾ ಮಂಡನ ಸಂಸ್ಕಾರ 69

6 ಕರ್ಣಭೇಧನ ಸಂಸ್ಕಾರ 69

7 ವಿಜ್ಞಾರಂಬ ಸಂಸ್ಕಾರ 70

8 ಸಾಮಣೇರ ಪಬ್ಬಜ್ಜ ದೀಕ್ಷಾ ಸಂಸ್ಕಾರ 70

9 ವಿವಾಹ ಸಂಸ್ಕಾರ 72

- ವಿವಾಹ ಸಂಬಂಧ73
- ಕನ್ಯಾ ನಿಶ್ಚಯ (ಸಗಾಯಿ) 74
- ವಿವಾಹ ಮಂಗಲ ಪತ್ರ 74
- ವಿವಾಹ ಪರಿಗ್ರಹಣ 75
- ಮಂಗಲ ಸ್ನಾನ 75
- ಬುದ್ಧ ಪೂಜೆ 75
- ಮಂಗಳ ಕಾರ್ಯ 76
- ವರನ ಕರ್ತವ್ಯ 77
- ವಧುವಿನ ಕರ್ತವ್ಯ 78

10 ಉಪಸಂಪದ 81

11 ದಾಹಕಮ್ಮ 82

12 ಮತಕ ಭತ್ತ 85

**ಪರಿಚ್ಛೇದ-5**

**ಬೌದ್ಧರ ನೀತಿ ನಿಯಮಗಳು ಮತ್ತು ಕುರುಹುಗಳು**

1 ಜನ್ಮ ದಿನಾಚರಣೆ 87

2 ಮೃತ ಮಾತಾಪಿತರ ಮತ್ತು ಹಿರಿಯರ ಪುಣ್ಯದಿನ 87

3 ಮನೆತರ ಹಾಕುವುದು 87

4 ಗೃಹ ಪ್ರವೇಶ 88

5 ಮಂಗಳ ಸೂತ್ರ 89

| | | |
|---|---|---|
| 6 | ಅರಿಶಿಣ ಕುಂಕುಮ | 89 |
| 7 | ಬೌದ್ಧರ ಸಂಕಲ್ಪ | 89 |
| 8 | ಬೌದ್ಧರ ಪ್ರತಿಜ್ಞೆಗಳು | 90 |
| 9 | ಬೌದ್ಧರ ತತ್ವ | 90 |
| 10 | ಬೌದ್ಧರ ತಿಳುವಳಿಕೆ | 91 |
| 11 | ಬೌದ್ಧರ ಅನಿಸಿಕೆಗಳು | 91 |
| 12 | ಬೌದ್ಧರ ವಿಚಾರ | 91 |
| 13 | ಬೌದ್ಧರ ನಂಬಿಕೆ | 91 |
| 14 | ಬೌದ್ಧರ ಸತ್ಯ | 91 |
| 15 | ಬೌದ್ಧರ ಗುರಿ | 91 |
| 16 | ಬೌದ್ಧರ ಆಲೋಚನೆ | 91 |
| 17 | ಬೌದ್ಧರ ಪೂಜಾ ಸ್ಥಳಗಳು | 91 |
| 18 | ಬೌದ್ಧರ ಧರ್ಮಗ್ರಂಥಗಳು | 92 |
| 19 | ಬೌದ್ಧರ ಧರ್ಮ ಚಿನ್ಹೆ | 92 |
| 20 | ಬೌದ್ಧ ಧ್ವಜ | 92 |
| 21 | ಬೌದ್ಧ ಮಹಾರಾಜರು | 92 |
| 22 | ಬೌದ್ಧ ರಮಣಿಯರು | 92 |
| 23 | ಬೌದ್ಧ ಬಿಕ್ಕು | 92 |
| 24 | ಧಮ್ಮಾಚಾರಿ | 92 |
| 25 | ಬೌದ್ಧ ಉಪಾಸಕ- ಉಪಾಸಕಿಯರು | 93 |
| 26 | ಬೌದ್ಧರ ಆಹಾರ- ಪೇಯಗಳು | 93 |
| 27 | ಬೌದ್ಧ ಮೂರ್ತಿ | 93 |
| 28 | ಭಿಕ್ಕುಸ್ವಾಗತ | 94 |
| 29 | ಬೌದ್ಧ ಪದ್ಧತಿಯ ನಮಸ್ಕಾರಗಳು | 94 |
| 30 | ಬುದ್ಧ ವಿಹಾರಕ್ಕೆ ದರ್ಶನ | 95 |
| 31 | ಬೋಧಿ ದರ್ಶನ | 95 |
| 32 | ಸ್ತೂಪ ದರ್ಶನ | 95 |
| 33 | ಬೌದ್ಧರ ಯಾತ್ರಾ ಸ್ಥಳಗಳು | 96 |
| 34 | ಬೌದ್ಧರ ಮಹತ್ವದ ಸ್ಥಳಗಳು | 96 |
| 35 | ಬೌದ್ಧರ ಹಬ್ಬ ಉತ್ಸವಗಳು | 96 |
| **ಬೌದ್ಧ ಮಕ್ಕಳಿಗಿಡುವ ನಾಮಾಂಕಿತಗಳು** | | |
| | ಬೌದ್ಧ ಮಗನಿಗೆ | 101 |
| | ಬೌದ್ಧ ಮಗಳಿಗೆ | 103 |
| ಅಟ್ಠವೀಸತಿ ಪರಿತ್ತಂ | | 104 |
| ಇಪ್ಪತ್ತೆಂಟು ರಕ್ಷಣೆಗಳು | | 105 |

## ಲೇಖಕರು

ಮಹಾ ಉಪಾಸಕರಾದ ಶ್ರೀ ವೈ.ಬಿ.ನಂದನ ಇವರು ಉಚ್ಚಪದವಿ ಪಡೆದು ಭಾರತ ಸರ್ಕಾರದ ಹುದ್ದೆಯಿಂದ ನಿವೃತ್ತರಾಗಿ ನ್ಯಾಯಾಲಯಗಳಲ್ಲಿ ವಕೀಲ ವೃತ್ತಿ ಮಾಡಿ ಔದ್ಯಮಗಳ ಸಂಸ್ಥಾಪಕರಾಗಿದ್ದಾರೆ. ಬುದ್ಧನ ಉಪದೇಶದಂತೆ ಶೀಲ, ಸಮಾಧಿ, ಪ್ರಜ್ಞೆಗಳ ಪಾಲನೆ ಮಾಡಲು ಪ್ರಯತ್ನಿಸುತ್ತಿದ್ದಾರೆ. ಆರ್ಥಿಕ, ಸಾಮಾಜಿಕ, ಅಧ್ಯಾತ್ಮಿಕ ಪರಿಳಿತಗಳನ್ನು ಬುದ್ಧ ಶಾಸನದಿಂದ ತಿದ್ದಲು ಸಾಧ್ಯವೆಂದು ನಂಬಿದವರು. ಬುದ್ಧ ಧಮ್ಮವನ್ನು ಆಳವಾಗಿ ಅಭ್ಯಸಿಸಿ ಶ್ರದ್ಧೆ ಸಾಧನೆ ಮತ್ತು ಪ್ರಚಾರದಲ್ಲಿ ಮುಂದೆ ಸಾಗಿದ್ದಾರೆ. ಮುಂಬರುವ ದಿನಗಳಲ್ಲಿ ಅವರ ಮತ್ತೊಂದು ಪುಸ್ತಕ ''ಬುದ್ಧ ಚರಿತೆ ಮತ್ತು ಧಮ್ಮಸಾರ'' ಪ್ರಕಟವಾಗಲಿದೆ.

### ಪರಿಚ್ಛೇದ - 1

# ಬುದ್ಧ ಚರಿತ್ರೆ

## ಬುದ್ಧ

ಸುಮಾರು ಇಪ್ಪತ್ತೈದು ಶತ ವರ್ಷಗಳ ಹಿಂದೆ ಭರತಖಂಡದ ಉತ್ತರ ಭಾಗದಲ್ಲಿ ಶಾಕ್ಯ ರಾಜನಾದ ಶುದ್ಧೋದನನು ರಾಜ್ಯ ಆಳುತ್ತಿದ್ದನು. ಆತನಿಗೆ ಮಹಾಮಾಯೆ ಮತ್ತು ಪ್ರಜಾಪತಿಯೆಂಬ ಇಬ್ಬರು ರಾಣಿಯರು ಇದ್ದರು. ರಾಜರಾಣಿಯರು ಪರಿಶುದ್ಧ ಜೀವನ ಸಾಗಿಸುತ್ತಿದ್ದರು. ಒಂದು ದಿನ ಮಹಾಮಾಯೆ ಸುಂದರ ಸ್ವಪ್ನ ಕಂಡಳು. ಒಂದು ಬಿಳಿ (ಆನೆ) ಅವಳ ಉದರ ಸೇರಿತಂತೆ ಜ್ಞಾನಿಗಳು ಸ್ವಪ್ನದ ಅರ್ಥ ಮಾಡುತ್ತ ಮಹಾರಾಣಿಯು ಒಬ್ಬ ಸರ್ವೋತ್ತಮ ಪುತ್ರನಿಗೆ ಜನ್ಮವೀಯುವಳೆಂದು ನುಡಿದರು. ಅಂದಿನಿಂದ ರಾಣಿ ಗರ್ಭವತಿಯಾದಳು. ತಿಂಗಳುಗಳು ಒಂಭತ್ತು ತುಂಬುತ್ತಿದ್ದಂತೆ ಕಂದನನ್ನು ಹೆರಲು ರಾಣಿಯು ತನ್ನ ನೆರೆಯ ರಾಜಧಾನಿ ತವರೂರನ್ನು ಹಂಬಲಿಸಿದಳು.

ದಾರಿಯುದ್ದಕ್ಕೂ ಚದುರಂಗ ಸವಾರರನ್ನು ಮೇಣೆಯ ಎಡಬಲದಲ್ಲಿ ದಾಸಿ, ಪರಿಚಾರಿಕೆಯರನ್ನು ಹೊಂದಿ ಹೋಗುವಾಗ ಚೊಚ್ಚಲು ಬಸುರಿನ ಮಾಯೆಯು ಸುಂದರ ಲುಂಬಿಣಿ ವನವನ್ನು ಕಂಡಳು. ಆ ಬಾಲೆ ಹೂಮರದ ಚೆಲ್ಲಾಟವನ್ನು ಬಯಸಲು ಮೇಣೆಯನ್ನು ಕೆಳಗಿಳಿಸಿದರು. ರಾಣಿ ಹೊರಬಂದು ವನಸಿರಿಯ ಸೊಬಗನ್ನು ಸವಿಯುತ್ತಾ, ನಲಿಯುತ್ತ, ಆ ರಮಣೀಯ ಮರದ ರೆಂಬೆಯನ್ನು ಹಿಡಿದು ಜೀಕಾಡುತ್ತಲೇ ಸುಪುತ್ರನಿಗೆ ಜನ್ಮವಿತ್ತಳು. ಕೂಡಲೇ ಏಳು ಹೆಜ್ಜೆಗಳನ್ನು ಕಂದನು ನಡೆದನಂತೆ.

ಹೂಬಳ್ಳಿಗಳ ಪರಿಮಳ ಸೂಸುತ್ತ ಗಾಳಿಯಲ್ಲಿ ಉದುರಿದವು ಪುಷ್ಪಾಂಕುರಗಳು. ದುಂಬಿಗಳ ಸುಮಧುರ ದನಿ ಮೊಳಗಿದವು ಮಂಗಳ ವಾದ್ಯಗಳನು. ಅಲ್ಲಿಂದಲೇ ಮರಳಿದಳು ಮಹಾಮಾಯೆ, ಕಂದನೊಂದಿಗೆ ತನ್ನೊಡೆಯನತ್ತ. ಮಹಾರಾಜನು ಪುರವನ್ನೆಲ್ಲ ಸಿಂಗರಿಸಿ ಜ್ಞಾನಿಗಳನ್ನು

ಕರೆಯಿಸಿ ರಾಜಕುವರನಿಗೆ ಸಿದ್ಧಾರ್ಥನೆಂದು ನಾಮಾಂಕಿತಗೈದರು. ಮಾತೆಯಾದ ರಾಣಿ ಮಹಾಮಾಯೆಯು ಏಳನೆ ದಿನಕ್ಕೆ ಮಡಿದು ಹೋದಳು.

ಚಿಕ್ಕಮ್ಮ ಪ್ರಜಾಪತಿ ಸಿದ್ಧಾರ್ಥನಿಗೆ ಮೊಲೆ ಉಣ್ಣಿಸುತ್ತಿರಲು ರಾಜನು ಸಕಲ ಕ್ಷಾತ್ರ ವಿದ್ಯೆಯನ್ನು ನೀಡುತ್ತಿದ್ದನು. ಆದರೆ ಬಾಲಕ ಸಿದ್ಧಾರ್ಥನು ಪ್ರಾಣಿ ಹಿಂಸೆ ಮಾಡದೇ ಕರುಣೆಯನ್ನೇ ಅನುಸರಿಸುತ್ತಿದ್ದನು. ಆತನು ವಯಸ್ಸಿನಲ್ಲಿ ಹದಿನಾರು ಮೀರುತ್ತಲೆ ಸುರ ಸುಂದರಿ ಯಶೋದರೆಯೆಂಬ ರಾಜಕುವರಿಯನ್ನು ಸ್ವಯಂವರದಲ್ಲಿ ಅವಳ ಕೈ ಹಿಡಿದನು. ರಾಜಕುಮಾರನಿಗೆ ಯಾವ ದುಃಖ ಬಾರದಂತೆ ಮಹಾರಾಜನು ಋತುವಿಗೆ ಒಂದರಂತೆ ಮೂರು ಅರಮನೆಗಳನ್ನು ನಿರ್ಮಿಸಿದನು. ಸಭಾಂಗಣಗಳೆಲ್ಲ ಸದಾ ಮಧುರ ಸಂಗೀತ ಬೀರುತ್ತಿದ್ದಂತೆ, ಸುಂದರಾಂಗನೆಯರು ನೃತ್ಯ-ಗಾನವನ್ನು ಮಾಡುತ್ತಿದ್ದರು. ಸಿದ್ಧಾರ್ಥನು ಸುಂದರ ಸತಿಯಲ್ಲಿ ರತಿ ಹೊಂದುತ್ತಿದ್ದನು. ರಾಜವೈಭವ, ವಿಲಾಸ, ಭೋಗ ಸುಖದ ಸುಪ್ಪತಿಗೆಯಲ್ಲಿದ್ದಾಗ್ಯೂ ಲೋಕದಲ್ಲಿ ಹುಟ್ಟು, ಮುಪ್ಪು, ವ್ಯಾಧಿ, ಮರಣಗಳನ್ನು ಕಂಡಾಗಲೆಲ್ಲ ಆತನ ಜೀವ ಭುಗಿಲ್ಲೆನ್ನುತ್ತಿತ್ತು. ಸಮಾಜದಲ್ಲಿ ಬಡತನ, ಜಾತಿ, ಭೇದ, ಏರು-ಪೇರು, ನೀತಿ-ನೆಲ-ಜಲಕ್ಕಾಗಿ ಕಿತ್ತಾಟ, ತಾನು-ತನ್ನದೆಂಬ ಭ್ರಮೆಯಿಂದ ವ್ಯಾಜ್ಯ, ಯುದ್ಧ ಸಮರಗಳನ್ನು ಅನುಭವಿಸಿದಾಗ ಜೀವನದಲ್ಲಿ ಜುಗುಪ್ಸೆ ತರುತ್ತಿತ್ತು. ಲೋಕವೆಲ್ಲ ಅನಾಗರೀಕ ಕತ್ತಲೆಯಲ್ಲಿ ಮುಳುಗಿತ್ತು. ಇದನ್ನು ಅರಿತು ಮಾನಸಿಕ ಅಸಮಾಧಾನವನ್ನು ಹೊಂದುತ್ತಿದ್ದನು. ಈ ದುಃಖ ನಿವಾರಣೆಗೆ ಪರಿಹಾರ ಹುಡುಕಲು ಆತನ ಮನಸ್ಸು ಹಾತೊರೆಯುತ್ತಿತ್ತು. ಆ ಸಮಯಕ್ಕೆ ಸಿದ್ಧಾರ್ಥ - ಯಶೋಧರೆಯರಿಗೆ ಒಂದು ಗಂಡುಮಗು ಜನಿಸಿತು. ಆ ಮಗುವಿಗೆ ರಾಹುಲನೆಂದು ನಾಮಕರಣ ಮಾಡಿದರು. ಆಗ ಸಿದ್ಧಾರ್ಥನಿಗೆ ಇಪ್ಪತ್ತರ ಮೇಲೆ ಒಂಭತ್ತು ವರ್ಷ.

ತಾನು ಮತ್ತು ತನ್ನ ಸುಂದರ ಸತಿ-ಸುತರು, ತಂದೆ-ತಾಯಂದಿರು, ಬಂಧು-ಭಗಿನಿಯರು, ಸಕಲ ಮಾನವರು ಜಾತಿ, ಜರಾ, ವ್ಯಾಧಿ, ಮರಣವನ್ನು ಅಸಹಾಯಕರಾಗಿ ಅಪ್ಪಿಕೊಳ್ಳುತ್ತಾರೆ. ವರ್ಣ, ಜಾತಿ, ಕರ್ಮಗಳೆಲ್ಲ ಬ್ರಹ್ಮ ನಿರ್ಮಿತವೆಂದೂ ಮಾನವನಿಗೆ ಅದಾವ ಸ್ವಾತಂತ್ರ್ಯ

ಇಲ್ಲವೆಂದೂ ಅಜಾಗೃತ ಸ್ಥಿತಿಯೇ ಮಾನವನಿಗೆ ಗತಿಯೆಂದು ಅಲ್ಲಿಯವರೆಗೆ ನಡೆದುಬಂದ ದಾರಿಯಾಗಿತ್ತು. ಆದರೆ ಸಿದ್ಧಾರ್ಥನ ಮನಕ್ಕೆ ಇದಾವುದೂ ಒಪ್ಪಿಗೆಯಾಗಲಿಲ್ಲ. ಈ ದುಃಖ ನಿವಾರಣೆಗೆ ಪರಿಹಾರವಿದೆಯೇ ಎಂಬ ಬಗ್ಗೆ ಪದೇ ಪದೇ ಅವಲೋಕಿಸುತ್ತಿದ್ದನು. ಸಂಸಾರದ ವ್ಯಾಮೋಹದಲ್ಲಿ ಮುಳುಗಿದ್ದಾಗಲೆಲ್ಲ ಅದಾವ ಬಗೆ ಗೋಚರಿಸುತ್ತಿರಲಿಲ್ಲ. ಆದ್ದರಿಂದ ಈ ವ್ಯಾಮೋಹವನ್ನು ತ್ಯಾಗ ಮಾಡಿದರೆ ಮಾತ್ರ ದುಃಖ ನಿವಾರಣೆ ಮಾರ್ಗದ ಜ್ಞಾನ ಸಾಧ್ಯವೆಂದು ದೃಢವಾಗಿ ನಿಶ್ಚಯಿಸಿದನು. ಒಂದು ಹುಣ್ಣಿಮೆಯ ಮಧ್ಯರಾತ್ರಿಯಲ್ಲಿ ಮಡದಿ-ಮಗನ ಮುಖಗಳನ್ನು ನೋಡಿ ಅರಮನೆಯಿಂದ ಹೊರಬಿದ್ದನು. ರಾಜ್ಯ, ಸಿಂಹಾಸನ, ಕೋಟೆ-ಕೊತ್ತಲ, ಚದುರಂಗ ಸೈನ್ಯವೆಲ್ಲತೊರೆದು ಕಂಠಕ ಕುದುರೆಯನ್ನು ಏರಿ ರಾಜಧಾನಿ ಸೀಮೆಯನ್ನೆಲ್ಲ ದಾಟಿ ಹೋದನು. ನದಿ ತಟದ ಮೇಲೆ ಕುಳಿತು ಖಡ್ಗದಿಂದ ತನ್ನ ತಲೆಕೂದಲನ್ನು ಕತ್ತರಿಸಿದನು. ವಜ್ರವೈಢೂರ್ಯಗಳನ್ನೆಲ್ಲ ಮೈಮೇಲಿನಿಂದ ತೆಗೆದನು. ಪೀತಾಂಬರ ವಸ್ತ್ರ ಧರಿಸಿ ಬುದ್ಧನಾಗುವವರೆಗೆ, ತಿರುಗುವುದಿಲ್ಲವೆಂದು ಪ್ರತಿಜ್ಞೆಗೈದನು. ಆಧ್ಯಾತ್ಮವನ್ನು ಅನುಸರಿಸುತ್ತ ಸನ್ಮಾರ್ಗದಲ್ಲಿ ಸಾಗಿದನು.

ಹಾದಿಯುದ್ದಕ್ಕೂ ಮುನಿ-ಸಾಧು-ಸತ್ಪುರುಷರನ್ನು ಭೇಟಿಯಿಟ್ಟನು. ಆಲಾರಕಾಲಾಮ ಮತ್ತು ಉದ್ಧಕರಾಮಪುತ್ರ ಮಹಾಜ್ಞಾನಿಗಳನ್ನು ಗುರುಗಳನ್ನಾಗಿ ಒಪ್ಪಿದನು. ಜ್ಞಾನಸಾಗರದ ವಿದ್ಯೆಯನ್ನು, ಸಕಲ ಸಾಮರ್ಥ್ಯವನ್ನು ನೀಡಿದರು. ಆದರೆ ದುಃಖದ ಮೂಲ ಮತ್ತು ದುಃಖದ ನಿರ್ಮೂಲನ ವಿಧಾನದಲ್ಲಿ ಅವರಾರೂ ತಿಳಿಸಲು ಅಸಮರ್ಥರಾದರು. ಸಿದ್ಧಾರ್ಥನು ಅದಾವುದಕ್ಕೂ ನಿರಾಶೆ ಹೊಂದಲಿಲ್ಲ. ಕಪಿಲ ಮುನಿಯು ಶೋಧಿಸಿದ ಕಾರಣ-ಕಾರ್ಯದ ನಿಯಮದ ಮೇಲೆ ಸದಾ ವಿವೇಚಿಸುತ್ತಿದ್ದನು. ಪ್ರತಿ ವಸ್ತು, ಜೀವಿ ಒಂದಲ್ಲ ಒಂದು ಸ್ಥಿತಿಯನ್ನು ಅವಲಂಬಿಸಿಯೇ ಇದೆ. ಹಾಗೇ ದುಃಖವು ಸಹ ಒಂದು ಸ್ಥಿತಿಯನ್ನು ಅವಲಂಬಿಸಿರಬೇಕು. ಅಂತಹ ಸ್ಥಿತಿಯನ್ನು ಕಂಡುಕೊಳ್ಳಲೇಬೇಕೆಂದು ನಿಶ್ಚಯಿಸಿ ಮುಂದೆ ಸಾಗಿದನು. ಉರುವೇಲ ಪ್ರದೇಶ (ಬಿಹಾರ) ನಿರಂಜನ ತಟದ ಮೇಲಿದ್ದ ಗೊಂಡಾರಣ್ಯದಲ್ಲಿ ಕೆಲ ತಪಸ್ವಿಗಳನ್ನು ಕೂಡಿಕೊಂಡನು.

ಅಲ್ಲಿಯವರೆಗೆ ಕಂಡುಕೊಂಡ ಅವರು ದೀರ್ಘ ತಪಶ್ಚರ್ಯದಿಂದ ಮಾತ್ರ ಜ್ಞಾನೋದಯ ಸಾಧ್ಯವೆಂದು ಅದಕ್ಕಾಗಿ ಉಪವಾಸ-ವನವಾಸವನ್ನು ಆಚರಿಸುತ್ತಿದ್ದರು. ಅದೇ ರೀತಿ ಸಿದ್ಧಾರ್ಥನು ಸಹ ದಿನಕ್ಕೇ ಒಂದೇ ಬಾರಿ, ಎರಡು ದಿನಕ್ಕೊಮ್ಮೆ, ಮೂರು ದಿನಕ್ಕೆ ಒಂದು ಸಲ, ವಾರಕ್ಕೊಮ್ಮೆ ಆಹಾರ ಸೇವಿಸ ಹತ್ತಿದನು. ಹೊಟ್ಟೆಹಸಿವಿನ ನೋವು ಆದಾಗಲೆಲ್ಲ ಒಂದೊಂದೇ ಧಾನ್ಯದ ಕಾಳನ್ನು ಒಂದೊಂದೇ ಎಲೆ ಬೇರುಗಳನ್ನು ಬಾಯೊಳಗೆ ಹಾಕಿಕೊಳ್ಳುತ್ತಿದ್ದನು. ಅತೀ ಚಳಿಯಲ್ಲಿ, ಮಳೆಯಲ್ಲಿ, ಬಿಸಿಲಿನಲ್ಲಿ ಮೈಮೇಲಿನ ಬಟ್ಟೆಗಳನ್ನು ತೆಗೆದು ಲಂಗೋಟಿ ತೊಟ್ಟಿರುತ್ತಿದ್ದನು. ಕತ್ತಲೆ ದಿನ ಸ್ಮಶಾನದಲ್ಲಿ ತಿರುಗುತ್ತ, ಕುಳಿತಿರುತ್ತ, ಮಲಗುತ್ತ ಇರುತ್ತಿದ್ದನು. ಹೆಣಗಳ ತಲೆಬುರುಡೆ, ಎಲುಬಿನ ಹಂದರಗಳನ್ನು ತಲೆದಿಂಬಾಗಿ ಇರಿಸಿಕೊಳ್ಳುತ್ತಿದ್ದನು. ದಟ್ಟ ಅರಣ್ಯರಲ್ಲಿ ಕ್ರೂರ ಪ್ರಾಣಿಗಳು ಗುಡುಗು ಹಾಕುತ್ತಿದ್ದರೆ ಹಾವು-ಚೇಳುಗಳ ಸರ-ಸರ ಶಬ್ದ ಮಾಡುತ್ತಿದ್ದವು. ಹೀಗೆ ಶರೀರಕ್ಕೆ ನಾನಾ ತರಹದ ಹಿಂಸೆಯನ್ನು ಕೊಡುತ್ತಿದ್ದವು. ಮನಸ್ಸಿನಲ್ಲಿ ಬರುವ ಭಯ, ಅಂಜಿಕೆ, ನೋವುಗಳನ್ನು ಅನುಭವಿಸುತ್ತಿದ್ದನು. ಅರಮನೆಯ ಸುಖದ ಸುಪ್ಪತ್ತಿಗೆ, ಬಂಧು-ಪರಿಜನರ ಮಮಕಾರ, ರಾಗ-ದ್ವೇಷ, ಮೋಹ ಸಿದ್ಧಾರ್ಥನನ್ನು ಪದೇ ಪದೇ ಜಗ್ಗುತ್ತಿದ್ದವು. ಅವುಗಳಿಂದ ಕೊಸರಿಕೊಂಡು ಅರಣ್ಯದಲ್ಲಿ ಕಳವಳ ಕಷ್ಟಪಡುತ್ತಿದ್ದನು. ಹಸಿವೆ, ನೀರಡಿಕೆಗಳಿಂದ ರಾಜಕುಮಾರನು ಮುನಿಯಾದ್ದರಿಂದ ಶರೀರವು ಸೊರಗಿ ಸಣ್ಣದಾಯಿತು. ಉದರದ ಮೇಲೆ ಕೈಯಾಡಿಸಿದಾಗ ಬೆನ್ನು-ಮೂಳೆ ನಿಲುಕುತ್ತಿತ್ತು. ಶಾರೀರಿಕ ಶಕ್ತಿ ಪೂರ್ತಿ ಲಯವಾಯಿತು. ನದಿಗೆ ನೀರಿಗಾಗಿ ಹೋದಾಗ ಜೋಲಿ ತಪ್ಪುತ್ತಿತ್ತು. ಗಿಡದ ಟೊಂಗೆಯ ಆಸರೆಯನ್ನು ಹಿಡಿದು ಒಂದು ಅರಳಿಮರದ ಅಡಿಯಲ್ಲಿ ಧ್ಯಾನಾರೂಢನಾಗಿ ಕುಳಿತುಕೊಂಡನು. ಈ ತರಹ ಘೋರ ತಪಶ್ಚರ್ಯ ಮಾಡಿದಾಗ್ಯೂ ದುಃಖ ನಿವಾರಣೆ ಮಾರ್ಗ ಸಿಕ್ಕಲಿಲ್ಲ.

ಒಂದು ದಿನ ಸುಜಾತೆಯೆಂಬ ಸ್ತ್ರೀಯು ಕುಲಧರ್ಮದಂತೆ ಅರಳಿಮರಕ್ಕೆ ಪೂಜಿಸುತ್ತಿದ್ದಳು. ಧ್ಯಾನಾರೂಢನಾಗಿದ್ದ ಕ್ಷೀಣಶರೀರ ಹೊಂದಿದ್ದ ಸಿದ್ಧಾರ್ಥ ಗೌತಮನಿಗೆ ತಾನು ತಂದ ಕ್ಷೀರ-ಮೃಷ್ಟಾನ್ನವನ್ನು

ಉಣಬಡಿಸಿದಳು. ಅದನ್ನು ಸೇವಿಸಿದಾಗ ಕಂದಿಹೋದ ಶರೀರಕ್ಕೆ ಕ್ರಮೇಣ ಬಲ ಬಂದಿತು. ಈ ಮಹತ್ತರ ಬದಲಾವಣೆಯಿಂದ ಮನಸ್ಸಿಗೂ ಸಮಾಧಾನ ದೊರೆಯಿತು. ಶರೀರಕ್ಕೆ ಅನ್ನ ನೀರು ಅವಶ್ಯಕವೆಂದು ಅರಳೀ ಮರದ ತನ್ನ ಧ್ಯಾನ ಸಾಧನೆಯನ್ನು ಮುಂದುವರೆಸಿದನು. ಒಳಗೂ-ಹೊರಗೂ ಸದಾ ಅಲೆಯುತ್ತಿದ್ದ ತನ್ನ ಉಸುರಿನ ಮೇಲೆ ಲಕ್ಷ್ಯವನ್ನು ಕೇಂದ್ರಿಕರಿಸಿದನು. ತಲೆಯಿಂದ ಪಾದದವರೆಗೂ ಅವಲೋಕಿಸುತ್ತಿದ್ದನು. ಮನಸ್ಸು ಪದೇ ಪದೇ ಅತ್ತಿಂದಿತ್ತ ಹಾರಾಡುತ್ತಿತ್ತು. ಶರೀರ-ಮನಸ್ಸುಗಳಲ್ಲಿಸದಾ ನಡೆಯುತ್ತಿರುವ ಬದಲಾವಣೆಗಳನ್ನು ಅರಿಯುತ್ತಿದ್ದನು. ಶರೀರ-ಮನಸ್ಸಿನ ಮೇಲೆ ಆಗುತ್ತಿರುವ ಸುಖ-ದುಃಖದ ಸ್ಥೂಲ-ಸೂಕ್ಷ್ಮ ಸಂವೇದನೆಗಳನ್ನು ಅನುಭವಿಸುತ್ತಿದ್ದನು. ಯಾವುದಕ್ಕೂ ಅಂಟಿಕೊಳ್ಳದೆ ಸಮತಾ ಭಾವನೆಯಲ್ಲಿ ಮನಸ್ಸನ್ನು ಇರಿಸಿದನು. ಬೋಧಿಪ್ರಾಪ್ತಿಯ ಕ್ಷಣವು ಸಮೀಪಿಸಿತು.

ಅಂದು ವೈಶಾಖ ಪೂರ್ಣಿಮೆಯ ದಿನ (ಆಗಿ ಹುಣ್ಣಿಮೆ) ತಂಪಾದ ಚಂದಿರನ ಬೆಳ್ಳನೆಯ ಬೆಳದಿಂಗಳು ಎಲ್ಲೆಡೆ ಹರಡಿತ್ತು. ಬ್ರಾಹ್ಮಣನೊಬ್ಬ, ತಯಾರಿಸಿಕೊಟ್ಟ ಹುಲ್ಲಿನ ಹಾಸಿಗೆ ಹಾಕಿ ಅರಳಿಮರದಡಿಯಲ್ಲಿ ಸಿದ್ಧಾರ್ಥ ಗೌತಮನು ''ಬೋಧಿ ಪ್ರಾಪ್ತಿಯಾಗುವವರೆಗೆ ಈ ಸ್ಥಾನ ಬಿಟ್ಟು ಎದ್ದೇಳುವುದಿಲ್ಲವೆಂದು ದೃಢ ಪ್ರತಿಜ್ಞೆ ಮಾಡಿ ಧ್ಯಾನಾರೂಢನಾದನು. ಒಂದನೆ ಝಾವದಲ್ಲಿ ಮಧ್ಯಮ ಮಾರ್ಗ ಕಂಡನು. ಶರೀರವನ್ನುದಂಡಿಸುವುದಾಗಲಿ ವಿಲಾಸ ಭೋಗದಿಂದಾಗಲಿ ದುಃಖದ ನಿವಾರಣೆ ಸಾಧ್ಯವಿಲ್ಲ. ಸಮಾನತೆಯಲ್ಲಿ ಮನಸ್ಸನ್ನು ಕ್ರೋಢೀಕರಿಸಿದರೆ ಸೌಖ್ಯ, ಸಾಧನೆಯನ್ನು ಮುಂದುವರಿಸಿದನು. ಎರಡನೆ ಝಾವದಲ್ಲಿ ಭೂತ-ಭವಿಷ್ಯತ್ಕಾಲ, ಸ್ಥೂಲ ಸೂಕ್ಷ್ಮದ ಪರಿಪೂರ್ಣ ಅರಿವಾಯಿತು. ಮೂರನೇ ಝಾವದಲ್ಲಿ ಸಕಲ ಮಾನವರ ದೇವತೆಗಳ ಜೀವಿಗಳ ಕರ್ಮಫಲದ ಅರಿವು ಆಯಿತು. ಜೀವಿಗಳಿಗೆ ಆಗುವ ಹುಟ್ಟು, ಮುಪ್ಪು, ವ್ಯಾಧಿ, ಮರಣಗಳ ಪರಿಪೂರ್ಣ ಅರಿವಾಯಿತು. ಕಾರಣ-ಕಾರ್ಯ ನಿಯಮದ ಸಾಕ್ಷಾತ್ಕಾರವಾಯಿತು. ಸಕಲ ವಸ್ತುಗಳ ಸಂಯೋಜನೆ ಮತ್ತು ವಿಂಗಡನೆ ಆಗುತ್ತಿರುವ ಬಗೆ ಅರಿವಾಯಿತು. ಲೋಕವು ಅನಿತ್ಯವಾದುದು, ಸದಾ ಬದಲಾವಣೆ ಹೊಂದುತ್ತಲೇ ಇದೆ. ಉತ್ಪತ್ತಿ ಆದದ್ದೆಲ್ಲ

ಮರೆಮಾಚುವುದು, ನಿಸರ್ಗವು ನಿಯಮ ನಿತ್ಯವಾದುದು ಎಂದು, ತಾನು-ತನ್ನದು ಎಂಬ ಮಮಕಾರದ ಭ್ರಮೆಗೆ ಅಜ್ಞಾನದಿಂದ ಉತ್ಪತ್ತಿಯಾದ ತೃಷ್ಣೆಯನ್ನು ಅಂಟಿಸಿಕೊಂಡಿರುವುದೇ ದುಃಖಕ್ಕೆ ಕಾರಣ. ಅಷ್ಟಾಂಗ ಮಾರ್ಗದಿಂದ ಈ ದುಃಖ ನಿವಾರಣೆಯಾಗುತ್ತದೆ. ಹೀಗೆ ದುಃಖ, ದುಃಖದ ಮೂಲ, ದುಃಖ ನಾಶ, ದುಃಖ ನಿವಾರಣೆ-ಮಾರ್ಗ ಹಿಂದೆದಂದೂ ದೇವ-ಮಾನವರಾಗಲಿ, ಋಷಿ ಮುನಿಗಳಾಗಲಿ ಕಂಡರಿಯದ ಪರಿಪೂರ್ಣ ಸತ್ಯವನ್ನು ಸಿದ್ಧಾರ್ಥ ಗೌತಮನು ತನ್ನ ಆಂತರಿಕ ಜ್ಞಾನಬಲದಿಂದ ಪಡೆದನು. ಈ ಬೋಧಿ ಪ್ರಾಪ್ತಿಯಿಂದ ಬೋಧಿಸತ್ವನು ''ಬುದ್ಧ''ನಾದನು. ಅದೇ ಸರ್ವಜ್ಞ, ಸರ್ವಾಂತರ್ಯಾಮಿ, ಸರ್ವಶಕ್ತ. ದೇವತೆಗಳಿಗೂ ಮಾನವರಿಗೂ ಗುರುವಾದನು.

ನೀನು ನಾನೆಂಬ ಭೇದವಿಲ್ಲ. ಅಂತ-ಅನಂತವೆಂಬುದಿಲ್ಲ. ಪ್ರಾರಂಭ-ಕೊನೆಯೆಂಬುದಿಲ್ಲ, ಚಿಕ್ಕದೂ-ದೊಡ್ಡದೂ ಒಂದೇ, ಹುಟ್ಟು-ಸಾವು ಒಂದೆ, ಸುಖ-ದುಃಖಗಳ ಅನುಭವ ಸಮಾನ ಜ್ಞಾನದಿಂದ ಉತ್ಪತ್ತಿಯಾಗುವಂಥ ಆಶೆಯಿಂದ ಮುಕ್ತಿಯನ್ನು ಹೊಂದಿ ನಿಬ್ಬಾಣ ಹೊಂದುವ ಬುದ್ಧ ತಾನಾದನು. ಬೋಧಿಸತ್ವನು ತನ್ನಹಿಂದಿನ ಸಹಸ್ರ ಕಲ್ಪಗಳಲ್ಲಿ ಮಾಡಿದ ಪುಣ್ಯದ ಹತ್ತುಪರಿಪೂರ್ಣಗಳ (ದಶ ಪಾರಮಿತ) ಫಲವಾಗಿ ಲಭಿಸಿದ ಬೋಧಿಯಿಂದ ಆಗುವ ಆತ್ಮಾನಂದವನ್ನು ಸಮತೆಯಲ್ಲಿರಿಸಿದನು. ಮಾನವ-ದೇವ-ಬ್ರಹ್ಮರ ಕಲ್ಯಾಣಕ್ಕೆ ದುಃಖ ನಿವಾರಣೆ ಮಾರ್ಗ ಅರುಹಿ ನಿಬ್ಬಾಣದತ್ತ ಕೊಂಡೊಯ್ಯಲು ಅನುಕಂಪಭರಿತನಾದನು. ಬೋಧಿಪ್ರಾಪ್ತಿಗೆ ಅರಳಿಮರ ಆಸರೆ ಆಗಿದ್ದಕ್ಕೆ ''ಬೋಧಿವೃಕ್ಷ''ವೆಂದು ಪರಿಗಣಿಸಿ ಕೃತಜ್ಞತಾ ಭಾವನೆಯಿಂದ ಏಳು ದಿನ ಎವೆಯಿಕ್ಕದೇ ನೋಡ್ತಾ ನೆನೆದನು. ಲೋಕ ಕಲ್ಯಾಣರ್ಥವಾಗಿ ತಾನು ಪಡೆದುಕೊಂಡ ಬೋಧಿಯನ್ನು ''ಧಮ್ಮ'' ದಾನವನ್ನು ದಯಪಾಲಿಸಲು ಅಲ್ಲಿಂದ ಸಾರನಾಥದತ್ತ ಹೊರಟನು. ಈ ಜ್ಞಾನಜ್ಯೋತಿಯೇ ಬುದ್ಧತ್ವ ಅದನ್ನು ಪಡೆದವನು ''ಬುದ್ಧ'' - ''ಬುದ್ಧಂ ಶರಣಂ ಗಚ್ಛಾಮಿ''.

# ಧಮ್ಮ

ತಾಯಿ ತನ್ನ ಮಗುವಿಗೆ ಮೊಲೆಯುಣಿಸುವ ಹಂಬಲದಂತೆ ಬುದ್ಧನು ಲೋಕಕ್ಕೆ ಧಮ್ಮದ ಹೊಳೆ ಹರಿಸಲು ಗಂಗಾ ತಟದಲ್ಲಿದ್ದ ಋಷಿ ಪಟ್ಟಣಕ್ಕೆ (ಸಾರನಾಥ) ತಲುಪಿದನು. ತನ್ನೊಡನೆ ಇದ್ದ ಐದು ತಪಸ್ವಿಗಳು ಜ್ಞಾನೋದಯವಾಗದೇ ಅಲೆದಾಡುತ್ತಿದ್ದರು. ಬುದ್ಧನ ದರ್ಶನವಾಗುತ್ತಲೇ ಅವರು ಕೈಮುಗಿದರು. ಬುದ್ಧನು ಅನುಕಂಪವನ್ನು ತೋರುತ್ತಾ ಧಮ್ಮವನ್ನು ಉಪದೇಶಿಸಿದನು. ಸಕಲ ದೇವ-ಮಾನವರು ದುಃಖದಿಂದ ಮುಕ್ತಿಹೊಂದಿ ನಿಬ್ಬಾಣದಲ್ಲಿ ನಲಿಯಲು ಇದೊಂದೇ ಮಾರ್ಗ. ಅದೇ ''ಧಮ್ಮ'' ಮಾರ್ಗ. ಮಧ್ಯಮ ಮಾರ್ಗ, ಸುವರ್ಣ ಮಾರ್ಗ, ಶೀಲ ಸಮಾಧಿ, ಪ್ರಜ್ಞೆಯಿಂದೊಂಡ ಗೂಡಿದ ಅಷ್ಟಾಂಗ ಮಾರ್ಗ. ಅಂದಿನ ಧರ್ಮಚಕ್ರ ಪ್ರವರ್ತನೆ ಇಂದಿಗೂ ನಡೆದಿದೆ.

**ಅ) ಮಧ್ಯಮ ಮಾರ್ಗ :- ಎರಡು ಅತಿರೇಕಗಳನ್ನು ತ್ಯಜಿಸುವುದು.**

೧) ಸದಾ ವಿಲಾಸ ಭೋಗದಲ್ಲಿ ನಲಿಯುವುದು, ಇದು ಲೌಕಿಕ, ಕ್ಷಣಿಕ ಸುಖ, ಹೀನವಾದುದು. ಅಜ್ಞಾನದಲ್ಲಿ ಮುಳುಗಿಸುವುದು.

೨) ಶರೀರಕ್ಕೆ ದಂಡಿಸುತ್ತ ತಪಶ್ಚರ್ಯ ಮಾಡುವುದು, ಇದರಿಂದ ಮನಸ್ಸು ಅಶಾಂತಿ, ಕಳವಳದಲ್ಲಿರುವುದು, ಜ್ಞಾನ ಸಾಧನೆಗೆ ತೊಡಕಾಗುವುದು.

ಇವೆರಡೂ ಅತಿರೇಕಗಳನ್ನು ತ್ಯಜಿಸಿ ಶರೀರ-ಮನಸ್ಸಿನ ಅವಶ್ಯಕತೆಗಳನ್ನು ಪೂರೈಸಿ ಸದಾ ಆರೋಗ್ಯವಾಗಿರಿಸಿಕೊಳ್ಳುವುದೇ ಮಧ್ಯಮ ಮಾರ್ಗ.

**ಆ) ನಾಲ್ಕು ಉತ್ಕೃಷ್ಟವಾದ ಸತ್ಯಗಳು : (ಚತ್ತಾರಿ ಅರಿಯ ಸಚ್ಚಾನಿ)**

ಬುದ್ಧ ಧಮ್ಮವು ಈ ನಾಲ್ಕು ಸತ್ಯಗಳ ಅಡಿಪಾಯದ ಮೇಲೆಯೇ ನಿಂತಿದೆ. ೧) ದುಃಖ ೨) ದುಃಖಕ್ಕೆ ಕಾರಣ ೩) ದುಃಖ ನಿರ್ಮೂಲನ ೪) ದುಃಖ ನಿರ್ಮೂಲನ ಮಾರ್ಗ.

**೧) ದುಃಖ** : ಹುಟ್ಟು ಮುಪ್ಪು, ವ್ಯಾಧಿ, ಮರಣ ಇವು ದುಃಖ. ಅಪ್ರಿಯರಿಂದ ಒಡಗೂಡಿರುವುದು, ಪ್ರಿಯರಿಂದ ಆಗಲಿರುವುದು, ತಾನು

ಇಚ್ಛಿಸಿದ್ದು ದೊರೆಯದೇ ಇರುವುದು, ದುಃಖ ಒಟ್ಟಿನಲ್ಲಿ ಶರೀರ-ಮನಸ್ಸುಗಳಿಗೆ ಅಂಟಿಕೊಂಡಿರುವುದೇ ದುಃಖ.

**೨) ದುಃಖಕ್ಕೆ ಕಾರಣ :-** (ದುಃಖ ಸಮುಪ್ಪಾದ) ಕಾಮ ತೃಷ್ಣೆ, ಭವ ತೃಷ್ಣೆ, ವಿಭವ ತೃಷ್ಣೆ, ಜೀವಿಗಳ ಶಾರೀರಿಕ ಆಕರ್ಷಣೆ, ತಾನು-ತನ್ನದೆಂಬ ವ್ಯಾಮೋಹ, ಶರೀರ-ಮನಸ್ಸುನಿತ್ಯವೆಂದು ತಪ್ಪು ಗ್ರಹಿಕೆಯಿಂದ ಉತ್ಪತ್ತಿಯಾದ ಆಶೆಯನ್ನು ಅಂಟಿಸಿ ಇಟ್ಟಿರುವುದೇ ದುಃಖಕ್ಕೆ ಕಾರಣ.

**೩) ದುಃಖ ನಿರ್ಮೂಲನ :** (ದುಃಖ ನಿರೋಧ) ಉತ್ಪತ್ತಿ ಆದದ್ದೆಲ್ಲ ಭಂಗವಾಗಲೇಬೇಕು. ದುಃಖವೂ ಸಹ ನಾಶವಾಗಲೇಬೇಕು.

**೪) ದುಃಖನಿವಾರಣೆ ಮಾರ್ಗ :** (ದುಃಖ ನಿರೋಧಗಾಮಿನೀ ಪಟಿಪದಾ) ಇದು ಅಷ್ಟಾಂಗ ಮಾರ್ಗದಿಂದ ಸಾಧ್ಯ

**ಇ) ಅಷ್ಟಾಂಗ ಮಾರ್ಗ**

| | |
|---|---|
| ೧) ಸಮ್ಮಾ ದಿಟ್ಠಿ (ಉತ್ತಮ ತಿಳುವಳಿಕೆ) | ಪ್ರಜ್ಞಾ |
| ೨) ಸಮ್ಮಾ ಸಂಕಪ್ಪ (ಉತ್ತಮ ವಿಚಾರ) | |
| ೩) ಸಮ್ಮಾ ವಾಚಾ (ಉತ್ತಮ ನುಡಿ) | ಶೀಲ |
| ೪) ಸಮ್ಮಾ ಕಮ್ಮಂತ (ಉತ್ತಮ ಕರ್ಮ) | |
| ೫) ಸಮ್ಮಾ ಆಜೀವ (ಉತ್ತಮ ಜೀವನೋಪಾಯ) | |
| ೬) ಸಮ್ಮಾ ವ್ಯಾಯಾಮ (ಉತ್ತಮ ಪ್ರಯತ್ನ) | ಸಮಾಧಿ |
| ೭) ಸಮ್ಮಾ ಸತಿ (ಉತ್ತಮ ಸತಿ ಎಚ್ಚರಿಕೆ) | |
| ೮) ಸಮ್ಮಾ ಸಮಾಧಿ (ಉತ್ತಮ ಸಮಾಧಿ) | |

| | | |
|---|---|---|
| ಉತ್ತಮ ತಿಳುವಳಿಕೆ | : | ದುಃಖ, ದುಃಖಮೂಲ, ದುಃಖ ನಿರ್ಮೂಲ ಮತ್ತು ದುಃಖ ನಿರ್ಮೂಲನ ಮಾರ್ಗ ನಾಲ್ಕು ಉತ್ಕೃಷ್ಟವಾದ ಸತ್ಯಗಳ ನೇರ ತಿಳುವಳಿಕೆ |
| ಉತ್ತಮ ವಿಚಾರ | : | ತ್ಯಾಗ, ಕರುಣೆ, ಮೈತ್ರಿಯಿಂದ ಕೂಡಿದ ವಿಚಾರ. |
| ಉತ್ತಮ ವಚನ | : | ಸುಳ್ಳನ್ನು ಆಡದೇ ಸದಾ ಸತ್ಯ ನುಡಿಯುವುದು |

ಬೈಗಳನ್ನಾಡದೇ ಪ್ರೇಮದ ಮಾತು ಮಾತನ್ನಾಡುವುದ. ಜಾಡಿ ನುಡಿಯದೇ ತಿಳುವಳಿಕೆ ಹೇಳುವುದು, ಹರಟೆ ಹೊಡೆಯದೇ ಉಪಯುಕ್ತವಾದುದ್ದನ್ನೇ ಚರ್ಚಿಸುವುದು.

ಉತ್ತಮ ಕರ್ಮ : ಪ್ರಾಣಿ ಹಿಂಸೆ ಮಾಡದೇ ದಯಾಸಾಗರ-ನಾಗಿರುವುದು, ಕಳ್ಳತನಮಾಡದೇ ದಾನಶೂರ-ನಾಗಿರುವುದು, ಕಾಮುಕ ಮಿತ್ಯಾಚಾರದಲ್ಲಿ ತೊಡಗದೇ ಪರಸ್ಪರ ಸ್ತ್ರೀ ಪುರುಷರು ಗೌರವಿಸುವುದು, ನಿಶೆ ಅಮಲಿನ ಪೇಯಗಳನ್ನು ಸೇವಿಸದೇ ಸದಾ ಜಾಗೃತನಾಗಿರುವುದು.

ಉತ್ತಮ ಜೀವನ : ಮದ್ದುಗುಂಡುಗಳನ್ನು, ವಿಷ-ಎಚ್ಚರ ತಪ್ಪಿಸುವ ಔಷಧಿ, ಮದ್ಯ, ಮಾಂಸ, ಕಟುಕತನಕ್ಕೆ ಪ್ರಾಣಿಗಳನ್ನು, ವ್ಯಭಿಚಾರಕ್ಕೆ ಸ್ತ್ರೀಯರನ್ನು ಕ್ರಯ-ವಿಕ್ರಯ ವ್ಯವಹಾರದಲ್ಲಿ ಎಂದೂ ತೊಡಗಿಸದೇ ಜೀವಿಸುವುದು.

ಉತ್ತಮ ಪ್ರಯತ್ನ : ಮನಸ್ಸಿನಲ್ಲಿ ಒಳ್ಳೆಯ ಸ್ಥಿತಿಯನ್ನು ಪಾಲಿಸಿ, ಇನ್ನೂ ಬೆಳೆಸಿಕೊಳ್ಳುವುದು; ಒಳ್ಳೆಯ ಸ್ಥಿತಿ ಇಲ್ಲದಿದ್ದರೆ ಅದನ್ನು ತುಂಬುವುದು; ಕೆಟ್ಟ ಸ್ಥಿತಿ ಇದ್ದರೆ ತೆಗೆದುಹಾಕುವುದು; ಕೆಟ್ಟಸ್ಥಿತಿ ಇಲ್ಲದಿದ್ದರೆ ಅದನ್ನು ಮನಸ್ಸಿನಲ್ಲಿ ಬರದಂತೆ ಪ್ರಯತ್ನಿಸುವುದು.

ಉತ್ತಮ ಧ್ಯಾನ : ತನ್ನ ಶರೀರ-ಮನಸ್ಸಿನಲ್ಲಿ ಎಲ್ಲ ಕಾರ್ಯಗಳನ್ನು ಕಾಯ,ವೇದನಾ, ಚಿತ್ತ ಮತ್ತು ಧಮ್ಮಗಳ ಬಗ್ಗೆ ಎಚ್ಚರಿಕೆಯಿಂದ ಗಮನವಿಡುವುದ.

ಉತ್ತಮ ಸಮಾಧಿ : ಚಿತ್ತ ಏಕಾಗ್ರತೆಯ ವಿವಿಧ ಹಂತಗಳನ್ನು ಸಾಧಿಸುವುದು ಮತ್ತು ಅನಿತ್ಯ, ದುಃಖ, ಅನಾತ್ಮವನ್ನರಿತು ಸಮತೆಯಲ್ಲಿ ಮನಸ್ಸನ್ನು ಕ್ರೋಢಿಕರಿಸುವುದು.

**ಈ) ನಾಮ-ರೂಪ (ಮನಸ್ಸು-ಶರೀರ)**

ಮನಸ್ಸು ಮತ್ತು ಶರೀರದ ಸಂಯೋಜನೆಯಿಂದಲೇ ಜೀವಶಕ್ತಿಯನ್ನು ಹೊಂದಿದ ಜೀವಿಯು ಆಗುವುದು. ಭಗವಾನ ಬುದ್ಧರು ಎರಡರ ಬಗ್ಗೆಯೂ ಆಳವಾಗಿ ಜ್ಞಾನ ಹೊಂದಿದವರಾಗಿ ಅವುಗಳ ಬಗ್ಗೆ ಅತಿ ವಿವರವಾದ ಉಪದೇಶವನ್ನು ಅಭಿಧಮ್ಮ ಪಿಟಕದಲ್ಲಿ ವಿವರಿಸಿದ್ದಾರೆ. ಅಭಿಧಮ್ಮದ ಪ್ರಕಾರ ಮನಸ್ಸು ಮುಖ್ಯವಾಗಿ ನಾಲ್ಕು ಗುಣಗಳಿಂದ ಮಾಡಲ್ಪಟ್ಟಿವೆ.

೧) **ವೇದನೆ :** ಅಂದರೆ ಶಾರೀರಿಕ ಮಾನಸಿಕ ಅನುಭವ. ಅದು ಸುಖ ಅಥವಾ ದುಃಖ ಅಥವಾ ಸುಖವೂ ಅಲ್ಲದ ದುಃಖವೂ ಅಲ್ಲದ ಅನುಭವದಿಂದ ಕೂಡಿರುತ್ತದೆ.

೨) **ಸಞ್ಞಾ :** ತಿಳಿವಳಿಕೆ, ಗ್ರಹಿಸುವಿಕೆ, ಗುರುತಿಸುವಿಕೆ, ನೆನಪು ಮಾಡಿಕೊಳ್ಳುವಿಕೆ.

೩) **ಸಂಖಾರಾ :** ಇದು ಐವತ್ತು ಮಾನಸಿಕ ಗುಣಗಳನ್ನು ಹೊಂದಿದ್ದು ಅವುಗಳಲ್ಲಿ ಚೇತನಾ, ಅಂದರೆ ಇಚ್ಛೆ - ಯಾವುದೇ ಯೋಚನೆ, ಮಾತು ಅಥವಾ ಕಾರ್ಯವನ್ನು ಮಾಡಲು ಮನಸ್ಸಿನಲ್ಲಿ ಉಂಟಾಗುವ ಇಚ್ಛೆ ಪ್ರಮುಖವಾಗಿದೆ.

೪) **ವಿಞ್ಞಾನ :** ಈ ಎಲ್ಲ ಗುಣಗಳನ್ನು ಹೊಂದಿ ವಸ್ತು ವಿಷಯದ ಬಗ್ಗೆ ಅರಿವು ಹೊಂದುವುದು.

**ಶರೀರಿದ ಭಾಗಗಳು:** ಶರೀರವು ನಾಲ್ಕು ಗುಣಧಾತುಗಳಿಂದ ಮಾಡಲ್ಪಟ್ಟಿದೆ- ೧) ಪಠವೀಧಾತು, ಅಂದರೆ ಭೂಮಿಧಾತು. ಇದರ ಗುಣ ಘಣತ್ವ ೨) ಆಪೋಧಾತು, ಅಂದರೆ ನೀರು ಧಾತು. ಇದರ ಗುಣ ಅಂಟಿಕೆ, ದ್ರವತ್ವ ೩) ತೇಜೋಧಾತು, ಅಂದರೆ ಉಷ್ಣಧಾತು. ಇದರ ಗುಣ ಶರೀರದಲ್ಲಿನ ಉಷ್ಣತೆ ಶಕ್ತಿ. ೪) ವಾಯುಧಾತು, ಅಂದರೆ ಗಾಳಿಧಾತು. ಇದರ ಗುಣಚಲಿಸುವಿಕೆ. ಶರೀರದ ಪ್ರತಿ ಅಣುವಿನಲ್ಲಿಯೂ ಈ ನಾಲ್ಕು ಧಾತುಗಳು ಇರುತ್ತವೆ.

**ಉ) ಮೂರು ಲಕ್ಷಣಗಳು(ತಿಲಕ್ಖಣ) :** ಎಲ್ಲಾ ವಸ್ತುಗಳು, ಜೀವಿಗಳು, ಮನಸ್ಸು, ಶರೀರ ಎಲ್ಲವೂ ಮೂರು ಲಕ್ಷಣಗಳನ್ನು ಹೊಂದಿವೆ.

**೧) ಅನಿತ್ಯ (ಅನಿಚ್ಚ)** : ಹುಟ್ಟಿನಿಂದ ಸಾವಿನವರೆಗೆ ಮನಸ್ಸು-ಶರೀರ ಯಾವಾಗಲೂ ಬದಲಾವಣೆ ಹೊಂದುತ್ತಲೇ ಇರುತ್ತದೆ. ಜೀವಿಗಳು ಹುಟ್ಟುತ್ತವೆ ಸಾಯುತ್ತವೆ. ವಸ್ತುಗಳು ಮಾರ್ಪಾಟು ಆಗುತ್ತಲೇ ಇವೆ. ಸಸ್ಯಗಳು ಉತ್ಪತ್ತಿಯಾಗುತ್ತವೆ ಮತ್ತು ನಶಿಸುತ್ತವೆ, ಈ ಸತತವಾದ ಬದಲಾವಣೆಯ ಸ್ಥಿತಿಯೇ ಅನಿತ್ಯ.

**೨) ದುಃಖ** : ಈ ಅನಿತ್ಯದ ನಿಯಮವನ್ನು ಅರಿಯದ್ೇ ದೇಹ, ಮನಸ್ಸು, ಸೌಂದರ್ಯ, ವಸ್ತುಗಳು ಇತ್ಯಾದಿ ನಿತ್ಯವೆಂದು ಬಗೆದು ಅವುಗಳಿಗೆ ಮನುಷ್ಯ ಅಂಟಿಕೊಂಡಿರುತ್ತಾನೆ. ಯಾವುದೇ ತರಹದ ಸುಖ ಅನುಭವಕ್ಕೂ ಅನಿತ್ಯ. ಅಲ್ಲದೆ ಮನಸ್ಸಿನಲ್ಲಿ ಲೋಭ ಉಂಟುಮಾಡುತ್ತದೆ. ಅದಕ್ಕೆ ಅಂಟಿಕೊಂಡಾಗ ಲೋಭದ ವಿಷದಿಂದ ದುಃಖದ ಫಲ ಸಿಗುತ್ತದೆ. ಆ ಸುಖಕರ ಸ್ಥಿತಿ ಬದಲಾದಾಗ ದುಃಖ ಉಂಟಾಗುತ್ತದೆ. ಆದ್ದರಿಂದ ಸುಖ-ದುಃಖ ಎಲ್ಲಸ್ಥಿತಿಗಳೂ ದುಃಖದೆಡೆಗೆ ಸಾಗಿಸುತ್ತವೆ. ಈ ಅಂಟಿಕೊಳ್ಳುವಿಕೆಯೇ ತೃಷ್ಣೆ. ಇದೇ ದುಃಖಕ್ಕೆ ಕಾರಣ. ಸ್ವಾರ್ಥಮಯ ಅಜ್ಞಾನದಿಂದ ಕೂಡಿದ ಆಸೆಯೇ ದುಃಖ.

**೩) ಅನಾತ್ಮ (ಅನತ್ತ)** : ಎಲ್ಲವೂ ಅನಾತ್ಮವಾದುದು. ತಾನು-ತನ್ನದು ಎಂಬುದು ಇಲ್ಲ. ತನ್ನ ಶರೀರವೇ ತನ್ನ ಇಚ್ಛೆಯ ವಿರುದ್ಧ ಮುಪ್ಪು ಬಂದು ಸಾಯುತ್ತದೆ. ನೆಲ-ಜಲ, ಸಿರಿ-ಸಂಪತ್ತು, ಸೌಂದರ್ಯ ಯಾವುದೂ ತನ್ನದೆಂಬದು ಇರುವುದಿಲ್ಲ. ಜೀವಿಯೂ ಕೇವಲ ಶರೀರ ಮತ್ತು ಮನಸ್ಸು ಈ ಎರಡರ ಸಂಯೋಜನೆಯಿಂದ ಆಗಿದೆ. ಇದರಲ್ಲಿ ಶರೀರವೂ ಪ್ರತಿಕ್ಷಣ ಬದಲಾವಣೆ ಹೊಂದುತ್ತಲೇ ಇರುತ್ತದೆ. ಮನ್ನಸು ಕೂಡ ಶರೀರಕ್ಕಿಂತಲೂ ಅತೀ ವೇಗವಾಗಿ ಬದಲಾವಣೆ ಹೊಂದುತ್ತಲೇ ಇದೆ. ಇವೆರಡನ್ನು ಬಿಟ್ಟು ಬೇರೆ ಯಾವುದೇ ವಸ್ತು ಜೀವಿಯಲ್ಲಿಲ್ಲ. ಯಾವುದೇ ನಿತ್ಯವಾದ ಆತ್ಮ ಇಲ್ಲ. ಯಾವ ರೀತಿ ರಥವು, ಈಸು, ಸೋಗ, ಚಕ್ರ, ಹಬ್ಬು, ಗೂಡ, ಹಳಿ ಇತ್ಯಾದಿಗಳಿಂದ ಆಗಿ ಒಂದು ರೂಪವನ್ನು ಪಡೆದಿರುತ್ತದೆ. ಅವುಗಳನ್ನು ಬಿಚ್ಚಿ, ಭಾಗಗಳನ್ನು ಬಿಡಿ ಬಿಡಿ ಮಾಡಿದರೆ ರಥವು ಅದರ ಆಕಾರ, ಹೆಸರು ಎಲ್ಲವನ್ನೂಕಳೆದುಕೊಳ್ಳುತ್ತದೆಯೋ ಅದೇ ತರಹ ಪ್ರತಿ ವಸ್ತು ಮತ್ತು ಜೀವಿ ಸಂಯೇಜನೆ ವಿಂಗಡನೆ ಆಗುತ್ತಲೇ ಇರುತ್ದೆ. ಈ ಕಾರ್ಯವು

ಪರಮಾತ್ಮನಿಂದ ನಡೆಯುತ್ತಿದೆಯೆಂದು ಇತರ ಧಾರ್ಮಿಕ ವಿಚಾರವಾಗಿದ್ದರೆ ಈ ಭವ ಚಕ್ರವು ಕಾರಣ-ಕಾರ್ಯದ ನಿಯಮದಂತೆ ನಡೆಯುತ್ತದೆಂದು ಬುದ್ಧರು ಸಾರಿದ್ದಾರೆ. ಇದು ಅತಿ ಆಳವಾದ ಪ್ರಜ್ಞೆಯಿಂದ ಮಾತ್ರ ಅರಿಯಲುಸಾಧ್ಯ. ಇದನ್ನು ಅರಿತವನು ಬುದ್ಧತ್ವವನ್ನು ಪಡೆಯುತ್ತಾನೆ. ಕೇವಲ ವ್ಯವಹಾರಿಕ ಜ್ಞಾನದಿಂದ ಈ ಮೂರು ಲಕ್ಷಣಗಳನ್ನು ತಿಳಿದುಕೊಂಡರೆ ಸಾಲದು. ಧ್ಯಾನದಿಂದ ಮನಸ್ಸಿನ ಆಳಕ್ಕೆ ಹೋಗಿ ಪ್ರಜ್ಞೆಯನ್ನು ಬೆಳೆಸಿಕೊಂಡು ಸ್ವತಃ ಅನುಭವದಿಂದ ಈ ತನ್ನ ಶರೀರದಲ್ಲಿಯೇ ಇವುಗಳನ್ನು ಅರಿತಾಗ ಅವನು ಬೋಧಿಯನ್ನು ಪಡೆಯುತ್ತಾನೆ. ಈ ಅರಿಯುವ ಶಕ್ತಿ ಎಲ್ಲ ಪ್ರಾಣಿಗಳಲ್ಲಿಯೂ ಉಂಟು. ಅದನ್ನು ಬೆಳೆಸಿಕೊಂಡು ಪರಿಪೂರ್ಣತೆಯನ್ನು ಹೊಂದುವುದೇ ಧರ್ಮದ ಗುರಿ.

### ಊ) ಅವಲಂಬನೆಯ ಹುಟ್ಟುವಿಕೆ (ಪಟಿಚ್ಚ ಸಮುಪ್ಪಾದ)

ಸಕಲವೂ ಬ್ರಹ್ಮನಿರ್ಮಿತ, ದೇವ ನಿರ್ಮಿತವೆಂದು ಮಾನವನು ಅಸಹಾಯಕನಾಗಿ ಸತ್ಯವನ್ನು ಹುಡುಕಲಾರದೇ ಅಜ್ಞಾನದಲ್ಲಿ ಉಳಿದಿದ್ದಾನೆ. ಎಲ್ಲ ದುಃಖಗಳೂ ಈ ಅಜ್ಞಾನದ ಮೇಲೆಯೇ ಅವಲಂಬಿತವಾಗಿದೆ. ಭಗವಾನರು ಈ ಹುಟ್ಟು ಸಾವಿನ ಚಕ್ರವನ್ನು ಪಟಿಚ್ಚಸಮುಪ್ಪಾದದಲ್ಲಿ ಹೀಗೆ ವಿವರಿಸಿದ್ದಾರೆ.

ಅವಿಜ್ಜಾ ಪಚ್ಚಯಾ ಸಙ್‌ಖಾರಾ;
ಸಙ್‌ಖಾರ ಪಚ್ಚಾಯಾ ವಿಞ್ಞಾಣಂ;
ವಿಞ್ಞಾಣಂ ಪಚ್ಚಾಯಾ ನಾಮರೂಪಂ;
ನಾಮರೂಪ ಪಚ್ಚಯಾ ಸಳಾಯತನಂ;
ಸಳಾಯತನ ಪಚ್ಚಯಾ ಫಸ್ಸೋ;
ಫಸ್ಸ ಪಚ್ಚಯಾ ವೇದನಾ;
ವೇದನಾ ಪಚ್ಚಯಾ ತಣ್ಹಾ;
ತಣ್ಹಾ ಪಚ್ಚಯಾ ಉಪಾದಾನಂ;
ಉಪಾದಾನ ಪಚ್ಚಯಾ ಭವೊ;

ಭವ ಪಚ್ಚಯಾ ಜಾತಿ;
ಜಾತಿ ಪಚ್ಚಯಾ ಜರಾ ಮರಣಂ-ಸೋಕ-ಪರಿದೇವ;
ದುಕ್ಖ-ದೋ ಮನಸ್ಸು ಪಾಯಾಸಾ ಸಂಭವನ್ತಿ ಏವಮೇವತಸ್ಸ
ಕೇವಲಸ್ಸ ದುಕ್ಖಕ್ಖನ್ಧಸ್ಸಸಮುದಯೋ ಹೋತಿ

ಅರ್ಥ : ಅವಿದ್ಯೆಯು ಕಾರಣವಾಗಿ ಸಂಸ್ಕಾರಗಳು ಉಂಟಾಗುತ್ತವೆ.

ಸಂಸ್ಕಾರಗಳು ಕಾರಣವಾಗಿ ವಿಜ್ಞಾನ
ವಿಜ್ಞಾನವು ಕಾರಣವಾಗಿ ನಾಮರೂಪಗಳು
ನಾಮರೂಪಗಳುಕಾರಣವಾಗಿ ಇಂದ್ರಿಯಗಳು
ಇಂದ್ರಿಯಗಳು ಕಾರಣವಾಗಿ ಸ್ಪರ್ಶ
ಸ್ಪರ್ಶವು ಕಾರಣವಾಗಿ ವೇದನೆ (ಅನುಭವ)
ವೇದನೆಯು ಕಾರಣವಾಗಿ ನಾಮರೂಪಗಳು ತಣ್ಹಾ (ತೃಷ್ಣೆ)
ತೃಷ್ಣೆಯು ಕಾರಣವಾಗಿ ಉಪಾದಾನ (ಅಂಟುವಿಕೆ)
ಅಂಟುವಿಕೆಯ ಕಾರಣವಾಗಿ ಭವ
ಭವವು ಕಾರಣವಾಗಿ ಹುಟ್ಟು

ಹುಟ್ಟು ಕಾರಣವಾಗಿ ಜರಾ, ಮರಣ, ಶೋಕ, ಕ್ರಂದನ, ಶಾರೀರಿಕ ವೇದನೆ, ಚೇತಸಿತ ವೇದನೆ, ಖಿನ್ನೆಗಳು ಉಂಟಾಗುತ್ತವೆ. ಹೀಗೆ ಇಡೀ ದುಃಖರಾಶಿಯೇ ಹುಟ್ಟಿಕೊಳ್ಳುತ್ತದೆ.

ಈ ದುಃಖ ಕಳಳ ತಾಪತ್ರಯಗಳೂ ಅವಿದ್ಯೆ ಅಥವಾ ಅಜ್ಞಾನದ ಮೇಲೆ ಅವಲಂಬಿಸಿದೆ. ಅವಿದ್ಯೆಯು ಮತ್ತೊಂದು ರೂಪ ತೃಷ್ಣೆ. ಇವೆರಡು ದುಃಖದ ಮೂಲಕಾರಣಗಳು. ಆದ್ದರಿಂದ ನಾವು ಈ ದುಃಖ ನಿವಾರಣೆ ಮಾಡುವುದಾದರೆ ಅಜ್ಞಾನವನ್ನು ನಿರೋಧಿಸಬೇಕು. ಈ ಅಜ್ಞಾನವು ಪರಿಪೂರ್ಣ ಹೋದಾಗಲೇ ಬೋಧಿ ಸಾಧ್ಯವಾಗಿ ಬುದ್ಧನಾಗುತ್ತಾನೆ. ಅತೀ ಚಿಕ್ಕ ಮಾನಸಿಕ ಅಸಮಾಧಾನದಿಂದ ಹಿಡಿದು ಅತಿ ದೊಡ್ಡ ದುಃಖ ಕಳವಳ, ತಾಪ ತಳಮಳದವರೆಗೆ ಅಷ್ಟಾಂಗ ಮಾರ್ಗವೊಂದೇ ನಿವಾರಿಸುತ್ತದೆ. ದುಃಖವನ್ನರಿತು ಅದರಿಂದ ಮುಕ್ತನಾಗಿ ನಿಬ್ಬಾಣ ಪಡೆಯುವುದು, ಈ ಮಾರ್ಗವೇ ಧರ್ಮ.

ಧಮ್ಮಂ-ಸರಣಂ-ಗಚ್ಛಾಮಿ

# ಸಂಘ

ಬುದ್ಧನ ಅನುಯಾಯಿಗಳ ಸಂಘದಲ್ಲಿ ಎರಡು ವಿಧ

**೧. ಅರಿಯ ಸಂಘ :** ಯಾವು ನಿರ್ವಾಣವನ್ನು ಸಾಕ್ಷಾತ್ಕರಿಸಿಕೊಂಡಿರುವರೋ ಅವರು ಮುಕ್ತಿಯ ನಾಲ್ಕು ವಿವಿಧ ಹಂತಗಳಲ್ಲಿ ತಲುಪಿರುತ್ತಾರೆ. ಅವುಗಳೆಂದರೆ ಸೋತಾಪನ್ನ, ಸಕದಾಗಾಮಿ, ಅನಾಗಾಮಿ ಮತ್ತು ಅರಹಂತ.

**೨. ಭಿಕ್ಷು-ಭಿಕ್ಷುಣಿ ಸಂಘ** : ಭಿಕ್ಷು-ಭಿಕ್ಷುಣಿಯರು ಧಮ್ಮದ ಪಥದಲ್ಲಿ ಸಾಗಿದವರೂ ಮುಕ್ತಿಯ ಹಂತಗಳನ್ನು ತಲುಪಲು ಪ್ರಯತ್ನಪಡುತ್ತಿರುವರು. ಧಮ್ಮಮಾರ್ಗದಲ್ಲಿ ನಡೆಯುವರು. ಧಮ್ಮ ದೀಪವನ್ನು ಬೆಳಗುವವರು, ತಾನು, ತನ್ನದೆಂಬುವುದನ್ನೆಲ್ಲ ತ್ಯಾಗ ಮಾಡಿದವರು. ರಾಗ-ದ್ವೇಷ-ಮೋಹವೆಂಬ ಅಜ್ಞಾನವನ್ನು ಸುಡಲೋಸುಗ ಕಾವಿಧಾರಿಗಳು ತ್ರಿಪಿಟಕದ 227 ನಿಯಮಗಳಂತೆ ನಡೆಯುವವರು. ನ್ಯಾಯವಾದುದನ್ನೇ ಅನುಸರಿಸುವರು. ಸ್ವಾಮಿಗಳಾಗಿ ಲೋಕಕ್ಕೆ ಅನುಕಂಪ ಬೀರುವರು. ದಾನ ಸ್ವೀಕರಿಸಲು ಯೋಗ್ಯರಾದವರೂ ಬುದ್ಧ, ಧಮ್ಮ, ಸಂಘದಲ್ಲಿ ಶ್ರದ್ಧೆ-ವಿಶ್ವಾಸವನ್ನು ಇಟ್ಟು, ಲೋಕದಲ್ಲಿ ಧಮ್ಮ ಪ್ರಚಾರ ಕೈಗೊಂಡವರು, ಧಮ್ಮ ದೀಕ್ಷೆಯನ್ನು ನೀಡುವವರು, ಸ್ವಾರ್ಥಮಯ ಆಶೆಯನ್ನು ಕಿತ್ತೊಗೆದವರು, ದಶ ಶೀಲಗಳನ್ನು ಪಾಲಿಸುವವರು, ದಿನಕ್ಕೆ ಒಂದೇ ಸಲ ಆಹಾರ ಸೇವಿಸುವವರು, ಸದಾ ಧ್ಯಾನ ಸಾಧನೆಯಲ್ಲಿದ್ದವರು, ಶರೀರಕ್ಕೆ ವೇಷಭೂಷಣಆಧಿಗಳನ್ನು ಮಾಡದೇ ಇದ್ದವರು. ದೂರ್ತತನ, ಕಪಟತನ, ಆಶೆ, ಆಡಂಬರಗಳನ್ನುಕಿತ್ತು ಎಸೆದವರು, ದೇವ ಮಾನವರಿಗೆ ಸುಜ್ಞಾನವನ್ನು ಹೊಂದಿದವರು. ಸಮನರು ಕಟ್ಟಿದ ಭಿಕ್ಕು ಸಂಘ. ಬುದ್ಧನು ನಿರ್ಮಿಸಿದ ಸಂಘ ಪೂಜನೀಯ.

ಸಂಘಂ-ಸರಣಂ-ಗಚ್ಛಾಮಿ

## ದೇವಮಾನವರಿಗೆ ಕಲ್ಯಾಣ ತಂದವರು ಬುದ್ಧ ಭಗವಾನರು

ಈ ಧರ್ಮವನ್ನು ಬುದ್ಧರು ನಿರ್ಮಲ ಭಾವನೆಯಿಂದ ಋಷಿ-ಮುನಿಗಳಿಗೂ ಬ್ರಾಹ್ಮಣ-ಕ್ಷತ್ರಿಯರಿಗೂ, ಶೆಟ್ಟಿ-ಸಾಮಂತರಿಗೂ, ವೈದ್ಯ-ವಿಧೂಷಕರಿಗೂ, ನರ್ತಕಿ-ಚಾಂಡಾಲರಿಗೂ, ಸ್ತ್ರೀ ಪುರುಷರಿಗೂ, ದೇವತೆ-ಬ್ರಹ್ಮರಿಗೂ, ಬೋಧಿಸಿದಾಗ ಸಕಲರು ಸುಗತಿಯನ್ನು ಪಡೆದರು. ಕೊಲೆಗಡುಕರೂ, ಕ್ರೂರಿಗಳೂ, ವ್ಯಭಿಚಾರಿಗಳೂ, ಅಹಂಕಾರಿಗಳೂ, ಕಳ್ಳರು, ಸುಳ್ಳರೂ, ಮೋಸಗಾರರೂ, ಉತ್ತಮ ಮಾನವರಾದರು. ದಶದಿಕ್ಕುಗಳಲ್ಲೆಲ್ಲಧಮ್ಮ ಪ್ರಚಾರ ಹರಡಿತು. ಲೋಕವೆಲ್ಲ ಮಳೆಸುರಿದು ಬೆಳೆ ಹುಲುಸಾಗಿ ಸುಭಿಕ್ಷೆಯಾಯಿತು.

ಸುವರ್ಣ ಹೊದಿಸಿದ ನೆಲವನ್ನು ಧಮ್ಮ ಪ್ರಕಾಶಕ್ಕೆ ಮಹಾದಾನಿಗಳು ಬುದ್ಧನಿಗೆ ನೀಡಿದರು. ಬುದ್ಧರು ಸತತವಾಗಿ 45 ವರ್ಷ ಧಮ್ಮವನ್ನು ಬೋಧಿಸದರು. ತನ್ನನ್ನೇ ಹೆತ್ತ ತಂದೆ-ತಾಯಿಗಳಿಗೆ, ಸತಿ-ಸುತರಿಗೆ, ಬಂಧು-ಭಗಿನಿಯರಿಗೆ ಎಲ್ಲರಿಗೂ ಧಮ್ಮದ ಅಮೃತ ನೀಡಿದರು. ಎಲ್ಲಿನೋಡಿದಲ್ಲೆಲ್ಲ ಧಮ್ಮದ ಹೊಳೆಯು ಹೊನಲಾಗಿ ಹರಿಯಿತು. ಯಾವ ತರಹ ಬೇರೆ ಬೇರೆ ಹೆಸರಿನ ನದಿಗಳು ಮಹಾ ಸಾಗರವನ್ನು ಸೇರಿದೊಡನೆ ತಮ್ಮ ಹೆಸರುಗಳನ್ನು ಕಳೆದುಕೊಂಡು ಒಂದೇ ಸಾಗರವಾಗುತ್ತದೆಯೋ, ಒಂದೇರುಚಿ ಬಣ್ಣವು ಆಗುತ್ತವೆಯೋ ಅದೇ ರೀತಿ ಬೇರೆ ಬೇರೆ ವರ್ಣದವರು, ಜಾತಿಯವರು, ಗುಣದವರು, ವೃತ್ತಿಯವರು, ಬೌದ್ಧ ಧಮ್ಮ ಅಪ್ಪಿಕೊಂಡಾಗ ಒಂದೇ ಜನಾಂಗದವರಾದರು, ನಾಗರೀಕ ಜನಾಂಗಕ್ಕೆ ಸೇರಿದರು. ಜಾತಿ,ಮತ, ಮುಟ್ಟಿ-ತಟ್ಟಿಯೆಂಬ ಭೇದ-ಭಾವನೆಗಳು ಇಲ್ಲದೇ ಲೋಕವೆಲ್ಲ ಬೌದ್ಧಮಯವಾಯಿತು.

ಕೊಲ್ಲಲು ಬಂದವರು ಪಾದಕ್ಕೆ ಬಿದ್ದರು, ಆಕ್ರಮಣಕಾರರು ಧಮ್ಮ ಸ್ವೀಕರಿಸಿದರು, ದೇವ-ಮಾನವ-ಬ್ರಹ್ಮಾದಿಗಳು ಬುದ್ಧನಿಗೆ ಕೃತಜ್ಞರಾದರು. ಬುದ್ಧನು ತನ್ನ80ನೇ ವರ್ಷದಲ್ಲಿ ''ಪಡೆಯಬೇಕೆಂದುದೆಲ್ಲ ಪಡೆದಾಯಿತು, ಮಾಡಬೇಕೆಂದುದೆಲ್ಲ ಮಾಡಿಯಾಯಿತು'', ''ಅವರವರ ಮುಕ್ತಿಗೆ ಅವರೇ ಜ್ಯೋತಿಯಾಗಿ ಬೆಳಗಲಿ''ಯೆಂದು ಲೋಕ ಕಲ್ಯಾಣದ ಮಾರ್ಗ ತೋರಿ

ಕುಶಿನಗರವೆಂಬ ಸ್ಥಳದಲ್ಲಿ ಭಿಕ್ಷು-ಭಿಕ್ಷುಣಿಯ, ದೇವ-ಮಾನವರ ಮಧ್ಯ ಪರಮಾನಂದಭರಿತನಾಗಿ ಮಹಾ ಪರಿನಿಬ್ಬಾಣ ಹೊಂದಿದರು. ಮಾನವನಾಗಿ ಹುಟ್ಟಿ ಮಾನವ ಕಲ್ಯಾಣಕ್ಕಾಗಿ ಧಮ್ಮವನ್ನು ಶೋಧಿಸಿ ಬುದ್ಧರಾದರು. ಇದೇ ಮಾನವ ಧಮ್ಮ.

ಅಶೋಕ ಮಹಾರಾಜನು ಈ ಧಮ್ಮವು ನಾಲ್ಕುದಿಕ್ಕುಗಳಿಗೆ ಸಿಂಹ ಗರ್ಜನೆಯಲ್ಲಿ ಪ್ರಸರಿಸಲಿಯೆಂದು ನಾಲ್ಕು ಸಿಂಹಗಳಿದ್ದ ಎತ್ತರ ಸ್ತಂಭವನ್ನು ಸಾರನಾಥ (ಕಾಶಿ) ದಲ್ಲಿ ನಿಲ್ಲಿಸಿದನು. ಇಂದಿನ ಭಾರದ ಸರಕಾರದವಾದರೂ ಅದೇ ಸಿಂಹಗಳಚಿಹ್ನೆಯನ್ನು ಸಾರ್ವಭೋಮದ ಸಂಕೇತವೆಂದು ಹಮ್ಮಿಕೊಂಡಿದೆ. ಅದೇ ಸ್ತಂಭದ ಮೇಲಿದ್ದ ಧಮ್ಮ ಚಕ್ರವನ್ನುರಾಷ್ಟ್ರ ಧ್ವಜದಲ್ಲಿ ಮುಗಿಲೇತ್ತರ ಹಾರಿಸಿದೆ. ಇದೆ ಧಮ್ಮ ಪ್ರಕಾಶದಲ್ಲಿನಮ್ಮ ಸಂವಿಧಾನವೂ ಸಹಾ ನಮ್ಮೆಲ್ಲರಿಗೆ ಸ್ವಾತಂತ್ರ್ಯ ಸಮಾನತೆ, ಬಂಧುತ್ವ ನ್ಯಾಯ ಮತ್ತು ಗಣರಾಜ್ಯವನ್ನು ನೀಡಿದೆ. ಜಾತಿ, ಮತ ಕಾರಣದಿಂದ ದುಃಖದಲ್ಲಿ ತೊಳಲಾಡುತ್ತಿರುವವರಿಗೆ ಬೋದ್ಧ ಧರ್ಮವೇ ಉತ್ತಮ ಔಷಧಿಯೆಂದು ಅಪ್ಪಿಕೊಂಡು ಬೋಧಿಸತ್ವ-ಬಾಬಾ ಸಾಹೇಬ ಅಂಬೇಡ್ಕರನ್ನು ಅಪಾರ ಕೀರ್ತಿಗೆ ಪಾತ್ರರಾದರು. ಸಕಲರೂ ಬೌದ್ಧರಾಗಲಿಯೆಂದು ಹಂಬಲಿಸಿದರು. ನಾವೆಲ್ಲ ಧಮ್ಮದತ್ತ ಸಾಗೋಣ.

# ಪೂಜಾಪಾಠ

ಬೌದ್ಧ ಧರ್ಮವು ಹುಟ್ಟಿನಿಂದ ಬರುವುದಿಲ್ಲ. ಆದರೆ ಸ್ವೀಕರಿಸು-ವುದರಿಂದ ಮತ್ತು ಪಾಲಿಸುವುದರಿಂದ ಮಾತ್ರ ಸಾಧ್ಯ. ಬುದ್ಧ ಭೂಮಿಯ ಮೇಲಾಗಲಿ, ಬೌದ್ಧ ವಿಹಾರದಲ್ಲಿಯಾಗಲಿ ಅಥವಾ ತಮ್ಮ ತಮ್ಮ ಮನೆಯಲ್ಲಿಯೇ ಆಗಲಿ ತಿಸರಣ ಗಮನ ಪಂಚಶೀಲ ಗ್ರಹಣ ಕೈಕೊಳ್ಳಬೇಕು. ಶ್ರದ್ಧಾಪೂರ್ಣ ಪ್ರತಿಜ್ಞೆ ಗೈಯಬೇಕು. ಧರ್ಮವನ್ನು ಸ್ವೀಕರಿಸುವ ಬಗ್ಗೆ ಮತ್ತು ಪೂಜಾ-ಪಾಠಗಳನ್ನು ಈ ಪರಿಚ್ಛೇದದಲ್ಲಿ ವಿವರಿಸಲಾಗಿದೆ.

**ಯಾಚನೆ** (ಪ್ರಾರ್ಥನೆ) : ಉಪಾಸಕನು ಧಮ್ಮವನ್ನು ಕೇಳುಬ ಬಗೆ, ಗುರುವಿಗೆ ಮೂರು ಸಾರಿ ನಮಸ್ಕರಿಸಿ ಹೀಗೆ ಹೇಳಬೇಕು :-

**ಉಪಾಸಕ : ಓಕಾಸ, ಅಹಂ ಭನ್ತೆ ತಿಸಣೇನ ಸದ್ಧಿಂ ಪಂಚಸೀಲಂ ಧಮ್ಮಂ ಯಾಚಾಮಿಅನುಗ್ಗಹಂ ಕತ್ವಾ ಸೀಲಂ ದೇಥ ಮೆ ಭನ್ತೆ, ಅನುಕಂಪಂ ಉಪಾದಾಯ.**

**ದುತಿಯಂಪಿ ಓಕಾಸ** ....................

**ತತಿಯಂತಿ ಓಕಾಸ** ......................

ಅವಕಾಶ, ಪೂಜ್ಯರೇ, ನಾನು ತ್ರಿಸರಣದೊಡನೆ ಪಂಚಶೀಲಗಳನ್ನು ಮತ್ತು ಧಮ್ಮವನ್ನು ಬೇಡುತ್ತೇನೆ. ದಯವಿಟ್ಟು ಅನುಗ್ರಹಿಸಿ ನನಗೆ ಶೀಲವನ್ನು ಕೊಡಿ.

ಎರಡನೆ ಸಲ ಅವಕಾಶ ಪೂಜ್ಯರೇ ................................

ಮೂರನೆ ಸಲ ಅವಕಾಶ ಪೂಜ್ಯರೇ ..............................

**ಗುರು : ಯಮಹಂ ವದಾಮಿ ತಂ ವದೇಹಿ.**

ನಾನು ಹೇಳಿಕೊಟ್ಟಂತೆ ಹೇಳು.

**ಉಪಾಸಕ : ಆಮ, ಭನ್ತೆ.**

ಹಾಗೆಯೇ ಆಗಲಿ ಪೂಜ್ಯರೆ.

ಗುರು : **ನಮೋ ತಸ್ಸ ಭಗವತೋ ಅರಹತೋ ಸಮ್ಮಾ ಸಂಬುದ್ಧಸ್ಸ**
ಭಗವಂತರೂ ಅರ್ಹಂತರೂ ಆದ ಸಮ್ಯಕ್ ಸಂಬುದ್ಧರಿಗೆ ನಮಸ್ಕಾರವು.
(ಉಪಾಸಕನು ಅದನ್ನು ಮೂರು ಬಾರಿಹೇಳಬೇಕು0

ಗುರು : **ಬುದ್ಧಂ ಸರಣಂ ಗಚ್ಛಾಮಿ** (ಉಪಾಸಕನು ಗುರು ಹೇಳಿದಂತೆ ಹೇಳಬೇಕು)
ನಾನು ಬುದ್ಧರಿಗೆ ಶರಣು ಹೋಗುತ್ತೇನೆ.
**ಧಮ್ಮಂ ಸರಣಂ ಗಚ್ಛಾಮಿ**
ನಾನು ಧರ್ಮಕ್ಕೆ ಶರಣು ಹೋಗುತ್ತೇನೆ.
**ಸಂಘಂ ಸರಣಂ ಗಚ್ಛಾಮಿ**
ನಾನು ಸಂಘಕ್ಕೆ ಶರಣು ಹೋಗುತ್ತೇನೆ.
**ದುತಿಯಂಪಿ ಬುದ್ಧಂ ಸರಣಂ ಗಚ್ಛಾಮಿ**
ಎರಡನೆ ಸಲವೂ ನಾನು ಬುದ್ಧಟಿಗ ಶರಣು ಹೋಗುತ್ತೇನೆ.
**ದುತಿಯಂಪಿ ಧಮ್ಮಂ ಸರಣಂ ಗಚ್ಛಾಮಿ**
ಎರಡನೆ ಸಲವೂ ನಾನು ಧರ್ಮಕ್ಕೆ ಶರಣು ಹೋಗುತ್ತೇನೆ.
**ದುತಿಯಂಪಿ ಸಂಘಂ ಸರಣಂ ಗಚ್ಛಾಮಿ**
ಎರಡನೆ ಸಲವೂ ನಾನು ಸಂಘಕ್ಕೆ ಶರಣು ಹೋಗುತ್ತೇನೆ.
**ತತಿಯಂಪಿ ಬುದ್ಧಂ ಸರಣಂ ಗಚ್ಛಾಮಿ**
ಮೂರನೆ ಸಲವೂ ನಾನು ಬುದ್ಧರಿಗೆ ಶರಣು ಹೋಗುತ್ತೇನೆ.
**ತತಿಯಂಪಿ ಸಂಘಂ ಸರಣಂ ಗಚ್ಛಾಮಿ**
ಮೂರನೆ ಸಲವೂ ನಾನು ಸಂಘಕ್ಕೆ ಶರಣು ಹೋಗುತ್ತೇನೆ.

ಗುರು : **ತಿಸರಣಗಮನಂ ಪರಿಪುಣ್ಣಂ.**

ಉಪಾಸಕ : **ಆಮ ಭನ್ತೆ**

# ಪಂಚಶೀಲಗಳು

ಹೀಗೆ ಗುರು ಹೇಳಿದಂತೆ ಹೇಳಬೇಕು.

ಗುರು : ೧. ಪಾಣಾತಿಪಾತಾ ವೇರಮಣೀ ಸಿಕ್ಖಾಪದಂ ಸಮಾಧಿಯಾಮಿ.

೨. ಅದಿನ್ನಾದಾನಾ ವೇರಮಣೀ ಸಿಕ್ಖಾಪದಂ ಸಮಾಧಿಯಾಮಿ.

೩. ಕಾಮೇಸು ಮಿಚ್ಛಾಚಾರಾ ವೇರಮಣೀ ಸಿಕ್ಖಾಪದಂ ಸಮಾಧಿಯಾಮಿ.

೪. ಮುಸಾವಾದಾ ವೇರಮಣೀ ಸಿಕ್ಖಾಪದಂ ಸಮಾಧಿಯಾಮಿ.

೫. ಸುರಾಮೇರಯ ಮಜ್ಜ ಪಮಾದಟ್ಠಾನಾ ವೇರಮಣಿ ಸಿಕ್ಖಾಪದಂ ಸಮಾಧಿಯಾಮಿ.

೧. ನಾನು ಪ್ರಾಣಹತ್ಯೆ ಮಾಡುವುದರಿಂದ ವಿರತನಾಗುವ ಶಿಕ್ಷಾಪದವನ್ನು ಕೈಗೊಳ್ಳುತ್ತೇನೆ.

೨. ನಾನು ಕಳ್ಳತನ ಮಾಡುವುದರಿಂದ ವಿರತನಾಗುವ ಶಿಕ್ಷಾಪದವನ್ನು ಕೈಗೊಳ್ಳುತ್ತೇನೆ.

೩. ನಾನು ಕಾಮಗಳಲ್ಲಿ ಮಿಥ್ಯಾಚಾರ (ವ್ಯಭಿಚಾರ) ದಿಂದ ವಿರತನಾಗುವ ಶಿಕ್ಷಾಪದವನ್ನು ಕೈಗೊಳ್ಳುತ್ತೇನೆ.

೪. ನಾನು ಸುಳ್ಳು ಹೇಳುವುದರಿಂದ ವಿರತನಾಗುವ ಶಿಕ್ಷಾಪದವನ್ನು ಕೈಗೊಳ್ಳುತ್ತೇನೆ.

೫. ಸುರೆ, ಹೆಂಡ ಮುಂತಾದ ಮಾದಕ ಪದಾರ್ಥಗಳಿಂದಾಗಿ ಪ್ರಮತ್ತನಾಗು- ವುದರಿಂದ ವಿರತನಾಗುವ ಶಿಕ್ಷಾಪದವನ್ನು ಕೈಗೊಳ್ಳುತ್ತೇನೆ.

# ಅಷ್ಟ ಶೀಲಗಳು

೧. ಪಾಣಾತಿ ಪಾತಾವೇರಮಣೀ ಸಿಕ್ಖಾಪದಂ ಸಮಾಧಿಯಾಮಿ.

೨. ಅದಿನ್ನಾದಾನಾ ವೇರಮಣೀ ಸಿಕ್ಖಾಪದಂ ಸಮಾಧಿಯಾಮಿ.

೩. ಅಬ್ರಹ್ಮಚರಿಯಾ ವೇರಮಣೀ ಸಿಕ್ಖಾಪದಂ ಸಮಾಧಿಯಾಮಿ.

೪. ಮುಸಾವಾದಾ ವೇರಮಣೀ ಸಿಕ್ಖಾಪದಂ ಸಮಾಧಿಯಾಮಿ.

೫. ಸುರಮೇರಯ ಮಜ್ಜ ಪಮಾದಟ್ಟಾನಾ ವೇರಮಣೀ ಸಿಕ್ಖಾಪದಂ

**ಸಮಾಧಿಯಾಮಿ.**

**೬. ವಿಕಾಲಭೋಜನಾ ವೇರಮಣೀ ಸಿಕ್ಖಾಪದಂ ಸಮಾಧಿಯಾಮಿ.**

**೭. ನಚ್ಚ-ಗೀತ-ವಾದಿತ-ವಿಸೂಕದಸ್ಸನ-ಮಾಲಾ ಗಂಧ-ವಿಲೇಪನ-ಧಾರಣ ಮಣ್ಣನ-ವಿಭೂಸನಟ್ಠಾನಾ ವೇರಮಣೀ ಸಿಕ್ಖಾಪದಂ ಸಮಾಧಿಯಾಮಿ.**

**೮. ಉಚ್ಚಾಸಯನ-ಮಹಾ ಸಯನ ವೇರಮಣೀ ಸಿಕ್ಖಾಪದಂ ಸಮಾಧಿಯಾಮಿ.**

೧. ನಾನು ಪ್ರಾಣಹತ್ಯೆ ಮಾಡುವುದರಿಂದ ವಿರತನಾಗುವ ಶಿಕ್ಷಾಪದವನ್ನು ಕೈಗೊಳ್ಳುತ್ತೇನೆ.

೨. ನಾನು ಕಳ್ಳತನ ಮಾಡುವುದರಿಂದ ವಿರತನಾಗುವ ಶಿಕ್ಷಾಪದವನ್ನು ಕೈಗೊಳ್ಳುತ್ತೇನೆ.

೩. ಅಬ್ರಹ್ಮಚರ್ಯೆಯಿಂದ ವಿರತನಾಗುವ ಶಿಕ್ಷಾಪದವನ್ನು ಕೈಗೊಳ್ಳುತ್ತೇನೆ.

೪. ನಾನು ಸುಳ್ಳು ಹೇಳುವುದರಿಂದ ವಿರತನಾಗುವು ಶಿಕ್ಷಾಪದವನ್ನು ಕೈಗೊಳ್ಳುತ್ತೇನೆ.

೫. ಸುರೆ, ಹೆಂಡ ಮುಂತಾದ ಮಾದಕ ಪದಾರ್ಥಗಳಿಂದಾಗಿ ಪ್ರಮತ್ತ ನಾಗುವುದರಿಂದ ವಿರತನಾಗುವ ಶಿಕ್ಷಾಪದವನ್ನು ಕೈಗೊಳ್ಳುತ್ತೇನೆ.

೬. ಅಕಾಲ ಭೋಜನದಿಂದ ವಿರತನಾಗುವ ಶಿಕ್ಷಾಪದವನ್ನು ಕೈಗೊಳ್ಳುತ್ತೇನೆ.

೭. ನೃತ್ಯ-ಗೀತೆ-ವಾದ್ಯ, ಉತ್ಸವ ಪ್ರದರ್ಶನಗಳನ್ನು ನೋಡುವುದರಿಂದ, ಮಾಲಾ-ಗಂಧ-ಲೇಪನ-ಸೌಂದರ್ಯ ವರ್ಧಕ ಮತ್ತು ಅಲಂಕಾರಿಕ ವಸ್ತುಗಳನ್ನು ಧರಿಸುವುದರಿಂದ ವಿರತನಾಗುವ ಶಿಕ್ಷಾಪದವನ್ನು ಕೈಗೊಳ್ಳುತ್ತೇನೆ.

೮. ಉನ್ನತವಾದ ಮತ್ತು ವಿಲಾಸಕರವಾದ ಆಸನಗಳನ್ನು ಉಪಯೋಗಿಸು ವುದರಿಂದ ವಿರತನಾಗುವ ಶಿಕ್ಷಾಪದವನ್ನು ಕೈಗೊಳ್ಳುತ್ತೇನೆ.

ಪಂಚಶೀಲಗಳನ್ನು ಪ್ರತಿದಿನ, ಅಷ್ಟಶೀಲಗಳನ್ನು ಪೌರ್ಣಮೆ, ಅಮಾವಾಸ್ಯೆ ಮತ್ತು ಅಷ್ಟಮಿ ದಿನದಂದು ಉಪಾಸಕರು ಕಾಯ-ವಾಚಾ-ಮನಸಾ ಆಚರಿಸಬೇಕು.

# ಬುದ್ಧ ಪೂಜಾವಿಧಿ

ಬುದ್ಧ ಪೂಜೆಯ ಮೊದಲ ಹೆಜ್ಜೆ ಉಪಾಸಕ, ಉಪಾಸಕಿಯರಿಗೂ ಮತ್ತು ಚಿಕ್ಕ ಮಕ್ಕಳಿಗೂ ಹರ್ಷ ತರುವಂತ ಮತ್ತು ಸಕಲರನ್ನು ಆಕರ್ಷಿಸಲಿಕ್ಕೆ ಸಮರ್ಪಕ ಪೂಜೆಯನ್ನು ಏರ್ಪಡಿಸಬೇಕು. ಈ ವಿಧಾನಗಳು ಬೌದ್ಧ ಸಂಸ್ಕೃತಿಯನ್ನು ದ್ವಿಗುಣಿಸುತ್ತ ಧಮ್ಮದತ್ತ ಸಕಲರನ್ನು ಕೊಂಡೊಯ್ಯಲು ಸಹಾಯಕಾರಿಯಾಗುವುದು. ಭಾರತೀಯ ಸಂಸ್ಕೃತಿಗೆ ಹೊಂದಿಕೊಳ್ಳುವ ರೀತಿಯಲ್ಲಿ ಬುದ್ಧಪೂಜೆಯನ್ನು ಏರ್ಪಡಿಸಬೇಕು.

ಬುದ್ಧ ಪೂಜೆಯನ್ನು ಸಾಮೂಹಿಕವಾಗಿಯೂ, ವೈಯಕ್ತಿಕವಾಗಿಯೂ ಏರ್ಪಡಿಸಬಹುದು. ಹುಣ್ಣಿಮೆ, ಅಮಾವಾಸ್ಯೆ, ಉಪೋಸತ (ಅಷ್ಟಮಿ) ದಿನಗಳಂದು ಮತ್ತು ಪ್ರತ್ಯೇಕ. ಸಂಸ್ಕಾರ ದಿನದಂದು ಬುದ್ಧ ವಿಹಾರದಲ್ಲಿಯಾಗಲಿ ಸಾರ್ವಜನಿಕ ಸ್ಥಳದಲ್ಲಿ ಪೂಜಾ ಮಂಟಪಗಳಲ್ಲಿ ಯಾಗಲಿ ಅಥವಾ ಸ್ವಗೃಹಗಳಲ್ಲಿಯಾಗಲಿ ಸಂದರ್ಭಕ್ಕನುಸಾರವಾಗಿ ಬುದ್ಧ ಪೂಜೆ ನೆರವೇರುವುದು.

ಆ ಸುದಿನದಂದು ತಕ್ಕ ಮಂಟಪ ಸಿದ್ಧಪಡಿಸಿ ಅದರ ಮೇಲೆ ಎತ್ತರದಲ್ಲಿ ಬೌದ್ಧ ಪ್ರತಿಮೆಯನ್ನು ಪ್ರತಿಷ್ಠಾಪಿಸಬೇಕು. ಹೂ, ಹಣ್ಣು, ಎಲೆಗಳಿಂದ ಶೃಂಗರಿಸಿ, ತರಹ, ತರಹವಾದ ಹಣ್ಣುಹಂಪಲುಗಳು ತುಂಬಿದ ತಟ್ಟೆಗಳನ್ನು ಮತ್ತು ಮನೆಯಲ್ಲಿತಯಾರಿಸಿದ ಪಿಂಡಪಾತ (ಆಹಾರ)ವನ್ನು ಬುದ್ಧಪ್ರತಿಮೆಯ ಮುಂದೆ ಇಡಬೇಕು. ಎಣ್ಣೆ ದೀಪವನ್ನಾಗಲಿ, ಮೇಣದ ಬತ್ತಿಯನ್ನಾಗಲಿ ಬೆಳಗಬೇಕು. ಸುಗಂಧ ಬತ್ತಿ, ಕರ್ಪೂರ ಇತ್ಯಾದಿಗಳನ್ನು ಹಚ್ಚಿಡಬೇಕು. ನೀರು ತುಂಬಿದ ಒಂದು ತಾಮ್ರದ ತಂಬಿಗೆಯಲ್ಲಿ ಐದು ಬೋಧಿವೃಕ್ಷದ ಎಲೆಗಳನ್ನು ಇರಿಸಿ ಮಧ್ಯದಲ್ಲಿ ಒಂದು ಸುಲಿದ ತೆಂಗಿನಕಾಯಿ ಇಡಬೇಕು. ಅದರ ಮೇಲೆ ಅರಿಷಿಣ ಕುಂಕುಮದಿಂದ ಧರ್ಮಚಕ್ರವನ್ನು ಬರೆಯಬೇಕು. ಇದು ಬೌದ್ಧ ಕಳಸ.

ಬೌದ್ಧ ಭಿಕ್ಕುಗಳನ್ನು ಅಥವಾ ಬೌಧಾಚಾರ್ಯರನ್ನು ಆಮಂತ್ರಿಸ ಬೇಕು. ಅವರಿಗೆ ಎತ್ತರದ ಆಸನಗಳನ್ನು ಕೊಟ್ಟು ಕುಳ್ಳಿರಿಸಬೇಕು. ಸಂಸ್ಕಾರ, ಕಾಲದಲ್ಲಿ ಮೂರು ಅಥವಾ ಐದು ಎಳೆಯ ನೂಲು ದಾರದ

ಉಂಡೆಯನ್ನುಪೂಜೆಗೆ ಇಡಿಸಬೇಕು. ಅರ್ಚಕರು ದಾರದ ಒಂದು ತುದಿಯನ್ನು ಬುದ್ಧ ಪ್ರತಿಮೆಗೆ ತಾಗಿಸಿ, ಕಲಶಕ್ಕೆಸುತ್ತಿಸಂಸ್ಕಾರಕ್ಕೆ ಸಂಬಂಧಿಸಿದ ಸ್ತ್ರೀ ಪುರುಷರ ಕೈಯೊಳಗಿಂದ ಹಾಯಿಸಿ ಇನ್ನೊಂದು ತುದಿಯನ್ನು ಅರ್ಚಕರು ತಮ್ಮ ಕೈಯಲ್ಲಿಹಿಡಿದುಕೊಳ್ಳಬೇಕು. ತಿಸರಣಗಮನ ಪಂಚಶೀಲ ಗ್ರಹಣ, ತ್ರಿರತ್ನ ವಂದನೆ ಮತ್ತು ಪರಿತ್ರಾಣ ಪಠಣ ಬೌದ್ಧ ಅರ್ಚನೆ ಕಾಲಕ್ಕೆ ಎಲ್ಲೂ ಪಠಿಸುವವರು. ಹಿಡಿದ ದಾರದ ಸ್ವಲ್ಪ ಭಾಗ ಕತ್ತರಿಸಿ ಪುರುಷರ ಬಲಗೈಗೂ, ಸ್ತ್ರೀಯರ ಎಡಗೈಗೂ ಕಟ್ಟಿಸುತ್ತಾರೆ. ಈ ಸಮಯದಲ್ಲಿ ಈ ಕೆಳಗಿನ ಮಂತ್ರ ಪಠಿಸಬೇಕು.

'ಸಬ್ಬೇ ಬುದ್ಧಾ ಬಲಪ್ಪತ್ತಾ ಪಚ್ಚೇಕಾನಞ್ಚ ಚ ಯಂ ಬಲಂ
ಅರಹನ್ತಾನ ಞ್ಚ ಚ ತೇಚೇನ ರಕ್ಖಂ ಬನ್ಧಾಮಿಸಬ್ಬಸೊ ।

ಎಲ್ಲ ಬುದ್ಧರೂ, ಪ್ರತ್ಯೇಕ ಬುದ್ಧರುಗಳ ಮತ್ತು ಅರ್ಹಂತರುಗಳ ತೇಜಸ್ಸಿನಿಂದ ನಾನು ನನ್ನ (ನಿನ್ನ) ರಕ್ಷಣೆಯನ್ನು ಎಲ್ಲ ವಿಧದಲ್ಲೂ ಭದ್ರಪಡಿಸಿಕೊಳ್ಳುತ್ತೇನೆ. (ಭದ್ರಪಡಿಸುತ್ತೇನೆ).

# ಬುದ್ಧ ವಂದನೆ

೧. ಇತಿ ಪಿ ಸೋ ಭಗವಾ ಅರಹಂ ಸಮ್ಮಾ ಸಂಬುದ್ಧೋ ವಿಜ್ಜಾ ಚರಣ ಸಂಪನ್ನೋ ಸುಗತೋಲೋಕವಿದೂ ಅನುತ್ತರೋ ಪುರಿಸ ಧಮ್ಮಸಾರಥೀ ಸತ್ಥಾ ದೇವಮನುಸ್ಸಾನಂ ಬುದ್ಧೋ ಭಗವಾ'ತಿ. ನಮೋ ತಸ್ಸಸಮ್ಮಾಸಂಬುದ್ಧಸ್ಸ !

೨. ಯೇಚ ಬುದ್ಧಾ ಅತೀತಾ ಚ ಯೇಚ ಬುದ್ಧಾ ಅನಾಗತಾ,
ಪಚ್ಚುಪ್ಪನ್ನಾಚಯೇ ಬುದ್ಧಾ ಅಹಂ ವನ್ಧಾಮಿ ಸಬ್ಬದಾ.

೩. ನತ್ಥಿಮೇ ಸರಣಂ ಅಞ್ಞಂ ಬುದ್ಧೋಮೇ ಸರಣಂ ವರಂ, ಏತೇನ ಸಚ್ಚ ವಜ್ಜೇನ ಹೋತು ಮೇ ಜಯಮಙ್ಗಳಂ.

೪. ಉತ್ತಮಙ್ಗೇನ ವನ್ದೇ' ಹಂ ಪಾದಪಂಸುಂ ವರುತ್ತಮಂ, ಬುದ್ಧೇ ಯೋ ಖಲಿತೋ ದೋಸೋ ಬುದ್ಧೋ ಖಮತು ತಂ ಮಮಂ

೫. ಬುದ್ಧಂ ಯಾವ ನಿಬ್ಬಾಣ ಪರಿಯಂತಂ ಸರಣಂ ಗಚ್ಛಾಮಿ

೧. ಭಗವಂತರು ಇಂತಿರುವರು : ಅರ್ಹಂತರೂ, ಸಮ್ಯಕ್ ಸಂಬುದ್ಧರೂ, ವಿದ್ಯಾಚರಣ ಸಂಪನ್ನರೂ, ಸುಗತರೂ, ಲೋಕಜ್ಞಾನಿಗಳೂ, ವ್ಯಕ್ತಿಗಳನ್ನು ಪಳಗಿಸುವ ಅಸಮಾನ ಮಾರ್ಗದರ್ಶಿಗಳೂ, ದೇವತೆಗಳ ಹಾಗೂ ಮಾನವರ ಗುರು ಬುದ್ಧರು ಮತ್ತು ಭಾಗ್ಯವಂತರು
ಆ ಸಮ್ಯಕ್ ಸಂಬುದ್ಧರಿಗೆ ನಮನಗಳು

೨. ಹಿಂದೆ ಬಂದು ಹೋದ ಬುದ್ಧರೆಲ್ಲರಿಗೂ, ಮುಂದೆ ಬರಲಿರುವ ಬುದ್ಧರೆಲ್ಲರಿಗೂ ಮತ್ತು ವರ್ತಮಾನದಲ್ಲಿರುವ ಬುದ್ಧರೆಲ್ಲರಿಗೂ, ನಾನು ಯಾವಾಗಲೂ ನಮಸ್ಕರಿಸುತ್ತೇನೆ.

೩. ಬೇರೆಲ್ಲೂ ನನಗೆ ರಕ್ಷಣೆಯಿಲ್ಲ ; ಬುದ್ಧರು ನನ್ನ ಶ್ರೇಷ್ಠ ರಕ್ಷಕರು. ಈ ಸತ್ಯ ವಚನದಿಂದ ನನಗೆ ಜಯಮಂಗಳವಾಗಲಿ.

೪. ಅವರ ಪವಿತ್ರ ಪಾದಧೂಳಿಯನ್ನು ನನ್ನ ಶಿರಸ್ಸಿನಿಂದ ನಾನು ವಂದಿಸುತ್ತೇನೆ. ನಾನೇನಾದರೂ ಬುದ್ಧರಲ್ಲಿ ಎಸಗಿದ ತಪ್ಪಿದ್ದರೆ ಬುದ್ಧರು ನನ್ನನ್ನು ಕ್ಷಮಿಸಲಿ.

೫. ನಾನು ನಿಬ್ಬಾಣ ಸಾಧಿಸುವವರೆಗೂ ಬುದ್ಧರ್ಲಲಿ ಶರಣು ಹೋಗುತ್ತೇನೆ.

# ಧಮ್ಮವಂದನೆ

೧. ಸ್ವಾಕ್ಖಾತೋ ಭಗವತಾ ಧಮ್ಮೋ, ಸನ್ದಿಟ್ಠಿಕೋ ಅಕಾಲಿಕೋ ಏಹಿಪಸ್ಸಿಕೋ ಓಪನಯಿಕೋ ಪಚ್ಚತ್ತಂ ವೇದಿತಬ್ಬೋ ವಿಞ್ಞೂಹೀ'ತಿ. ನಮೋ ತಸ್ಸ ನಿಯ್ಯಾನಿಕಸ್ಸ ಧಮ್ಮಸ್ಸ !

೨. ಯೇ ಚ ಧಮ್ಮಾ ಅತೀತಾ ಚ, ಯೇಚ ಧಮ್ಮಾ ಅನಾಗತಾ, ಪಚ್ಚುಪ್ಪನ್ನಾಚಯೇ ಧಮ್ಮಾ ಅಹಂ ವನ್ದಾಮಿ ಸಬ್ಬದಾ.

೩. ನತ್ಥಿ ಮೇ ಸರಣಂ ಅಞ್ಞಂ ಧಮ್ಮೋ ಮೇ ಸರಣಂ ವರಂ. ಏತೇನ ಸಚ್ಚ ವಜ್ಜೇನ ಹೋತು ಮೇ ಜಯಮಂಗಳಂ.

೪. ಉತ್ತಮಙ್ಗೇನ ವನ್ದೇ'ಹಂ ಧಮ್ಮಂ ಚ ತಿವಿಧಂ ವರಂ, ಧಮ್ಮೇ ಯೋ ಖಲಿತೋ ದೋಸೋ ಧಮ್ಮೋ ಖಮತು ತಂ ಮಮಂ.

೫. ಧಮ್ಮಂ ಯಾವ ನಿಬ್ಬಾಣ ಪರಿಯಂತಂ ಸರಣಂ ಗಚ್ಛಾಮಿ.

೧. ಭಗವಂತರಿಂದ ಸಂಬೋಧಿತವಾದ ಧರ್ಮವು ಸಂಯಕ್ ದೃಷ್ಟಿಯುಳ್ಳದ್ದು ತತ್‌ಕ್ಷಣವೇ ಫಲವನ್ನು ತರುವಂಥಾತ್ತು, 'ಬಂದು ನೋಡಿ' ಎಂದು ಆಹ್ವಾನಿಸುವಂಥಾದ್ದು, ಊರ್ಧ್ವಮುಖವಾಗಿ ನಡೆಸುವಂಥಾದ್ದು, ಜ್ಞಾನಿಯಾದ ಪ್ರತಿಯೊಬ್ಬನೂ ತಾನೇ ತಿಳಿದುಕೊಳ್ಳುವಂಥಾದ್ದು. ನಿರ್ವಾಣದೆಡೆಗೆ ನಡೆಸುವ ಆ ಧಮ್ಮಕ್ಕೆ ನಮನಗಳು

೨. ಹಿಂದೆ ಬಂದುಹೋಗ ಧರ್ಮಗಳಿಗೂ, ಮುಂದೆ ಬರಲಿರುವ ಧರ್ಮಗಳಿಗೂ, ಪ್ರಕೃತದಲ್ಲಿರುವ ಧರ್ಮಗಳಿಗೂ ನಾನು ಯಾವಾಗಲೂ ನಮಸ್ಕರಿಸುತ್ತೇನೆ.

೩. ಬೇರೆಲ್ಲೂ ನನ್ನ ರಕ್ಷಣೆಯಿಲ್ಲ ; ಧರ್ಮವು ನನ್ನ ಶ್ರೇಷ್ಠ ರಕ್ಷಣೆ. ಈ ಸತ್ಯ ವಚನದಿಂದ ನನಗೆ ಜಯ ಮಂಗಳವಾಗಲಿ.

೪. ತ್ರಿವಿಧವಾದ ಹಾಗೂ ಶ್ರೇಷ್ಠವಾದ ಧರ್ಮವನ್ನು ನಾನು ಶಿರಸ್ಸಿನಿಂದ ವಂದಿಸುತ್ತೇನೆ. ನಾನೇನಾದರೂ ಧರ್ಮಕ್ಕೆ ಅಪಚಾರವನ್ನೆಸಗಿದ್ದರೆ ಧರ್ಮವು ನನ್ನನ್ನು ಕ್ಷಮಿಸಲಿ!

೫. ನಿಬ್ಬಾಣ ಪಡೆಯುವವರೆಗೂ ಧಮ್ಮಕ್ಕೆ ಶರಣು ಹೋಗುತ್ತೇನೆ.

# ಸಂಘ ವಂದನೆ

೧. ಸುಪಟಿಪನ್ನೋ ಭಗವತೋ ಸಾವಕ ಸಂಘೋ, ಉಜೂ ಪಟಿಪನ್ನೋ ಭಗವತೋ ಸಾವಕಸಂಘೋ, ಞಾಯಪಟಿಪನ್ನೋ ಭಗವತೋ ಸಾವಕ ಸಂಘೋ, ಸಾಮೀಚಿ ಪಟಿಪನ್ನೋ ಭಗವತೋ ಸಾವಕಸಂಘೋ; ಯದಿದಂ ಚತ್ತಾರಿ ಪುರಿಸ ಯುಗಾನಿ ಅಟ್ಠಪುರಿಸ ಪುಗ್ಗಲಾ ಏಸ ಭಗವತೋ ಸಾವಕಸಂಘೋ, ಆಹುನೆಯ್ಯೋ ಪಾಹುನೆಯ್ಯೋ ದಕ್ಖಿಣೆಯ್ಯೋ ಅಞ್ಜಲಿ ಕರಣೀಯೊ ಅನುತ್ತರಂ ಪುಞ್ಞಕ್ಖೆತ್ತಂ ಲೋಕಸ್ಸಾ'ತಿ. ನಮೋ ತಸ್ಸ ಅಟ್ಠ ಅರಿಯ ಪುಗ್ಗಲಾ ಮಹಾ ಸಂಘಸ್ಸ!

೨. ಯೆ ಚ ಸಂಘಾ ಅತೀತಾಚ, ಯೇ ಚ ಸಂಘಾ ಅನಾಗತ. ಪಚ್ಚುಪ್ಪನ್ನಾಚಯೇ ಸಂಘಾ, ಅಹಂ ವನ್ದಾಮಿ ಸಬ್ಬದಾ

೩. ನತ್ಥಿಮೇ ಸರಮಂ ಅಞ್ಞಂ, ಸಂಘೋಮೇ ಸರಣಂ ವರಂ, ಏತೇನ ಸಚ್ಚ ವಜ್ಜೇನ ಹೋತು ಮೇ ಜಯಮಂಗಳಂ.

೪. ಉತ್ತಮಜ್ಗೇನವನ್ದೇಹಂ ಸಂಘಂಚ ತಿವಿಧೋತ್ತಮಂ, ಸಂಘೇಯೋ ಖಲಿತೋ ದೋಸೋ ಸಂಘೋ ಖಮತು ತಂ ಮಮಂ.

೫. ಸಂಘಂ ಯಾವ ನಿಬ್ಬಾಣ ಪರಿಯಂತಂ ಸರಣಂ ಗಚ್ಛಾಮಿ

೧. ಸುಚಾರಿತ್ರದಿಂದ ಕೂಡಿದುದು ಭಗವಂತರ ಶ್ರಾವಕ ಸಂಘ. ಋಜು ಚಾರಿತ್ರದಿಂದ ಕೂಡಿದುದು ಭಗವಂತರ ಶ್ರಾವಕ ಸಂಘ. ಸಚ್ಚಾರಿತ್ರದಿಂದ ಕೂಡಿದುದು ಭಗವಂತರ ಶ್ರಾವಕ ಸಂಘ, ಯೋಗ್ಯ ಚಾರಿತ್ರದಿಂದ ಕೂಡಿದುದು ಭಗವಂತರ ಈ ಶ್ರಾವಕ ಸಂಘವು ಯಾವುದೆಂದರೆ ; ನಾಲ್ಕು ವ್ಯಕ್ತಿ ಯುಗ್ಮಗಳು ಮತ್ತು ಎಂಟು ವ್ಯಕ್ತಿಗಳಿಂದ ಕೂಡಿದ ಸಂಘ-ತ್ಯಾಗಕ್ಕೆ ಅರ್ಹವಾದುದು, ಸತ್ಕಾರಕ್ಕೆ ಅರ್ಹವಾದುದು, ದಾನಕ್ಕೆ ಅರ್ಹವಾದುದು, ನಮಸ್ಕಾರಕ್ಕೆ ಅರ್ಹವಾದುದು, ಲೋಕದಲ್ಲಿ ಅಸಮಾನವಾದ ಒಂದು ಪುಣ್ಯಕ್ಷೇತ್ರ.

ಎಂಟು ಅರಿಯ ವ್ಯಕ್ತಿಗಳಿಂದ ಕೂಡಿದ ಆ ಮಹಾ ಸಂಘಕ್ಕೆ ನಮನಗಳು.

೨. ಹಿಂದೆ ಬಂದುಹೋದ ಸಂಘಗಳಿಗೂ, ಮುಂದೆ ಬರಲಿರುವ ಸಂಘಗಳಿಗೂ, ಪ್ರಕೃತದ ಸಂಘಗಳಿಗೂ ನಾನು ಯಾವಾಗಲೂ ನಮಸ್ಕರಿಸುತ್ತೇನೆ.

೩. ಬೇರೆಲ್ಲೂ ನನಗೆ ರಕ್ಷಣೆ ಇಲ್ಲ. ಸಂಘವೇ ನನ್ನರಕ್ಷಣೆ ಈ ಸತ್ಯ ವಚನದಿಂದ ನನಗೆ ಜಯಮಂಗಳವಾಗಲಿ !

೪. ತ್ರಿವಿಧದಲ್ಲಿ ಉತ್ತಮವಾಗಿರುವ ಸಂಘವನ್ನು ನಾನುಶಿರಸ್ಸಿನಿಂದ ವಂದಿಸುತ್ತೇನೆ. ನಾನೇನಾದರೂ ಸಂಘಕ್ಕೆ ಅಪಚಾರವನ್ನೆಸಗಿದ್ದರೆ ಸಂಘವುನನ್ನನ್ನು ಕ್ಷಮಿಸಲಿ !

೫. ನಿಬ್ಬಾಣ ಪಡೆಯುವವರೆಗೂ ಸಂಘಕ್ಕೆ ಶರಣು ಹೋಗುತ್ತೇನೆ.

## ಹೂವಿನ ಪೂಜೆ

**ವಣ್ಣ ಗನ್ಧ ಗುಣೋಪೇತಂ ಏತಂ ಕುಸುಮ ಸನ್ತತೀ,**
**ಪೂಜಯಾಮಿ ಮುನಿಸ್ದಸ್ತ ಸಿರೀಪಾದ ಸರೋರುಹೆ,**
**ಪೂಜೇಮಿ ಬುದ್ಧಂ ಕುಸುಮೇನನೇನ**
**ಪುಞ್ಞೇನ ಮೇತೇನ ಚ ಹೋತು ಮೋಕ್ಖಂ,**
**ಪುಪ್ಫಂ ಮೇಲಾಯಾತಿ ಯಥಾ ಇದಮ್ಮೇ**
**ಕಾಯೋತಥಾಯಾತಿ ವಿನಾಸ ಭಾವಂ.**

ಸುಂದರ ವರ್ಣ ಮತ್ತು ಸುಗಂಧಯುಕ್ತವಾದ ಈ ಹೂವಿನ ಸಮೂಹದಿಂದ ಮುನೀದಂರರ ಶ್ರೀ ಪಾದಪದ್ಮಗಳನ್ನು ಪೂಜಿಸುತ್ತೇನೆ.

ಈ ವಿವಿಧ ಹೂಗಳಿಂದ ನಾನು ಬುದ್ಧರನ್ನು ಪೂಜಿಸುತ್ತೇನೆ. ಈ ಪುಣ್ಯದಿಂದಾಗಿ ನನಗೆ ಮೋಕ್ಷವುಂಟಾಗಲಿ !

ಯಾವ ರೀತಿ ಹೂವು ಬಾಡಿಹೋಗುತ್ತದೆಯೋ, ಅದೇ ರೀತಿ ಈ ಶರೀರವೂ ಕೂಡ ನಾಶವಾಗುತ್ತದೆ.

## ಪ್ರದೀಪ ಪೂಜೆ

**ಘನಸಾರಪ್ಪದಿತ್ತೇನ ದೀಪೇನ ತಮಧಂಸಿನಾ,**
**ತಿಲೋಕ ದೀಪಂ ಸಂಬುದ್ಧಂ ಪೂಜಯಾಮಿ ತಮೋನುದಂ.**

ಬೆಳಗುತ್ತಿರುವ ಕರ್ಪೂರದ ದೀಪದಿಂದ ಕತ್ತಲೆಯನ್ನು ಹೋಗಲಾಡಿಸುತ್ತಾ, (ಅಜ್ಞಾನದ) ಅಂಧಕಾರವನ್ನು ತೊಡೆದುಹಾಕುವ ತ್ರಿಲೋಕ ದೀಪನಾದ ಸಂಬುದ್ಧನನ್ನು ಪೂಜಿಸುತ್ತೇನೆ.

## ಸುಗಂಧ ಪೂಜೆ

**ಸುಗನ್ಧಿಕಾಯ ವದನ ಮನನ್ತ ಗುಣ ಗನ್ತಿನಂ,**
**ಸುಗನ್ಧಿನಾ'ಹಂ ಗನ್ಧೇನ ಪೂಜಯಾಮಿ ತಥಾಗತಂ.**

ಸುಪ್ರಸನ್ನವಾದ ಕಾಯ ಮತ್ತು ಮುಖಗಳಿಂದ ಕೂಡಿದ, ಅಂತ ಗುಣಸಂಪನ್ನರಾದ ತಥಾಗತರನ್ನು ನಾನು ಸುಗಂಧ ಯುಕ್ತವಾದ ಗಂಧಗಳಿಂದ ಪೂಜಿಸುತ್ತೇನೆ.

## ಧೂಪ ಪೂಜೆ

**ಗನ್ಧ ಸಮ್ಭಾರಯುತ್ತೇನ ಧೂಪೇನಾ'ಹಂ ಸುಗನ್ಧಿನಾ,**
**ಪೂಜಯೇ ಪೂಜನೀಯಂ ತಂ ಪೂಜಭಾಜನಮುತ್ತ ಮಂ**

ಗಂಧ ಸಂಭಾರಗಳಿಂದ ಕೂಡಿದ ಸುಗಂಧವಾದ ಧೂಪದಿಂದ ನಾನು ಪೂಜ್ಯನೂ ಮತ್ತು ಆ ಶ್ರೇಷ್ಠ ಪೂಜಾಭಾಜನನೂ ಆದವನನ್ನು ಪೂಜಿಸುತ್ತೇನೆ.

## ಆಹಾರ ಪೂಜೆ

**ಅಧಿವಾಸೇತು ನೋ ಭನ್ತೆ ಭೋಜನಂ ಉಪನಾಮಿತಂ,**
**ಅನುಕಮ್ಪಂ ಉಪಾದಾಯ ಪತಿಗಣ್ಹಾತುಮುತ್ತಮ.**

ಭನ್ತೆ, ನಮ್ಮ ಮೇಲೆ ಕರುಣೆಯಿಟ್ಟು ಸಮರ್ಪಿತವಾದ ಆಹಾರವನ್ನು ಸ್ವೀಕರಿಸೋಣವಾಗಲಿ, ಶ್ರೇಷ್ಠರೆ, ಪರಿಗ್ರಹಿಸೋಣವಾಗಲಿ !

# ಬೋಧಿ ವಂದನೆ

**ಯಸ್ಸ ಮೂಲೆ ನಿಸಿನ್ನೋ'ವ ಸಬ್ಬಾರಿ ವಿಜಯಂ ಅಕಾ,**
**ಪತ್ತೋ ಸಬ್ಬಞ್ಞು ತಂ ಸತ್ಥಾ ವನ್ದೇ'ತಂ ಬೋಧಿ ಪಾದಪಂ.**
**ಇಮೆ ಏತೆ ಮಹಾಬೋಧಿ ಲೋಕನಾಥೇನ ಪೂಜಿತಾ**
**ಅಹಂ'ಪಿ ತೇ ನಮಸ್ಸಾಮಿ ಬೋಧಿರಾಜ ನಮತ್ಥುತೇ !**

ಯಾವುದರ ಬುಡದಲ್ಲಿ ಕುಳಿತಕೊಂಡೇ ಗುರುವು ಎಲ್ಲ ಶತ್ರುಗಳನ್ನು ಜಯಿಸಿ ಸರ್ವಜ್ಞತ್ವವನ್ನು ಪಡೆದರೊ, ಆ ಬೋಧಿವೃಕ್ಷಕ್ಕೆ ನಾನು ವಂದಿಸುತ್ತೇನೆ.

ಲೋಕನಾಥನಿಂದ ಪೂಜಿತವಾದ ಮಹಾಬೋಧಿ (ವೃಕ್ಷ)ಗಳೇ, ನಾನೂ ಕೂಡ ನಿಮಗೆ ನಮಸ್ಕಾರ ಮಾಡುತ್ತೇನೆ. ಬೋಧಿರಾಜನೆ, ನಿನಗೆ ನಮಸ್ಕಾರವಿರಲಿ!

# ಚೈತ್ಯ ವಂದನೆ

**ವನ್ದಾಮಿಚೇತಿಯಂ ಸಬ್ಬಂ ಸಬ್ಬಠಾನೇಸು ಪತಿಟ್ಠಿತಂ,**
**ಸಾರೀರಿಕ ಧಾತು ಮಹಾಬೋಧಿಂ ಬುದಧ ರೂಪಂ ಸಕಲಂ ಸದಾ.**

ಎಲ್ಲ ಸ್ಥಳಗಳಲ್ಲೂ, ಪ್ರತಿಷ್ಠಿತವಾಗಿರುವ ಎಲ್ಲ ಚೈತ್ಯಗಳಿಗೂ, ಶಾರೀರಿಕ ಧಾತುವಿಗೂ, ಮಹಾಬೋಧಿಗೂ, ಎಲ್ಲ ಬುದ್ಧ ರೂಪಗಳಿಗೂ ಯಾವಾಗಲೂ ನಾನು ವಂದಿಸುತ್ತೇನೆ.

**ನಮಾಮಿ ಸತ್ಥುನೋವೋದಪ್ಪ ಮಾದವಚನನ್ತಿಮಂ,**
**ಸಬ್ಬೇ'ಪಿ ಚೇತಿಯೇ ವನ್ದೆ ಉಪಜ್ಝಾ'ಚರಿಯೇ ಮಮಂ,**
**ಮಯ್ದಂ ಪಣಾಮ ತೇಜೇನ ಚಿತ್ತಂ ಪಾಪೇಹಿ ಮುಞ್ಚತು'ನ್ತಿ.**

ಗುರುವಿನ ಅಂತ್ಯ ವಚನವಾದ 'ಅಪ್ರಮಾದ'ಕ್ಕೆ ನಾನು ತಲೆಬಾಗುತ್ತೇನೆ. ಎಲ್ಲ ಚೈತ್ಯಗಲಿಗೂ ನನ್ನ ಉಪಾಧ್ಯಾಯರಿಗೂ ಮತ್ತು ಆಚಾರ್ಯರಿಗೂ ನಾನು ವಂದಿಸುತ್ತೇನೆ. ನನ್ನ ಪ್ರಣಾಮ ತೇಜದಿಂದ ಚಿತ್ತವು ಪಾಪಗಳಿಂದ ಬಿಡುಗಡೆ ಹೊಂದಲಿ !

# ಕ್ಷಮಾಯಾಚನೆ

**ಕಾಯೇನ ವಾಚಾ ಚಿತ್ತೇನ ಪಮಾದೇನ ಮಯಾ ಕತಂ,**
**ಅಚ್ಚಯಂ ಖಮ ಮೆ ಭನ್ತೆ ಭೂರಿಪಞ್ಞ ತಥಾಗತ !**

ಭನ್ತೆ, ಜಯಶೀಲರಾದ ಮಹಾಪ್ರಾಜ್ಞರೆ, ಕಾಯದಿಂದಲೂ ಮಾತಿನಿಂದಲೂ ಮನಸ್ಸಿನಿಂದಲೂ ಎಚ್ಚರಿಕೆ ತಪ್ಪಿ ನಾನು ಮಾಡಿದ ತಪ್ಪಿಗೆ ನನ್ನನ್ನು ಕ್ಷಮಿಸಿ.

# ಆಚರಣೆಯ ಪೂಜೆ

**ಇಮಾಯ ಧಮ್ಮಾನುಧಮ್ಮ ಪಟಿಪತ್ತಿಯಾ ಬುದ್ಧಂ ಪೂಜೇಮಿ,**
**ಇಮಾಯ ಧಮ್ಮಾನುಧಮ್ಮ ಪಟಿಪತ್ತಿಯಾ ಧಮ್ಮಂ ಪೂಜೇಮಿ,**
**ಇಮಾಯ ಧಮ್ಮಾನುಧಮ್ಮಪಟಿಪತ್ತಿಯಾ ಸಂಘಂ ಪೂಜೇಮಿ,**

ಈ ಧರ್ಮ ಮಾಡಿ ಆಚರಣೆಯಿಂದ ನಾನುಬುದ್ಧರನ್ನು ಪೂಜಿಸುತ್ತೇನೆ. ಈ ಧರ್ಮ ಆಚರಣೆ ಮಾಡಿ ನಾನು ಧರ್ಮವನ್ನು ಪೂಜಿಸುತ್ತೇನೆ. ಈ ಧರ್ಮ ಆಚರಣೆ ಮಾಡಿ ನಾನು ಸಂಘವನ್ನು ಪೂಜಿಸುತ್ತೇನೆ.

# ಪುಣ್ಯಾನುಮೋದನೆ

೧. **ಅಕಾಸಟ್ಠಾ ಚ ಭುಮ್ಮಟ್ಠಾ ದೇವನಾಗಾ ಮಹಿದ್ಧಿಕಾ,**
**ಪುಞ್ಞಂ ತಂ ಅನುಮೋದಿತ್ವಾ ಚಿರಂ ರಕ್ಖನ್ತುಸಾಸನಂ.**

೨. **ಅಕಾಸಟ್ಠಾ ಚ ಭುಮ್ಮಟ್ಠಾ ದೇವನಾಗಾ ಮಹಿದ್ಧಿಕಾ,**
**ಪುಞ್ಞಂ ತಂ ಅನುಮೋದಿತ್ವಾ ಚಿರಂ ರಕ್ಖನ್ತು ದೇಸನಂ.**

೩. **ಅಕಾಸಟ್ಠಾ ಚ ಭುಮ್ಮಟ್ಠಾ ದೇವನಾಗಾ ಮಹಿದ್ಧಿಕಾ,**
**ಪುಞ್ಞಂ ತಂ ಅನುಮೋದಿತ್ವಾ ಚಿರಂ ರಕ್ಖನ್ತುಮಂ ಪರಂ.**

೪. **ಎತ್ತಾವತಾ ಚ ಅಮ್ಹೇಹಿ ಸಮ್ಭತಂ ಪುಞ್ಞಸಮ್ಪದಂ,**
**ಸಬ್ಬೇ ದೇವಾ ಅನುಮೋದನ್ತು ಸಬ್ಬ ಸಮ್ಪತ್ತಿ ಸಿದ್ಧಿಯಾ**

೫. **ಎತ್ತಾವತಾ ಚ ಅಮ್ಹೇಹಿ ಸಮ್ಭತಂ ಪುಞ್ಞಸಮ್ಪದಂ,**
**ಸಬ್ಬೇ ಭೂತಾ ಅನುಮೋದನ್ತು ಸಬ್ಬ ಸಮ್ಪತ್ತಿ ಸಿದ್ಧಿಯಾ**

೬. **ಎತ್ತಾವತಾ ಚ ಅಮ್ಹೇಹಿ ಸಮ್ಭತಂ ಪುಞ್ಞಸಮ್ಪದಂ,**
**ಸಬ್ಬೇ ಸತ್ತಾ ಅನುಮೋದನ್ತು ನಿಬ್ಬಾಣ ಸಮ್ಪತ್ತಿ ಸಿದ್ಧಿಯಾ**

೧. ಆಕಾಶದಲ್ಲಿನೆಲೆಯಾಗಿರುವ ಮತ್ತು ಭೂಮಿಯಲ್ಲಿ ನೆಲೆಸಿರುವ ಮಹಾಶಕ್ತಿ ಸಂಪನ್ನರಾದ ದೇವತೆಗಳು ಮತ್ತು ನಾಗರು ಈ ಪುಣ್ಯವನ್ನು ಹಂಚಿಕೊಂಡು (ಬುದ್ಧ) ಶಾಸನವನ್ನು ಚಿರಕಾಲ ಕಾಪಾಡಲಿ !

೨. ಆಕಾಶಸ್ಥರಾದ ಮತ್ತು ಭೌಮಸ್ಥರಾದ ಮಹಾಶ್ಕಿ್ತ ಸಂಪನ್ನ ದೇವತೆಗಳು ಮತ್ತು ನಾಗರು ಈ ಪುಣ್ಯವನ್ನು ಹಂಚಿಕೊಂಡು (ಬುದ್ಧರ) ಉಪದೇಶವನ್ನು ಚಿರಕಾಲ ಕಾಪಾಡಲಿ.

೩. ಆಕಾಶಸ್ಥರಾದ ಮತ್ತು ಭೌಮಸ್ಥರಾದ ಮಹಾಶಕ್ತಿ ಸಂಪನ್ನರಾದ ದೇವತೆಗಳುಮತ್ತು ನಾಗರು ಈ ಪುಣ್ಯವನ್ನು ಹಂಚಿಕೊಂಡು ನನ್ನನ್ನು ಮತ್ತು ಇತರರನ್ನು ಚಿರಕಾಲ ಕಾಪಾಡಲಿ.

೪. ನಮ್ಮಿಂದ ಈ ರೀತಿ ಕೂಡಿಸಲ್ಪಟ್ಟ ಪುಣ್ಯ ಸಂಪದವನ್ನು ಎಲ್ಲ ಸಂಪತ್ತಿನ ಸಿದ್ಧಿಗಾಗಿ ಎಲ್ಲ ದೇವತೆಗಳೂ ಹಂಚಿಕೊಳ್ಳಲ!

೫. ನಮ್ಮಿಂದ ಈ ರೀತಿ ಕೂಡಿಸಲ್ಪಟ್ಟ ಪುಣ್ಯ ಸಂಪದವನ್ನು ಎಲ್ಲ ಸಂಪತ್ತಿನ ಸಿದ್ಧಿಗಾಗಿ ಎಲ್ಲ ಭೂತಗಳೂ ಹಂಚಿಕೊಳ್ಳಲಿ !

೬. ನಮ್ಮಿಂದ ಈ ರೀತಿ ಕೂಡಿಸಲ್ಪಟ್ಟ ಪುಣ್ಯ ಸಂಪದವನ್ನು ಎಲ್ಲ ಸಂಪತ್ತಿನ ಸಿದ್ಧಿಗಾಗಿ ಎಲ್ಲ ಜೀವಿಗಳೂ ಹಂಚಿಕೊಳ್ಳಲಿ.

## ಗತಿಸಿದ ಬಂಧುಗಳಿಗೆ ಪುಣ್ಯದಾನ

**ಇದಂ ಮೇ ಞ್ಞಾತೀನಂ ಹೋತು**

**ಸುಖಿತಾ ಹೋನ್ತು ಞಾತಯೋ!**

ಇದು (ಈ ಪುಣ್ಯ) ನನ್ನ ಬಂಧುಗಳಿಗೆ ಉಂಟಾಗಲಿ! ಬಂಧುಗಳು ಸುಖಿಯಾಗಲಿ!

## ಮರಣಾನುಸ್ಸತಿ ಭಾವನಾ

**ಅನಿಚ್ಚಾವತ ಸಙ್ಖಾರಾ ಉಪ್ಪಾದ ವಯಧಮ್ಮಿನೊ,**

**ಉಪ್ಪಜ್ಜಿತ್ವಾ ನಿರುಜ್ಝನ್ತಿ ತೇಸಂ ವೂಪಸಮೊ ಸುಖೊ.**

**ಅದ್ಧುವಂ ಜೀವಿತಂ ; ಧುವಂ ಮರಣಂ;**

ಸಂಸ್ಕಾರಗಳು ಅನಿತ್ಯವಾದುವು. ಹುಟ್ಟು ಮತ್ತು ನಾಶದ ಸ್ವಭಾವದವು, ಉದಯವಾಗಿ ಅಡಗಿಹೋಗುತ್ತವೆ. ಅವುಗಳ ಉಪಶಮನವೇ ಸುಖ.

ಜೀವಿತ ನಿಶ್ಚಿತವಲ್ಲ, ಮರಣ ನಿಶ್ಚಿತ.

## ಪರಿತ್ರಾಣದ ಆರಂಭ

**ವಿಪತ್ತಿ ಪಟಿಬಾಹಾಯ, ಸಬ್ಬ ಸಮ್ಪತ್ತಿ ಸಿದ್ಧಿಯಾ**
**ಸುಬ್ಬದುಕ್ಖಂ ವಿನಾಸಾಯ, ಸಬ್ಬ ಭಯಂ ಘಾಯದಾಕ,**
**ಸುಬ್ಬಲೋಕಂ ಹಿತತ್ಥಾಯ, ಪರಿತ್ತಂ ತಂ ಭಣಾಮಹೇ.**

**ಸಮನ್ತಾ ಚಕ್ಕವಾಲೇಸು ಅತ್ರಾಗಚ್ಛನ್ತು ದೇವತಾ**
**ಸದ್ಧಮ್ಮಂ ಮುನಿರಾಜಸ್ಸ ಸುಣನ್ತು ಸಗ್ಗ ಮೊಕ್ಖದಂ,**
**ಪರಿತಸ್ಸವಣಕಾಲೋ ಅಯಂ ಭದನ್ತಾ**
**ಪರಿತಸ್ಸವಣಕಾಲೋ ಅಯಂ ಭದನ್ತಾ.**
**ಪರಿತಸ್ಸವಣಕಾಲೋ ಅಯಂ ಭದನ್ತಾ.**

ವಿಪತ್ತಿಯನ್ನು ನಿವಾರಿಸುವುದಕ್ಕಾಗಿ, ಎಲ್ಲ ಸಂಪತ್ತಿನ ಸಿದ್ಧಿಗಾಗಿ ಎಲ್ಲ ದುಃಖಗಳನ್ನುತೊಡೆದುಹಾಕುವುದಕ್ಕಾಗಿ, ಎಲ್ಲ ಭಯಗಳನ್ನು ನಾಶ ಮಾಡುವುದಕ್ಕಾಗಿ, ಎಲ್ಲ ರೋಗಗಳನ್ನು ನಿವಾರಿಸುವುದಕ್ಕಾಗಿ, ದೀರ್ಘಾಯಸ್ಸನ್ನು ಕೊಡಲೆಂದು ಇಡೀ ಲೋಕದ ಹಿತಕ್ಕಾಗಿ ಪರಿತ್ರಾಣವನ್ನು ಹೇಳುತ್ತೇನೆ.

ಸುತ್ತಲೂ ಚಕ್ರವಾಳದಲ್ಲಿರುವ ಎಲೈ ದೇವತೆಗಳೇ, ಇಲ್ಲಿ ದಯಮಾಡಿಸಿ, ಸ್ವರ್ಗ ಮತ್ತು ಮೋಕ್ಷವನ್ನು ಕೊಡುವ ಮುನಿರಾಜನ ಸದ್ಧರ್ಮವನ್ನು ಕೇಳಿರಿ. ಎಲೈ ಭದಂತರೆ, ಇದು ಪರಿತ್ರಾಣ ಶ್ರವಣದ ಕಾಲ. ಭದಂತರೆ, ಇದು ಪರಿತ್ರಾಣ ಶ್ರವಣದ ಕಾಲ. ಭದಂತರೆ, ಇದು ಪರಿತ್ರಾಣ ಶ್ರವಣದ ಕಾಲ.

# ರತನ ಸುತ್ತ

೧. ಯಾನೀಧ ಭೂತಾನಿ ಸಮಾಗತಾನಿ
ಭುಮ್ಮಾನಿ ಮಾ ಯಾನಿ ವಾ ಅನ್ತಲಿಕ್ಖೇ,
ಸಬ್ಬೇವ ಭೂತಾ ಸುಮನಾ ಬವನ್ತು
ಅಥೋಂ ಪಿ ಸಕ್ಕಚ್ಚ ಸುಣನ್ತು ಭಾಸಿತಂ.

೨. ತಸ್ಮಾಹಿ ಭೂತಾ ನಿಸಾಮೇಥ ಸಬ್ಬೇ
ಮೆತ್ತಂ ಕರೋಥ ಮಾನುಸಿಯಾ ಪಜಾಯ,
ದಿವಾ ಚ ರತ್ತೋ ಚ ಹರನ್ತಿಯೇ ಬಲಿಂ
ತಸ್ಮಾ ಹಿ ನೆ ರಕ್ಖಥ ಅಪ್ಪಮತ್ತಾ.

೩. ಯಂ ಕಿಞ್ಚಿ ವಿತ್ತಂ ಇಧ ವಾ ಹುರಂ ವಾ
ಸಗ್ಗೇಸು ವಾ'ಯಂ ರತನಂ ಪಣೇತಂ,
ನ ನೋ ಸಮಂ ಅತ್ಥಿ ತಥಾಗತೇನ
ಇದಂ ಪಿ ಬುದ್ಧೇ ರತನಂ ಪಣೀತಂ
ಏತೇನ ಸಚ್ಚೇನ ಸುವತ್ಥಿ ಹೋತು!

೪. ಖಯಂ ವಿರಾಗಂ ಅಮತಂ ಪಣೇತಂ
ಯದಜ್ಝಗಾ ಸಕ್ಯಮುನೀ ಸಮಾಹಿತೋ,
ನ ತೇನ ಧಮ್ಮೇನ ಸಮತ್ಥಿಕಿಞ್ಚಿ
ಇದಂ ಪಿ ಧಮ್ಮೇ ರತನಂ ಪಣೀತಂ
ಏತೇನ ಸಚ್ಚೇನ ಸುವತ್ಥಿ ಹೋತು !

೫. ಯಂ ಬುದ್ಧ ಸೆಟ್ಠೊ ಪರಿವಣ್ಣಯೀ ಸುಚಿಂ
ಸಮಾಧಿಮಾನನ್ತ ರಿಕಞ್ಞ ಮಾಹು,
ಸಮಾಧಿನಾ ತೇನ ಸಮೋ ನ ವಿಜ್ಜತಿ,
ಇದಂ ಪಿ ಧಮ್ಮೇ ರತನಂ ಪಣೀತಂ
ಏತೇನ ಸಚ್ಚೇನ ಸುವತ್ಥಿ ಹೋತು !

೬. ಯೆ ಪುಗ್ಗಲಾ ಅಟ್ಠ ಸತಂ ಪಸತ್ಥಾ
ಚತ್ತಾರಿ ಏತಾನಿ ಯುಗಾನಿ ಹೊನ್ತಿ,
ತೇ ದಕ್ಕಿಣೆಯ್ಯಾ ಸುಗತಸ್ಸ ಸಾವಕಾ
ಏತೇಸು ದಿನ್ನಾನಿ ಮಹಪ್ಫಲಾನಿ,
ಇದಂ ಪಿ ಸಂಘೇ ರತನಂ ಪಣೀತಂ
ಏತೇನ ಸಚ್ಚೇನ ಸುವತ್ಥಿ ಹೋತು !

೭. ಯೇ ಸುಪ್ಪಯುತ್ತಾ ಮನಸಾ ದಳ್ಹೇನ
ನಿಕ್ಕಾಮಿನೋ ಗೋತಮ ಸಾಗನಮ್ಹಿ,
ತೇ ಪತ್ತಿಪತ್ತಾ ಅಮತಂ ವಿಗಯ್ಹ
ಲದ್ಧಾ ಮುಧಾ ನಿಬ್ಬುತಿಂ ಭುಞ್ಜಮಾನಾ
ಇದಂ ಪಿ ಸಂಘೇ ರತನಂ ಪಣೀತಂ
ಏತೇನ ಸಚ್ಚೇನ ಸುವತ್ಥಿ ಹೋತು!

೮. ಯಥಿಂದಖೀಲೊ ಪಠಮಿ ಸಿತೋಸಿಯಾ
ಚತುಬ್ಭಿವಾತೇಹಿ ಅಸಮ್ಪಕಮ್ಪಿಯೋ
ತಥೂಪಮಂ ಸಪ್ಪುರಿಸಂ ವದಾಮಿ
ಯೋ ಅರಿಯಸಚ್ಚಾನಿ ಅವೆಚ್ಚಪಸ್ಸತಿ,
ಇದಂ ಪಿ ಸಂಘೇ ರತನಂ ಪಣೀತಂ
ಏತೇನ ಸಚ್ಚೇನ ಸುವತ್ಥಿ ಹೋತು !

೯. ಯೇ ಅರಿಯ ಸಚ್ಚಾನಿ ವಿಭಾವಯನ್ತಿ
ಗಮ್ಭೀರ ಪಞ್ಞೇನ ಸುದೇಸಿತಾನಿ
ಕಿಞ್ಚಾಪಿ ತೇ ಹೊನ್ತಿ ಭೂಸಪ್ಪಮತ್ತಾ
ನ ತೇಭವಂ ಅಟ್ಠಮಂ ಅದಿಯನ್ತಿ,
ಇದಂ ಪಿ ಸಂಘೇ ರತನಂ ಪಣೀತಂ
ಏತೇನ ಸಚ್ಚೇನ ಸುವತ್ಥಿಹೋತು !

೧೦. ಸಹಾವಸ್ಸ ದಸ್ಸನ ಸಮ್ಪದಾಯ
ತಯಸ್ಸು ಧಮ್ಮಾ ಜಹಿಕಾ ಭವನ್ತಿ,
ಸಕ್ಕಾಯ ದಿಟ್ಠ ವಿಚಿಕಿಚ್ಛಿತಞ್ಚ
ಸೀಲಬ್ಬತಂ ವಾ'ಪಿ ಯದತ್ಥಿಕಿಞ್ಚಿ,
ಚತೂಹ ಪಾಯೇಹಿ ಚ ವಿಪ್ಪಮತ್ತೊ
ಛ ಚಾಭಿಕಾನಾನಿ ಅಭಬ್ಬೊ ಕಾತುಂ.
ಇದಂ ಪಿ ಸಂಘೇ ರತನಂ ಪಣೀತಂ
ಏತೇನ ಸಚ್ಚೇನ ಸುವತ್ಥಿಹೋತು !

೧೧. ಕಿಞ್ಚಾಪಿ ಸೋ ಕಮ್ಮಂ ಕರೋತಿ ಪಾಪಕಂ
ಕಾಯೇನ ವಾಚಾ ಉದ ಚೇತಸಾ ವಾ
ಅಭಬ್ಬೊ ಸೋ ತಸ್ಸ ಪಟಿಚ್ಛಾದಾಯ
ಅಭಬ್ಬತಾ ದಿಟ್ಠಪದಸ್ಸ ವುತ್ತಾ,
ಇದಂ ಪಿ ಸಂಘೇ ರತನಂ ಪಣೀತಂ
ಏತೇನ ಸಚ್ಚೇನ ಸುವತ್ಥಿ ಹೋತು !

೧೨. ವನಪ್ಪಗುಮ್ಬೇ ಯಥಾಪುಸ್ಸಿತಗ್ಗೇ,
ಗಿಮ್ಹಾನಮಾಸೆ ಪಠಮಸ್ಮಿಂ ಗಿಮ್ಹೇ,
ತಥೂಪಮಂ ಧಮ್ಮವರಂ ಅದೇಸಯಿ
ನಿಬ್ಬಾನಗಾಮಿಂ ಪರಮಂ ಹಿತ್ಯಾಯ
ಇದಂ ಪಿ ಬುದ್ಧೇ ರತನಂ ಪಣೀತಂ
ಏತೇನ ಸಚ್ಚೇನ ಸುವತ್ಥಿಹೋತು !

೧೩. ವರೋ ವರಞ್ಞೂ ವರದೊ ವರಾಹರೋ
ಅನುತ್ತರೋ ಧಮ್ಮವರಂ ಅದೇಸಯಿ,
ಇದಂ ಪಿ ಬುದ್ಧೇ ರತನಂ ಪಣೀತಂ
ಏತೇನ ಸಚ್ಚೇನ ಸುವತ್ಥಿ ಹೋತು !

೧೪. ಖೀಣಂ ಪುರಾಣಂ ನವಂ ನತ್ಥಿ ಸಮ್ಭವಂ
ವಿರತ್ತ ಚಿತ್ತಾ ಆಯತಿಕೇ ಭವಸ್ಮಿಂ
ತೇ ಖೀಣಬೀಜಾ ಅವಿರೂಳ್ಹಿಛನ್ದಾ
ನಿಬ್ಬನ್ತಿ ಧೀರಾ ಯಥಾ'ಯಂ ಪದೀಪೋ,
ಇದಂ ಪಿ ಸಂಘೇ ರತನಂ ಪಣೀತಂ
ಏತೇನ ಸಚ್ಚೇನ ಸುವತ್ಥಿ ಹೋತು!

೧೫. ಯಾನೀಧ ಭೂತಾನಿ ಸಮಾಗತಾನಿ
ಭುಮ್ಮಾನಿ ವಾಯಾನಿ ವಾ ಅನ್ತಲಿಕ್ಖೇ
ತಥಾಗತಂ ದೇವಮನುಸ್ಸ ಪೂಜಿತಂ
ಬುದ್ಧಂ ನಮಸ್ಸಾಮ ಸುವತ್ಥಿಹೋತು !

೧೬. ಯಾನೀಧ ಭೂತಾನಿ ಸಮಾಗತಾನಿ
ಭುಮ್ಮಾನಿ ವಾಯಾನಿ ವಾ ಅನ್ತಲಿಕ್ಕೇ
ತಥಾಗತಂ ದೇವ ಮನಸ್ಸ ಪೂಜಿತಂ
ಧಮ್ಮಂ ನಮಸ್ಸಾಮ ಸುವತ್ಥಿ ಹೋತು !

೧೭. ಯಾನೀಧ ಭೂತಾನಿ ಸಮಾಗತಾನಿ
ಭುಮ್ಮಾನಿ ವಾಯಾನಿ ವಾ ಅನ್ತಲಿಕ್ಖೇ
ತಥಾಗತಂ ದೇವಮನುಸ್ಸ ಪೂಜಿತಂ
ಸಂಘಂ ನಮಸ್ಸಾಮ ಸುವತ್ಥಿ ಹೋತು !

೧. ಇಲ್ಲಿ ಯಾವ ಭೂತಗಣಗಳು ನೆರೆದಿವೆಯೋ-ಭೂಮಿಯಲ್ಲಾಗಲಿ ಅತವಾ ಅಂತರಿನದಲ್ಲಿಯಾಗಲೀ ಇರುವ-ಎಲ್ಲ ಭೂತಗಳೂ ನಿರ್ಮಲ ಚಿತ್ತರಾಗಲಿ, ಮತ್ತು ಹೇಳಿದುದನ್ನು ಮನಸ್ಸಿಟ್ಟು ಕೇಳಲಿ.

೨. ಎಲ್ಲೈ ಭೂತಗಣಗಳೇ, ಎಲ್ಲರೂ ಸರಿಯಾಗಿ ಕೇಳಿರಿ. ಮಾನವನು ನಿಮಗೆ ಹಗಲು ಮತ್ತು ರಾತ್ರಿಗಳಲ್ಲಿ ಬಲಿಯನ್ನು ಅರ್ಪಿಸುವುದರಿಂದ ಅವರ ಬಗ್ಗೆ ನೀವು ಮೈತ್ರಿಯನ್ನು ತೋರಿಸಿ ಮತ್ತು ಜಾಗರೂಕತೆಯಿಂದ ಅವರನ್ನು ಕಾಪಾಡಿ.

೩. ಇಹದಲ್ಲೇ ಆಗಲಿ ಅಥವಾ ಪರದಲ್ಲೇ ಯಾವ ಐಶ್ವರ್ಯವಿದ್ದರೂ, ಅಥವಾ ಸ್ವರ್ಗಗಳಲ್ಲಿ ಯಾವುದೇ ಶ್ರೇಷ್ಠ ರತ್ನವಿದ್ದರೂ, ಅವಾವುವೂ ತಥಾಗತನಿಗೆ ಸಮವಲ್ಲ. ಇದು ನಿಜವಾಗಿಯೂ ಬುದ್ಧರಲ್ಲಿನ ಶ್ರೇಷ್ಠ ರತ್ನ. ಈ ಸತ್ಯದಿಂದ ಸ್ವಸ್ತಿಯಾಗಲಿ !

೪. ಯಾವ (ತೃಷ್ಣೆಯ) ನಾಶವನ್ನು, ವೈರಾಗ್ಯವನ್ನು ಮತ್ತು ಶ್ರೇಷ್ಠವಾದ ಅಮೃತವನ್ನು ಶಾಕ್ಯಮುನಿಯು ಸಮಾಧಿಯಿಂದ ಪಡೆದುಕೊಂಡನೋ, ಅದಕ್ಕೆ ಸಮನಾದ ಧರ್ಮವಾವುದೂ ಇಲ್ಲ. ಇದು ನಿಜವಾಗಿಯೂ ಧರ್ಮದಲ್ಲಿನ ಶ್ರೇಷ್ಠ ರತ್ನ. ಈ ಸತ್ಯದಿಂದ ಸ್ವಸ್ತಿಯಾಗಲಿ !

೫. ಬುದ್ಧ ಶ್ರೇಷ್ಠನು ಯಾವು ಪರಿಶುದ್ಧವಾದ ಹಾಗೂ ಆಗಿಂದಾಗಲೇ ಫಲವನ್ನು ಕೊಡುವ ಸಮಾಧಿಯನ್ನು ಹೊಗಳಿದನೋ, ಆ ಸಮಾಧಿಗೆ ಸಮನಾದುದು ಇಲ್ಲ. ಇದು ನಿಜವಾಗಿಯೂ ಧರ್ಮದಲ್ಲಿನ ಶ್ರೇಷ್ಠ ರತ್ನ. ಈ ಸತ್ಯದಿಂದ ಸ್ವಸ್ತಿಯಾಗಲಿ !

೬. ಸಂತರಿಂದ ಹೊಗಳಲ್ಪಟ್ಟ ಯಾವ ಎಂಟು ವ್ಯಕ್ತಿಗಳಿದ್ದಾರೆಯೋ ಅವರು ನಾಲ್ಕು ಜೋಡಿಗಳಾಗಿರುತ್ತಾರೆ. ಸುಗತನ ಆ ಶ್ರಾವಕರು ದಾನಕ್ಕೆ ಅರ್ಹರಾದವರು ಇವರಿಗೆ ಕೊಟ್ಟದ್ದು ಮಹಾಫಲದಾಯಕವು. ಇದು ನಿಜವಾಗಿಯೂ ಸಂಘದಲ್ಲಿನ ಶ್ರೇಷ್ಠ ರತ್ನ. ಈ ಸತ್ಯದಿಂದ ಸ್ವಸ್ತಿಯಾಗಲಿ !

೭. ಯಾರು ನಿಷ್ಕಾಮಿಗಳಾಗಿ ಗೌತಮನ ಶಾಸನದಲ್ಲಿ ದೃಢಮನಸ್ಕರಾಗಿ ತಮ್ಮನ್ನು ತಾವು ನಿಯೋಜಿಸಿಕೊಂಡಿರುತ್ತಾರೊ ಅವರು ಅಮೃತತ್ವದಲ್ಲಿ ಮುಳುಗಿ ಪಡೆಯಬೇಕಾದುದನ್ನು ಪಡೆದವರಾಗಿರುತ್ತಾರೆ. ಸೂಕ್ತವಾಗಿ ಅವರು ಶಾಂತಿಯನ್ನು ಅನುಭವಿಸುತ್ತಾರೆ. ಇದು ನಿಜವಾಗಿಯೂ ಸಂಘದಲ್ಲಿನ ಶ್ರೇಷ್ಠ ರತ್ನ. ಈ ಸತ್ಯದಿಂದ ಸ್ವಸ್ತಿಯಾಗಲಿ !

೮. ಯಾವ ರೀತಿ ಭೂಮಿಯಲ್ಲಿ ಹುಗುಯಲ್ಪಟ್ಟ ನಗರ ದ್ವಾರದ ಕಂಭವು ನಾಲ್ಕು ದಿಕ್ಕಿನ ಗುಣಗಳಿಂದಾಗಿ ಅಲ್ಲಾಡದಿರುತ್ತದೆಯೊ, ಅದೇ ರೀತಿ ಆರ್ಯಸತ್ವಗಳನ್ನು ಸುಸ್ಪಷ್ಟವಾಗಿ ನೋಡಿದ ಸತ್ಪುರುಷನಿರುತ್ತಾನೆ

ಎಂಬುದಾಗಿ ಸಾರುತ್ತೇನೆ. ಇದು ನಿಜವಾಗಿಯೂ ಸಂಘದಲ್ಲಿನ ಶ್ರೇಷ್ಠ ರತ್ನ. ಈ ಸತ್ಯದಿಂದ ಸ್ವಸ್ತಿಯಾಗಲಿ !

೯. ಗಂಭೀರ ಪ್ರಾಜ್ಞನಿಂದ ಸಂಭೋಧಿತವಾದ ಆರ್ಯ ಸತ್ಯಗಳನ್ನು ಯಾರುಸರಿಯಾಗಿ ತಿಳಿದುಕೊಳ್ಳುತ್ತಾರೊ, ಅವರು ಅದೆಷ್ಟು ಹೆಚ್ಚಿನ ಪ್ರಪಮತ್ತರಾದರೂ ಕೂಡ ಎಂಟನೆಯ ಜನ್ಮವನ್ನು ತಳೆಯುವುದಿಲ್ಲ. ಇದು ನಿಜವಾಗಿಯೂ ಸಂಘದಲ್ಲಿನ ಶ್ರೇಷ್ಠ ರತ್ನ. ಈ ಸತ್ಯದಿಂದ ಸ್ವಸ್ತಿಯಾಗಲಿ !

೧೦. ದರ್ಶನವು ಹುಟ್ಟಿಕೊಂಡೆಡನೆಯ ಮೂರು ಧರ್ಮಗಳಾದ ಸತ್ಕಾಯ ದೃಷ್ಟಿ, ವಿಚಿಕಿತ್ಸೆ (ಸಂದೇಹ ಮತ್ತು ಶೀಲ ವ್ರತವೇನಾದರೂ ಇದ್ದರೆ, ಅದು ಆತನಿಂದ ತೊಡೆದು ಹಾಕಲ್ಪಡುತ್ತವೆ.)ಆತನು ನಾಲ್ಕು ನರಕ ಸ್ಥಿತಿಗಳಿಂದ ಸಂಪೂರ್ಣವಾಗಿ ಮುಕ್ತನಾಗುತ್ತೆ. ಆರು ಘೋರಕೃತ್ಯಗಳನ್ನು ಎಸಗಲು ಆತನುಅಸಮರ್ಥನಾಗುತ್ತಾನೆ. ಇದು ನಿಜವಾಗಿಯೂ ಸಂಘದಲ್ಲಿನ ಶ್ರೇಷ್ಠರತ್ನ. ಈ ಸತ್ಯದಿಂದ ಸ್ವಸ್ತಿಯಾಗಲಿ!

೧೧. ಕಾರ್ಯದಿಂದಾಗಲಿ, ಮಾತಿನಿಂದಾಗಲಿ ಅಥವಾ ಮನಸ್ಸಿನಿಂದಾಗಲಿ ಪಾಪಕಾರ್ಯವನ್ನೇನಾದರೂ ಆತನುಮಾಡಿದ ಪಕ್ಷದಲ್ಲಿ ಅದನ್ನುಮುಚ್ಚಿಡುವುದು ಆತನಿಗೆ ಅಸಾಧ್ಯ. ಏಕೆಂದರೆ ನಿರ್ವಾಣವನ್ನು ಕಂಡವನಿಗೆ ಅಂತಹದೊಂದು ಅಸಾಧ್ಯ. ಇದು ನಿಜವಾಗಿಯೂ ಸಂಘದಲ್ಲಿನ ಶ್ರೇಷ್ಠರತ್ನ.

೧೨. ಬೇಸಗೆಯ ಪ್ರಾರಂಭದಲ್ಲಿಸಾಂದರವಾದ ವನವು ಯಾವ ರೀತಿ ವಿಕಸಿದ ಕುಸುಮಗಳಿಂದ ಕೂಡಿರುತ್ತದೊ, ಅದೇ ರೀತಿ ಪರಮಹಿತಕ್ಕಾಗಿ ನಿಬ್ಬಾನಕ್ಕೆ ಕೊಂಡೊಯ್ಯುವ ಶ್ರೇಷ್ಠ ಧರ್ಮವನ್ನು ಭಗವಾನರು ಬೋಧಿಸಿದರು. ಇದು ನಿಜವಾಗಿಯೂ ಬುದ್ಧರಲ್ಲಿನ ಶ್ರೇಷ್ಠ ರತ್ನ. ಈ ಸತ್ಯ ವಚನದಿಂದ ಸ್ವಸ್ತಿಯಾಗಲಿ !

೧೩. ಸರ್ವಶ್ರೇಷ್ಠ ನಿಬ್ಬಾನ) ದಾತನೂ ಶ್ರೇಷ್ಠ ಧರ್ಮವನ್ನು ಅರಿತಿರುವವನೂ, ಶ್ರೇಷ್ಠವನ್ನು ತರುವವರೂ ಮತ್ತು ಅಸಮಾನರೂ

(ಆದ ಬುದ್ಧರು) ಶ್ರೇಷ್ಠ ಧರ್ಮವನ್ನು ಬೋಧಿಸಿದರು. ಇದು ನಿಜವಾಗಿಯೂ ಬುದ್ಧರಲ್ಲಿನ ಶ್ರೇಷ್ಠರತ್ನ. ಈ ಸತ್ಯದಿಂದ ಸ್ವಸ್ತಿಯಾಗಲಿ !

೧೪. ಹಿಂದಿನದು ನಶಿಸಿಹೋಯಿತು; ಹೊಸದಾಗಿ ಹುಟ್ಟುವಿಕೆಯಿಲ್ಲ; ಮುಂದಿನ ಭವದ ಬಗ್ಗೆ ಚಿತ್ತವು ವಿರಕ್ತವಾಯಿತು. (ಭವದ) ಬೀಜವನ್ನು ನಾಶಮಾಡಿಕೊಂಡು ಮತ್ತು ವಿಕಾರರಹಿತವಾದ ಧೀರರು ಈ ಪ್ರದೀಪದಂತೆ ಆರಿಹೋಗುತ್ತಾರೆ. ಇದು ನಿಜವಾಗಿಯೂ ಸಂಘದಲ್ಲಿನ ಶ್ರೇಷ್ಠ ರತ್ನ. ಈ ಸತ್ಯದಿಂದ ಸ್ವಸ್ತಿಯಾಗಲಿ !

೧೫. ಇಲ್ಲಿ ಯಾವ ಭೂತಗಣಗಳು ನೆರೆದಿರಲಿ, ಭೂಮಿಯಲ್ಲಾಗಲೀ ಅಥವಾಅಂತರಿನದಲ್ಲಾಗಲೀ, ದೇಮಾನವರಿಂದ ಪೂಜಿತರಾದ ತಥಾಗತ ಬುದ್ಧರಿಗೆ ನಾವು ನಮಸ್ಕರಿಸೋಣ; ಸ್ವಸ್ತಿಯಾಗಲಿ !

೧೬. ಇಲ್ಲಿ ಯಾವ ಭೂತಗಣಗಳು ನೆರೆದಿರಲು-ಭೂಮಿಯಲ್ಲಿ ನೆಲೆಸಿರುವವಾಗಲಿ ಅಥವಾ ಆಕಾಶದಲ್ಲಿ ನೆಲೆಸಿರುವವಾಗಲಿ- ದೇಮಾನವರಿಂದ ಪೂಜಿತರಾಗಿರುವ ತಥಾಗತರಿಗೆ ಮತ್ತು ಧರ್ಮಕ್ಕೆ ನಾವು ನಮಸ್ಕರಿಸೋಣ; ಸ್ವಸ್ತಿಯಾಗಲಿ !

೧೭. ಇಲ್ಲಿ ಯಾವ ಭೂತಗಣಗಳು ನೆರೆದಿರಲಿ, ಭೂಮಿಯಲ್ಲಾಗಲೀ ಅಥವಾ ಅಂತರಿಕ್ಷದಲ್ಲಾಗಲೀ, ದೇಮಾನವರಿಂದ ಪೂಜಿತರಾದ ತಥಾಗತರಿಗೆ ಮತ್ತು ಸಂಘಕ್ಕೆ ನಾವು ನಮಸ್ಕರಿಸೋಣ ; ಸ್ವಸ್ತಿಯಾಗಲಿ!

# ಮಹಾಮಂಗಳ ಸುತ್ತ

ಏವಂ ಮೇ ಸುತಂ, ಏಕಂ ಸಮಯಂ ಭಗವಾ
ಸಾವತ್ತಿಯಂ ವಿಹರತಿ ಜೇತವನೆ ಅನಾಥಪಿಣ್ಡಿಕಸ್ಸ ಆರಾಮೇ.
ಅಥ ಖೋ ಅಞ್ಞತರಾ ದೇವತಾ ಅಭಿಕ್ಕನ್ತಾಯರತ್ತಿಯಾ
ಅಭಿಕ್ಕನ್ನ ವಣ್ಣಾ ಕೇವಲ ಕಪ್ಪಂ ಜೇತವನಂ ಒಭಾಸೆತ್ವಾಯೇನ
ಭಗವಾ, ತೇನು' ಪಸಜ್ಕಮಿತ್ವಾ, ಉಪಸಜ್ಕಮಿತ್ವಾ ಭಗವನ್ತಂ
ಅಭಿವಾದೆತ್ವಾ ಏಕಮನ್ತಂ ಅಟ್ಠಾಸಿ, ಏಕಮನ್ತಂಠಿತಾ ಖೋ
ಸಾ ದೇವತಾ ಭಗವನ್ತಂ ಗಾಥಾಯ ಅಜ್ಝಭಾಸಿ.

೧. ಬಹೂದೇವಾ ಮನಸ್ಸಾ ಚ ಮಙ್ಗಳಾನಿ ಅಚಿನ್ತಯಂ,
ಅಕಙ್ಗಮಾನಾ ಸೊತ್ಥಾನಂ ಬ್ರೂಹಿ ಮಙ್ಗಳ ಮುತ್ತಮಂ,

೨. ಅಸೇವನಾ ಚ ಬಾಲಾನಂ ಪಣ್ಡಿತಾನಞ್ಚ ಸೇವನಾ,
ಪೂಜಾ ಚ ಪೂಜನೀಯಾನಂ, ಏತಂ ಮಙ್ಗಳಮುತ್ತಮಂ.

೩. ಪತಿರೂಪ ದೇಸವಾಸೋ ಚ ಪುಬ್ಬೇ ಚ ಕತಪುಞ್ಞತಾ,
ಅತ್ತಸಮ್ಮಾ ಪಣಧಿ ಚ, ಏತಂ ಮಙ್ಗಲಮುತ್ತಮಂ.

೪. ಬಾಹುಸಚ್ಚಞ್ಚ ಸಿಪ್ಪಞ್ಚ ವಿನಯೋ ಚ ಸುಸಿಕ್ಖಿತೊ,
ಸುಭಾಷಿತಾ ಚ ಯಾ ವಾಚಾ, ಏತಂ ಮಙ್ಗಳ ಮುತ್ತಮಂ.

೫. ಮತಾಪಿತು ಉಪಟ್ಠಾನಂ ಪುತ್ತದಾರಸ್ಸ ಸಙ್ಗಹೊ,
ಅನಾಕುಲ ಚ ಕಮ್ಮನ್ತಾ-ಏತಂ, ಮಙ್ಗಳಮುತ್ತಮಂ.

೬. ದಾನಞ್ಚ ಧಮ್ಮಚರಿಯಾಚ ಞಾತಕಾನಞ್ಚ ಸಙ್ಗಹೊ,
ಅನವಜ್ಜಾನಿ ಕಮ್ಮಾನಿ-ಏತಂ, ಮಙ್ಗಳಮುತ್ತಮಂ.

೭. ಆರತಿ ವರತಿ ಪಾಪಾ ಮಜ್ಜಪಾನಾ ಚ ಸಞ್ಞಮೊ,
ಅಪ್ಪಮಾದೊ ಚ ದಮ್ಮೇಸು, ಏತಂ, ಮಙ್ಗಳ ಮುತ್ತಮಂ.

೮. ಗಾರವೊ ಚ ನಿವಾತೊ ಚ ಸನ್ತಿಟ್ಠೀ ಚ ಕತಞ್ಞತಾ,
ಕಾಲೇನ ಧಮ್ಮಾಸವಣಂ - ಏತಂ ಮಙ್ಗಳಮುತ್ತಮಂ.

೯. ಖನ್ತೀ ಚ ಸೋವಚಸ್ಸತಾ ಸಮಣಾನಞ್ಚ ದಸ್ಸನಂ,
ಕಾಲೇನ ಧಮ್ಮ ಸಾಕಚ್ಛಾ - ಏತಂ ಮಙ್ಗಳಮುತ್ತಮಂ.

೧೦. ತಪೋಚ ಬ್ರಹ್ಮಚರಿಯಾ ಚ ಅರಿಯ ಸಚ್ಚಾನ ದಸ್ಸನಂ
ನಿಬ್ಬಾನ ಸಚ್ಛಿಕಿರಿಯಾ ಚ-ಏತಂ, ಮಙ್ಗಳಮುತ್ತಮಂ.

೧೧. ಪುಟ್ಠಸ್ಸ ಲೋಕಧಮ್ಮೇಹಿ ಚಿತ್ತಂ ಯಸ್ಸ ನ ಕಮ್ಪತಿ,
ಅಸೋಕ ವಿರಜಂ ಖೇಮಂ, ಏತಂ ಮಙ್ಗಳ ಮುತ್ತಮಂ.

೧೨. ಏತಾದಿಸಾನಿ ಕತ್ವಾನ ಸಬ್ಬತ್ಥಮಪರಾಜಿತಾ,
ಸಬ್ಬತ್ಥಸೊತ್ಥಿಂ ಗಚ್ಛನ್ತಿತಂ ತೇಸಂ ಮಙ್ಗಳಮುತ್ತಮನ್ತಿ.

ಇಂತು ನಾನು ಕೇಳಿರುವೆನು, ಒಂದು ಸಮಯದಲ್ಲಿ ಭಗವಂತರು ಶ್ರಾವಸ್ಥಿಯ ಜೇತವನದ ಅನಾಥಪಿಂಡಿಕನ ವಿಹಾರದಲ್ಲಿ ತಂಗಿದ್ದರು. ಆಗ ಒಬ್ಬ ದೇವತೆಯು ರಾತ್ರಿ ಕಳೆದಾಗ (ಬೆಳಗಿನ ಜಾವದಲ್ಲಿ) ವಿಶೇಷವಾದ ಕಾಂತಿಯಿಂದ ಇಡೀ ಜೇತವನವನ್ನು ಬೆಳಗಿಸುತ್ತಾ ಭಗವಾನರ ಹತ್ತಿರ ಬಂದಳು. ಸಮೀಪಕ್ಕೆ ಬಂದು ಭಗವಾನರಿಗೆ ನಮಸ್ಕರಿಸಿ ಒಂದೆಡೆಯಲ್ಲಿ ನಿಂತುಕೊಂಡಳು. ಮತ್ತು ಭಗವಂತನನ್ನು ಗಾಥೆಯ ಮೂಲಕ ಸಂಬೋಧಿಸಿದಳು.

೧. ಅನೇಕ ದೇವತೆಗಳು ಮತ್ತು ಮಾನವರು ಸ್ವಸ್ತಿಗಳನ್ನು ಬಯಸುತ್ತಾ ಮಂಗಳಗಳನ್ನುಕುರಿತು ಚಿಂತನೆ ನಡೆಸಿದರು. ಉತ್ತಮವಾದ ಮಂಗಳವಾವುದೆಂಬುದನ್ನು ನಮಗೆ ಹೇಳಿ :-

೨. ಮೂರ್ಖರ ಸಹವಾಸ ಮಾಡದಿರುವುದು, ಜ್ಞಾನಿಗಳ ಜೊತೆ ಬೆರೆಯುವುದು, ಪೂಜ್ಯರನ್ನು ಪೂಜಿಸುವುದು — ಇದು ಉತ್ತಮವಾದ ಮಂಗಳವಾಗಿದೆ.

೩. ಯೋಗ್ಯಪ್ರದೇಶದಲ್ಲಿ ವಾಸಿಸುವುದು, ಹಿಂದೆ ಪುಣ್ಯವನ್ನು ಮಾಡಿರುವುದು, ಸರಿಯಾದ ದಿಸೆಯಲ್ಲಿತನ್ನನ್ನು ತಾನು ನಡೆಸಿಕೊಳ್ಳುವುದು — ಇದು ಉತ್ತಮವಾದ ಮಂಗಳವಾಗಿದೆ.

೪. ಆಳವಾದ ಜ್ಞಾನ, ಕುಶಲವಿದ್ಯೆ, ಸುಶಿಕ್ಷಿತವಾದ ವಿನಯ ಮತ್ತು ಸುಭಾಷಿತವಾದ ಮಾತು — ಇವು ಉತ್ತಮವಾದ ಮಂಗಳವಾಗಿದೆ.

೫. ತಾಯಿ ತಂದೆಯರ ಸೇವೆ, ಹೆಂಡತಿ ಮಕ್ಕಳನ್ನುಸಲಹುವುದು ಮತ್ತು ಬಂಧನವಿಲ್ಲದ ಕರ್ತವ್ಯಗಳು -- ಇದು ಉತ್ತಮವಾದ ಮಂಗಳವಾಗಿದೆ.

೬. ದಾನ, ಧರ್ಮಕ್ಕನುಸಾರವಾಗಿ ನಡೆಯುವುದು, ಬಂಧುಗಳಿಗೆ ಸಹಾಯ ಮಾಡುವುದು ಮತ್ತು ವರ್ಜ್ಯವಲ್ಲದ ಕಾರ್ಯಗಳನ್ನು ಮಾಡುವುದು. ಇದು ಉತ್ತಮವಾದ ಮಂಗಳವಾಗಿದೆ.

೭. ಪಾಪದಿಂದ ವಿರಾಮ ಮ್ತು ವಿರತಿ, ಮದ್ಯಪಾನದಲ್ಲಿ ಸಂಯಮ, ಧರ್ಮ (ಕಾರ್ಯ)ಗಳಲ್ಲಿ ಜಾಗೃತನಾಗಿರುವುದು — ಇದು ಉತ್ತಮವಾದ ಮಂಗಳವಾಗಿವೆ.

೮. ಗೌರವ, ನಮ್ರತೆ, ಸಂತುಷ್ಟಿ, ಕೃತಜ್ಞತೆ ಮತ್ತು ಸಕಾಲದಲ್ಲಿ ಧರ್ಮಶ್ರವಣ—ಇವು ಉತ್ತಮವಾದ ಮಂಗಳವಾಗಿವೆ.

೯. ಕ್ಷಾಂತಿ, ಒಳ್ಳೆಯ ಮಾತು, ಶ್ರಮಣರ ದರ್ಶನ ಮತ್ತು ಸಕಾಲದಲ್ಲಿ ಧರ್ಮ ಚರ್ಚೆ — ಇವು ಉತ್ತಮವಾದ ಮಂಗಳವಾಗಿದೆ.

10. ತಪಸ್ಸು, ಬ್ರಹ್ಮಚರ್ಯೆ, ಚತುರಾರ್ಯ ಸತ್ಯಗಳ ದರ್ಶನ, ನಿರ್ವಾಣ ಸಾಕ್ಷಾತ್ಕಾರ — ಇವು ಉತ್ತಮವಾದ ಮಂಗಳವಾಗಿದೆ.

11. ಲೋಕ ಧರ್ಮಗಳಿಂದ ಸೋಂಕಲ್ಪಟ್ಟರೂ ಯಾರ ಚಿತ್ತವು ಕಂಪಿತ ವಾಗದಿರುತ್ತದೆಯೋ ಅವರು ಶೋಕವಿಲ್ಲದೆ ವಿರಜವಾಗಿಯೂ ಕ್ಷೇಮ ವಾಗಿಯೂ ಇರುತ್ತಾರೆ — ಇದು ಉತ್ತಮವಾದ ಮಂಗಳವಾಗಿದೆ.

12. ಇಂಥವುಗಳನ್ನು ನೆರವೇರಿಸಿಕೊಂಡವರು ಎಲ್ಲೂ ಸೋಲದೆ ಎಲ್ಲೆಲ್ಲೂ ಕ್ಷೇಮವಾಗಿ ಇರುತ್ತಾರೆ — ಇದು ಉತ್ತಮವಾದ ಮಂಗಳ.

# ಕರಣೀಯಮೆತ್ತ ಸುತ್ತ

೧. ಕರಣೀಯಮತ್ಥ ಕುಸಲೇನ
ಯಂ ತಂ ಸಂತಂ ಪದಂ ಅಭಿಸಮೆಚ್ಚ
ಸಕ್ಕೋ ಉಜೂ ಚ ಸೂಜೂ ಚ
ಸುವಚೋ ಚ'ಸ್ಸ ಮುದು ಅನತಿಮಾನೀ.

೨. ಸಂತುಸ್ಸಕೋ ಚ ಸುಭರೋ ಚ
ಅಪ್ಪಕಿಚ್ಚೋ ಚ ಸಲ್ಲಹುಕ ವುತ್ತಿ
ಸನ್ತಿನ್ದ್ರಿಯೋ ಚ ನಿಪಕೋ ಚ
ಅಪ್ಪಗಬ್ಭೋ ಕುಲೇಸು ಅನನುಗಿದ್ಧೋ.

೩. ನಚ ಖುದ್ಧಂ ಸಮಾಚರೆ ಕಿಞ್ಚಿ
ಯೇನ ವಿಞ್ಞೂಪರೆ ಉಪವದೆಯ್ಯುಂ,
ಸುಖಿನೋವಾ ಖೇಮಿನೋ ಹೊನ್ತು
ಸಬ್ಬೇ ಸತ್ತಾ ಭವನ್ತು ಸುಖಿತತ್ತಾ.

೪. ಯೇ ಕೇಚ ಪಾಣಭೂತತ್ಥಿ
ತಸಾ ವ ಥವರಾ ವಾ ಅನವಸೇಸಾ
ದೀಘಾ ವಾ ಯೇ ಮಹನ್ತಾ ವಾ
ಮಜ್ಝಿಮಾ ರಸ್ಸಕಾ ಅಮಿಕ ಥೂಲಾ.

೫. ದಿಟ್ಠಾ ವಾ ಯೇವ ಅದಿಟ್ಠಾ
ಯೇ ಚ ದೂರೇ ವಸನ್ತಿ ಅವಿದೂರೇ
ಭೂತಾ ವಾ ಸಮ್ಭವೇಸೀ ವಾ
ಸಬ್ಬೇ ಸತ್ತಾ ಭವನ್ತು ಸುಖಿತತ್ತಾ.

೬. ನ ಪರೋ ಪರಂ ನಿಕುಬ್ಬೇಥ
ನಾ'ತಿ ಮಞ್ಞೇಥ ಕತ್ಥಚಿ ಕಞ್ಚಿ
ಬ್ಯಾರೋಸನಾ ಪಟಿಘಸಞ್ಞಾ
ನಾಞ್ಞ ಮಞ್ಞಸ್ಸ ದುಕ್ಖಮಿಚ್ಛೆಯ್ಯ.

೭. ಮಾತಾ ಯಥಾ ನಿಯಂ ಪುತ್ತಂ
ಆಯುಸಾ ಏಕಪುತ್ತಮನುರಕ್ಖೇ,
ಏವಂಪಿ ಸಬ್ಬಭೂತೇಸು
ಮಾನಸಂ ಬಾವಯೇ ಅಪರಿಮಾಣಂ,

೮. ಮೆತ್ತಞ್ಚೇ ಸಬ್ಬಲೋಕಸ್ಮಿಂ
ಮಾನಸಂ ಬಾವಯೇ ಅಪರಿಮಾಣಂ,
ಉದ್ಧಂ ಅಧೋಚ ತಿರಿಯಞ್ಚ
ಅಸಮ್ಬಾಧಂ ಅವೇರಂ ಅಸಪತ್ತಂ.

೯. ತಿಟ್ಠಂ ಚರಂ ನಿಸ್ಸಿನ್ನೋ ವಾ
ಸಯಾನೋ ವಾ ಯಾವತಸ್ಸ ವಿಗತಮಿದ್ಧೋ,
ಏತಂ ಸತಿಂ ಅಧಿಟ್ಠೆಯ್ಯ
ಬ್ರಹ್ಮಮೇತಂ ವಿಹಾರಂ ಇದಮಾಹು.

೧೦. ದಿಟ್ಠಿಞ್ಚ ಅನುಪಗಮ್ಮ
ಸೀಲವಾ ದಸ್ಸನೇನ ಸಮ್ಪನ್ನೋ
ಕಾಮೇಸು ವಿನೆಯ್ಯ ಗೇಧಂ
ನಹಿ ಜಾತು ಗಬ್ಬಸೆಯ್ಯಂ ಪುನರೇತೀ'ತಿ.

# ಮಹಾ ಜಯ ಮಂಗಳ ಗಾಥಾ

೧. ಮಹಾಕಾರುಣಿಕೋ ನಾಥೋ
ಹಿತಾಯ ಸಬ್ಬ ಪಾಣೀನಂ,
ಪೂರೆತ್ವಾ ಪಾರಮೀ ಸಬ್ಬಾಂ ಪತ್ತೋ
ಸಂಬೋಧಿ ಮುತ್ತಮಂ
ಏತೇನ ಸಚ್ಚವಜ್ಜೇನ ಹೋತು ತೇ ಜಯಮಙ್ಗಳಂ

೨. ಜಯನ್ತೋ ಬೋಧಿಯಾ ಮೂಲೆ
ಸಕ್ಯಾನಂ ನನ್ದಿನಡ್ಢನೊ,
ಏವಂ ತುಯ್ಹಂ ಜಯೋಹೋತು
ಜಯಸ್ಸು ಜಯಮಙ್ಗಳಂ.

೩. ಸಕ್ಕತ್ವಾ ಬುದ್ಧರತನಂ ಓಷಧಂ ಉತ್ತಮಂ ವರಂ,
ಹಿತಂ ದೇವಮನುಸ್ಸಾನಂ ಬುದ್ಧ ತೇಜೇನ ಸೊತ್ಥಿನಾ
ನಸ್ಸನ್ತುಪದ್ದವಾ ಸಬ್ಬೇ ದುಕ್ಖಾವೂಪ ಸಮೇನ್ತುತೇ.

೪. ಸಕ್ಕತ್ವಾ ಸಂಘರತನಂ ಓಷಧಂ ಉತ್ತಮಂ ವರಂ,
ಹಿತಂ ದೇವಮನುಸ್ಸಾನಂ ಬುದ್ಧ ತೇಜೇನ ಸೊತ್ಥಿನಾ
ನಸ್ಸನ್ತುಪದ್ದವಾ ಸಬ್ಬೇ ಭಯಾವೂಪಸಮೇನ್ತು ತೇ ।

೫. ಸಕ್ಕತ್ವಾ ಧಮ್ಮರತನಂ ಓಷಧಂ ಉತ್ತಮಂ ವರಂ,
ಅಹುಣೆಯ್ಯಂ ಪಾಹುಣೇಯ್ಯಂ ಸಂಘತೇಜೇನ ಸೊತ್ಥಿನಾ
ನಸ್ಸನ್ತುಪದ್ದವಾ ಸಬ್ಬೇ ರೋಗಾ ವೂಪ ಸಮೆನ್ತು ತೇ.

೬. ಯಂ ಕಿಞ್ಚಿ ರತನಂ ಲೋಕ ವಿಜ್ಜತಿ ವಿವಿಧಾ ಪುಥೂ
ರತನಂ ಬುದ್ಧ ಸಮಂ ನತ್ಥಿ ತಸ್ಮಾ ಸೊತ್ಥಿ ಭವನ್ತು ತೇ.

೭. ಯಂ ಕಿಞ್ಚಿ ರತನಂ ಲೋಕೆ ವಿಜ್ಜತಿ ವಿವಿಧಾ ಪುಥೂ
ರತನಂ ಧಮ್ಮ ಸಮಂ ನತ್ಥಿ ತಸ್ಮಾ ಸೊತ್ಥಿ ಭವನ್ತು ತೇ.

೮. ಯಂ ಕಿಞ್ಚಿ ರತನಂ ಲೋಕೆ ವಿಜ್ಜತಿ ವವಿಧಾ ಪುಥೂ
ರತನಂ ಸಂಘ ಸಮಂ ನತ್ಥಿ ತಸ್ಮಾ ಸೊತ್ಥಿ ಭವನ್ತು ತೇ.

೯. ಸಬ್ಬೀತಿಯೋ ವವಜ್ಜನ್ತು ಸಬ್ಬರೋಗೊ ವಿನಸ್ಸತು
ಮಾತೇ ಭವತ್ವನ್ತರಾಯೋ ಸುಖೀದೀರ್ಘಾಯುಕೋ ಭವ ।

೧೦. ಭವತು ಸಬ್ಬ ಮಙ್ಗಳಂ ರಕ್ಖನ್ತು ಸಬ್ಬದೇವತಾ
ಸಬ್ಬ ಬುದ್ಧಾನುಭಾವೇನಾ ಸದಾ ಸೊತ್ಥಿ ಭುವನ್ತುತೇ ।

೧೧. ಭವತು ಸಬ್ಬ ಮಙ್ಗಳಂ ರಕ್ಖನ್ತು ಸಬ್ಬದೇವತಾ
ಸಬ್ಬ ಧಮ್ಮಾನುಭಾವೇನಾ ಸದಾ ಸೊತ್ಥಿ ಭವನ್ತುತೇ ।

೧೨. ಭವತು ಸಬ್ಬ ಮಙ್ಗಳಂ ರಕ್ಖನ್ತು ಸಬ್ಬೇದೇವತಾ
ಸಬ್ಬ ಧಮ್ಮಾನುಭಾವೇನಾ ಸದಾ ಸೊತ್ಥಿ ಭುವನ್ತುತೇ ।

೧೩. ನಕ್ಖತ್ತ - ಯಕ್ಖ - ಭೂತಾನಂ ಪಾಪಗ್ಗಹ ನಿವಾರಣಾ
ಪರಿತ್ತಸ್ಸಾನು ಭಾವೇನ ಹನ್ತು ತುಯ್ಹಂ ಉಪದ್ದವೆ ।

೧೪. ದೇವೋ ವಸ್ಸತು ಕಾಲೇನ ಸಸ್ಸಸಂಪತ್ತಿ ಹೇತು ಚ
ಫೀತೋ ಭವತು ಲೋಕೇಚ ರಾಜಾ ಭವತುಧಮ್ಮಿಕೊ ।

೧೫. ಸಬ್ಬೇ ಬುದ್ಧಾಬಲಪ್ಪತ್ತ ಪಚ್ಚೇಕಾನಞ್ಚ, ಯಂ ಬಲಂ
ಅರಹನ್ತಾ ನಞ್ಚ ತೇಜೇನ ರಕ್ಖಂ ಬನ್ಧಾಮಿ ಸಬ್ಬಸೊ.

೧. ಮಹಾಕಾರುಣಿಕ ನಾಥನು ಎಲ್ಲ ಜೀವಿಗಳ ಹಿತಕ್ಕಾಗಿ ಎಲ್ಲಾ ಪಾರಮಿಗಳನ್ನು ಪೂರೈಸಿಕೊಂಡು ಶ್ರೇಷ್ಠವಾದ ಸಂಬೋಧಿಯನ್ನು ಪಡೆದುಕೊಂಡನು. ಈ ಸತ್ಯವಚನದಿಂದಾಗಿ ನಿನಗೆ ಜಯಮಂಗಳವಾಗಲಿ !

೨. ಶಾಕ್ಯರ ಆನಂದವರ್ಧಕನು ಬೋಧಿವೃಕ್ಷದ ಬುಡದಲ್ಲಿ ಜಯವನ್ನು ಪಡೆದನು. ಅದೇ ರೀತಿ ನಿನಗೆ ಜಯವಾಗಲಿ ! ಜಯಮಂಗಳದ ಶ್ರೇಯಸ್ಸಾಗಲಿ !

೩. ದೇವಮಾನವರಿಗೆ ಉತ್ತಮವಾದ, ಶ್ರೇಷ್ಠವಾದ ಮತ್ತು ಹಿತಕರವಾದ ಔಷಧಿಯಾಗಿರುವ ಬುದ್ಧರತ್ನವನ್ನು ನಾನು ಗೌರವಿಸುತ್ತೇನೆ.

ತೇಜಸ್ಸಿನಿಂದ ಕ್ಷೇಮವುಂಟಾಗಿ ಉಪದ್ರವಗಳೆಲ್ಲವೂ ನಾಶವಾಗಿಲಿ ! ನಿನ್ನದುಃಖಗಳು ಉಪಶಮನವಾಗಿಲಿ !

೪. ಜ್ವರವನ್ನು ಉಪಶಮನ ಮಾಡುವ ಉತ್ತಮವಾದ ಹಾಗೂ ಶ್ರೇಷ್ಠವಾದ ಔಷಧಿಯಾಗಿರುವ ಧರ್ಮ ರತ್ನವನ್ನು ನಾನು ಗೌರವಿಸುತ್ತೇನೆ. ಧರ್ಮ ತೇಜಸ್ಸಿನಿಂದ ಕ್ಷೇಮವಾಗಿ ಉಪದ್ರವಗಳೆಲ್ಲವೂ ನಾಶವಾಗಿಲಿ ! ನಿನ್ನ ಭಯಗಳು ನಾಶವಾಗಲಿ !

೫. ದಾನಾರ್ಹವೂ ಹಾಗೂ ಸತ್ಕಾರಾರ್ಹವೂ, ಉತ್ತಮವಾದ ಹಾಗೂ ಶ್ರೇಷ್ಠವಾದ ಔಷಧಿಯೂ ಆಗಿರುವ ಸಂಘರತ್ನವನ್ನು ನಾನು ಗೌರವಿಸುತ್ತೇನೆ. ಸಂಘ ತೇಜಸ್ಸಿನಿಂದಾಗಿ ಕ್ಷೇಮವಾಗಿ, ಉಪದ್ರವಗಳೆಲ್ಲವೂ ನಾಶವಾಗಲಿ ! ನಿನ್ನ ರೋಗಗಳು ಉಪಶಮನ ಹೊಂದಲಿ !

೬. ಲೋಕದಲ್ಲಿ ವಿವಿಧವಾದ, ಬೇರೆ ಬೇರೆಯಾದ ರತ್ನಗಳಾವುವಿದ್ದರೂ ಯಾವ ರತ್ನವೂ ಬುದ್ಧನಿಗೆ ಸಮನಾದುದಲ್ಲ. ಈ ಸತ್ಯದಿಂದ ಸ್ವಸ್ತಿಯಾಗಲಿ !

೭. ಲೋಕದಲ್ಲಿ ವಿವಿಧವಾದ, ಬೇರೆ ಬೇರೆಯಾದ ರತ್ನಗಳಾವುವಿದ್ದರೂ ಯಾವ ರತ್ನವೂ ಸಂಘಕ್ಕೆ ಸಮನಾದುದಲ್ಲ. ಈ ಸತ್ಯದಿಂದ ಸ್ವಸ್ತಿಯಾಗಲಿ !

೮. ಲೋಕದಲ್ಲಿ ವಿವಿಧವಾದ, ಬೇರೆ ಬೇರೆಯಾದ ರತ್ನಗಳಾವುವಿದ್ದರೂ ಯಾವ ರತ್ನವೂ ಸಂಘಕ್ಕೆ ಸಮನಾದುದಲ್ಲ. ಈ ಸತ್ಯದಿಂದ ಸ್ವಸ್ತಿಯಾಗಲಿ !

೯. ವಿಪತ್ತುಗಳೆಲ್ಲವೂ ತೊಡೆದುಹೋಗಲು! ರೋಗಗಳೆಲ್ಲವೂ ವಿನಾಶವಾಗಲಿ ! ನಿನಗೆ ಅಪಾಯವಾವುದೂ ಬಾರದಿರಲಿ ! ಸುಖಿಯೂ ದೀರ್ಘಾದಯುವೂ ಆಗು !

೧೦. ನಿನಗೆ ಎಲ್ಲ ಮಂಗಳಗಳು ಉಂಟಾಗಲಿ ಎಲ್ಲ ದೇವತೆಗಳೂ ನಿನ್ನನ್ನು ಕಾಪಾಡಲಿ ! ಎಲ್ಲ ಬುದ್ಧರುಗಳ ಪ್ರಭಾವದಿಂದಾಗಿ ನಿನಗೆ ಸದಾ ಕ್ಷೇಮವಾಗಲಿ !

೧೧. ನಿನಗೆ ಎಲ್ಲ ಮಂಗಳಗಳು ಉಂಟಾಗಲಿ ! ಎಲ್ಲ ದೇವತೆಗಳೂ ನಿನ್ನನ್ನು ಕಾಪಾಡಲಿ ! ಎಲ್ಲ ಸಂಘಗಳ ಪ್ರಭಾವದಿಂದಾಗಿ ನಿನಗೆ ಸದಾ ಕ್ಷೇಮವಾಗಲಿ !

೧೨. ನಿನಗೆ ಎಲ್ಲ ಮಂಗಳಗಳು ಉಂಟಾಗಲಿ ! ಎಲ್ಲ ದೇವತೆಗಳೂ

ನಿನ್ನನ್ನು ಕಾಪಾಡಲಿ ! ಎಲ್ಲ ಸಂಘಗಳ ಪ್ರಭಾವದಿಂದಾಗಿ ನಿನಗೆ ಸದಾ ಕ್ಷೇಮವಾಗಲಿ !

೧೩. ಈ ಪರಿತ್ರಾಣದ ಪ್ರಭಾವದಿಂದಾಗಿ ನಕ್ಷತ್ರ, ಯಕ್ಷ, ಭೂತ ಮತ್ತು ದುಷ್ಟ ಗ್ರಹಗಳಿಂದ ವಿಪತ್ತು ನಿವಾರಣೆಯಾಗಿ ನಿನ್ನ ಉಪದ್ರವಗಳೆಲ್ಲವು ತೊಡೆದುಹೋಗಲಿ.

೧೪. ಸಸ್ಯ ಸಂಪತ್ತಿಗೆ ಕಾರಣವಾದ ಮಳೆಯು ಸಕಾಲದಲ್ಲಿ ಬೀಳಲಿ ಲೋಕವು ಸಮೃದ್ಧಿ ಹೊಂದಲಿ ರಾಜನು ಧಾರ್ಮಿಕನಾಗಲಿ.

೧೫. ಎಲ್ಲ ಬುದ್ಧರುಗಳ ಪ್ರತ್ಯೇಕ ಬುದ್ಧರುಗಳ ಮತ್ತು ಅರಹಂತರುಗಳ ತೇಜಸ್ಸಿನಿಂದ ನಾನು ನನ್ನ (ನಿನ್ನ) ರಕ್ಷಣೆಯನ್ನು ಎಲ್ಲ ವಿಧದಲ್ಲೂ ಭದ್ರಪಡಿಸಿಕೊಳ್ಳುತ್ತೇನೆ.

## ಜಯಮಂಗಳ ಗಾಥಾ

೧. ಬಾಹಂ ಸಹಸ್ಸಮಭಿನಿಮ್ಮಿತ ಸಾಯುಧನ್ತಂ
ಗಿರಿಮೇಖಲಂ ಉದಿತ ಘೋರ ಸಸೇನಮಾರಂ,
ದಾನಾದಿ ಧಮ್ಮವಿಧಿನಾ ಜಿತವಾ ಮುನಿನ್ದೊ
ತಂ ತೇಜಸಾ ಬವತು ತೇ ಜಯಮಙ್ಗಳಾನಿ !

೨. ಮಾರಾತಿರೇಕ ಮಭಿಯಜ್ಝಿತ ಸಬ್ಬರತ್ತಿಂ
ಘೋರಮ್ಪನಾ'ಲವಕ ಮಕ್ಖ ಮಥದ್ಧ ಯಕ್ಖಂ,
ಖನ್ತೀ ಸುವನ್ತ ವಿಧಿನಾ ಜಿತವಾ ಮುನಿನ್ದೊ
ತಂ ತೇಜಸಾ ಬವತು ತೇ ಜಯಮಙ್ಗಳಾನಿ !

೩. ನಾಲಾಗಿರಿ ಗಜವರಂ ಅತಿ ಮತ್ತ ಭೂತಂ
ದಾವಾಗ್ಗಿ ಚಕ್ಕಮಸಗೀವ ಸುದಾರುಣನ್ತಂ,
ಮೆತ್ತಮ್ಬುಸೇಕ ವಿಧಿನಾ ಜಿತವಾ ಮುನಿನ್ದೋ
ತಂ ತೇಜಸಾ ಬವತು ತೇ ಜಯಮಙ್ಗಳಾನಿ !

೪. ಉಕ್ಖಿತ್ತ ಖಗ್ಗಮತಿಹತ್ಥ ಸುದಾರುಣನ್ತಂ
ಧಾಮಂ ತಿಯೋಜನ ಪಥ'ಗುಲಮಾಲವನ್ತಂ,

ಇದ್ಧೀಭಿಸಙ್ಖತ ಮನೊ ಜಿತವಾ ಮುನಿನ್ದೋ
ತಂ ತೇಜಸಾ ಬವತು ತೇ ಜಯಮಙ್ಗಳಾನಿ !

೫. ಕತ್ವಾನ ಕಟ್ಟ ಮುದರಮಿವ ಗಬ್ಬಿನೀಯಾ
ಚಿಞ್‌ಚಾಯ ದುಟ್ಠ ವಚನಂ ಜನಕಾಯ ಮಜ್ಝೆ,
ಸನ್ತೇನ ಸೋಮವಿಧಿನಾ ಜಿತವಾ ಮುನಿನ್ದೋ
ತಂ ತೇಜಸಾ ಬವತು ತೇ ಜಯಮಙ್ಗಳಾನಿ !

೬. ಸಚ್ಚಂ ವಿಕಾಯ ಮತೀಚ್ಚಕ ವಾದಕೇತುಂ
ವಾದಾಭಿರೋಪಿತಮನಂ ಅತಿ ಅನ್ಧಭೂತಂ
ಪಞ್ಞಾಪದೀಪಜಲಿತೊ ಜಿತವಾ ಮುನಿನ್ದೋ,
ತಂ ತೇಜಸಾ ಬವತು ತೇ ಜಯಮಙ್ಗಳಾನಿ !

೭. ನನ್ದೋಪನನ್ದ ಭುಜಗಂ ವಿಭುದಂ ಮಹಿದ್ಧಿಂ
ಪುತ್ತೇನ ಥೇರ ಭುಜಗೇ ದಯಾಪಯನ್ದೊ,
ಇದ್ಧೂಪದೇಸ ವಿಧಿನಾ ಜಿತವಾ ಮುನಿನ್ದೊ
ತಂ ತೇಜಸಾ ಬವತು ತೇ ಜಯಮಙ್ಗಳಾನಿ!

೮. ದುಗ್ಗಾಹದಿಟ್ಠಿ ಭುಜಗೇನ ಸುದಟ್ಠಹತ್ಥಂ
ಬ್ರಹ್ಮಂ ವಿಸುದ್ಧಿ ಜುತಿಮಿದ್ಧಿ ಬಕಾಭಿಧಾನಂ,
ಞಾಣಾಗದೇನ ವಿಧಿನಾ ಜಿತವಾ ಮುನಿನ್ದೋ
ತಂ ತೇಜಸಾ ಬವತು ತೇ ಜಯಮಙ್ಗಳಾನಿ !

೯. ಏತಾ'ಪಿ ಬುದ್ಧ ಜಯಮಙ್ಗಳ ಅಟ್ಠಗಾಥಾ
ಯೋ ವಾಚಕೊ ದಿನದಿನೇ ಸತತೇಮತನ್ದೀ,
ಹಿತ್ವಾನ'ನೇಕ ವಿವಿಧಾನಿ ಚುಪದ್ದವಾನೀ
ಮೊಕ್ಖಂ ಸುಖಂ ಅಧಿಗಮೆಯ್ಯ ನರೊ ಸಪಞ್ಞೋ !

೧. ಯಾವ ಮುನಿಂದ್ರ (ಬುದ್ಧ) ತೀಕ್ಷ್ಣವಾಗಿ ಝಳಪಿಸುತ್ತಿದ್ದ ಖಡ್ಗಧಾರಣೆ ಮಾಡಿದ, ಸಹಸ್ರ ಬುಜವುಳ್ಳ 'ಗಿರಿಮೇಖಲ'ವೆಂಬ ಭಯಂಕರವಾದ ಆನೆಯನ್ನು ಏರಿ ಅತ್ಯಂತ ಭಯಾನಕಸೇನೆಯನ್ನು ಹೊಂದಿದ ಮಾರನನ್ನು ತನ್ನ ದಾನ ಮತ್ತು ಧರ್ಮದಿಂದ ಜಯಿಸಿದನೊ, ಅಂಥ ಭಗವಾನ ಬುದ್ಧರ ತೇಜಸ್ಸಿನಿಂದ ನಿನಗೆ ಕಲ್ಯಾಣವಾಗಲಿ !

೨. ಯಾವ ಮುನಿಂದ್ರ (ಬುದ್ಧ) ಮಾರನನ್ನೂ ಮೀರಿಸುವ ಶಕ್ತಿಶಾಲಿ, ಇಡೀ ರಾತ್ರಿ ಸಂಗ್ರಾಮದಲ್ಲಿ ತೊಡಗಿದ್ದ ಅತಿ ಘೋರ. ದುಷ್ಟ, ಕಠಿಣ ಹೃದಯವುಳ್ಳ, ಅಲವಕ ಹೆಸರಿನ ಯಕ್ಷನನ್ನು ಶಾಂತಿ ಸಹನ ಶೀಲತೆ ಮತ್ತು ಸಂಯಮದ ಬಲದಿಂದ ಜಯಿಸಿದನೊ ಅಂಥ ಭಗವಾನ ಬುದ್ಧರ ತೇಜಸ್ಸಿನಂದ ನಿನಗೆ ಕಲ್ಯಾಣವಾಗಲಿ !

೩. ಯಾವ ಮುನಿಂದ್ರ (ಬುದ್ಧ) ದಾವಾಗ್ನಿ ಚಕ್ರವುಳ್ಳ ವಿದ್ಯುತ್ ಸಮಾನ, ಅತ್ಯಂತ ದಾರುಣ ಮತ್ತು ಅತ್ಯಂತ ಮದಮತ್ತವೇರಿದ ನಾಲಾಗಿರಿಯೆಂಬ ಆನೆಯನ್ನು ಮೈತ್ರಿ ರೂಪಿ ಜಲವರ್ಷ ಸುರಿಸುತ್ತ ಜಯಿಸಿದನೊ, ಆ ಭಗವಾನ ಬುದ್ಧರ ತೇಜಸ್ಸಿನಂದ ನಿನಗೆ ಕಲ್ಯಾಣವಾಗಲಿ !

೪. ಯಾವ ಮುನಿಂದ್ರ (ಬುದ್ಧ), ಕೈಯಲ್ಲಿ ಖಡ್ಗವನ್ನು ಎತ್ತಿಹಿಡಿದು ಅತ್ಯಂತ ಭಯಾನಕ, ಯೋಜನೆಗಳಷ್ಟು ದೂರ ಓಡುತ್ತಿದ್ದ ಅಂಗುಲಿಮಾಲನನ್ನು ತನ್ನ ಪವಾಡದಿಂದ ಸೋಲಿಸಿದನೋ, ಆ ಭನವಾನ ಬುದ್ಧನ ತೇಜಸ್ಸಿನಿಂದ ನಿನಗೆ ಕಲ್ಯಾಣವಾಗಲಿ !

೫. ಯಾವ ಮುನೀಂದ್ರ (ಬುದ್ಧ), ಕೈಯಲ್ಲಿ ಖಡ್ಗವನ್ನು ಎತ್ತಿಹಿಡಿದು ಅತ್ಯಂತ ಭಯಾನಕ, ಯೋಜನೆಗಳಷ್ಟು ದೂರ ಓಡುತ್ತಿದ್ದ ಅಂಗುಲಿಮಾಲನನ್ನು ತನ್ನ ಪವಾಡದಿಂದ ಸೋಲಿಸಿದನೋ, ಆ ಭಗವಾನ ಬುದ್ಧನ ತೇಜಸ್ಸಿನಿಂದ ನಿನಗೆ ಕಲ್ಯಾಣವಾಗಲಿ !

೬. ಯಾವ ಮುನಿಂದ್ರ (ಬುದ್ಧ), ಸತ್ಯವನ್ನು ತೊರೆದು, ಅಸತ್ಯವಾದ ಘೋಷಿಸುತ್ತಿದ್ದು, ಅಭಿಮಾನಿಯಾಗಿದ್ದ, ವಾದವಿವಾದ ಪಾರಾಯಣ

ಮತ್ತು ಅಹಂಕಾರದಿಂದ ಕುರುಡನಾಗಿದ್ದ ಸಚ್ಚಕಯೆಂಬ ಪರಿವ್ರಾಜಕನನ್ನು ಪ್ರಜ್ಞೆಯ ದೀಪವನ್ನು ಬೆಳಗಿಸುತ್ತ ಜಯಿಸಿದನೊ, ಆ ಭಗವಾನ ಬುದ್ಧನ ತೇಜಸ್ಸಿನ ಬಲದಿಂದ ನಿನಗೆ ಕಲ್ಯಾಣವಾಗಲಿ!

೭. ಯಾವ ಮುನಿಂದ್ರ (ಬುದ್ಧ), ವಿವಿಧ ಋದ್ಧಿ ಸಂಪನ್ನವುಳ್ಳ ನಂದೋಪನಂದ ಹೆಸರಿನ ಭಜಂಗಗನನ್ನು ತನ್ನ ಪುತ್ರ (ಶಿಷ್ಯ) ಮಹಾಪಿತದ್ಗಲ್ಯಾಯನ ಸ್ಥಾವಿರ ಮುಖಾಂತರ ತನ್ನ ಋದ್ಧಿಶಕ್ತಿ ಮತ್ತು ಉಪದೇಶದ ಬಲದಿಂದ ಜಯಸಿದನೊ, ಆ ಭಗವಾನ ಬುದ್ಧನ ತೇಜಸ್ಸಿನ ಬಲದಿಂದ ನಿನಗೆ ಕಲ್ಯಾಣವಾಗಲಿ !

೮. ಯಾವ ಮುನಿಂದ್ರ (ಬುದ್ಧ), ಮಿಥಾದೃಷ್ಟಿ, ಭಯಾನಕ ರೂಪದ ಹಾವಿನಿಂದ ಕಚ್ಚಿಸಿಕೊಂಡ ವಿಶುದ್ಧ ಜ್ಯೋತಿ ಮತ್ತು ಋದ್ಧಿಶಕ್ತಿಯ್ನು ಸಂಪಾದಿಸಿದ ಬಕನೆಂಬ ಹಂಸರಿನ ಬ್ರಹ್ಮನಿಗೆ ಜ್ಞಾನವೆಂಬ ಔಷಧವನ್ನು ಕೊಟ್ಟು ಜಯಿಸಿದ, ಆ ಭಗವಾನ ಬುದ್ಧನ ತೇಜಸ್ಸಿನಿಂದ ನಿನಗೆ ಕಲ್ಯಾಣವಾಗಲಿ !

೯. ಯಾವ ಪಾಠಕನು ಈ ಬುದ್ಧ ಜಯಮಂಗಳ ಎಂಟು ಗಾಥೆಗಳನ್ನು ಆಲಸ್ಯರಹಿತನಾಗಿ ಪ್ರತಿದಿನವೂ ಪಠಿಸುತ್ತಾನೆಯೊ ಆ ಬುದ್ಧವಂತ ಮನುಷ್ಯನು ಅನೇಕ ರೀತಿ ಉಪದ್ರವಗಳಿಂದ ಮುಕ್ತನಾಗಿ ಮೋಕ್ಷ (ನಿರ್ವಾಣ)ಸುಖವನ್ನು ಪಡೆಯುತ್ತಾನೆ.

# ಪರಿತ್ರಾಣದ ಅಂತ್ಯ

ಏತೇನ ಸಚ್ಚ ವಜ್ಜೇನ ಸೊತ್ಥಿ ನೋ★ ಹೋತು ಸಬ್ಬದಾ!

ಏತೇನ ಸಚ್ಚ ವಜ್ಜೇನ ಸಬ್ಬ ದುಕ್ಖಂ ವಿನಸ್ಸತು!

ಏತೇನ ಸಚ್ಚ ವಜ್ಜೇನ ಸಬ್ಬ ಭಯಂ ವಿನಸ್ಸತು !

ಏತೇನ ಸಚ್ಚ ವಜ್ಜೇನ ಹೋತು ನೋ★ ಜಯಮಙ್ಗಳಂ !

ಏತೇನ ಸಚ್ಚ ವಜ್ಜೇನ ಪಾತು ನೋ★ ರತನತ್ತಯಂ.

ಈ ಸತ್ಯವಚನದಿಂದ ನಮಗೆ ಯಾವಾಗಲೂ ಸ್ವಸ್ತಿಯಾಗಲಿ !

ಈ ಸತ್ಯವಚನದಿಂದ ಎಲ್ಲ ದುಃಖನೂ ವಿನಾಶಹೊಂದಲಿ !

ಈ ಸತ್ಯವಚನದಿಂದ ಎಲ್ಲ ಭಯವೂ ವಿನಾಶಹೊಂದಲಿ !

ಈ ಸತ್ಯವಚನದಿಂದ ನಮಗೆ ಜಯಮಂಗಳಗಳುಂಟಾಗಲಿ !

ಈ ಸತ್ಯವಚನದಿಂದ ನಾವು ರತ್ನತ್ರಯವನ್ನು ಹೊಂದಲಿ !

(★ತೇ=ನಿನಗೆ, ಮೆ=ನನಗೆ, ವೊ=ನಿಮಗೆ ಎಂದು ಸಂದರ್ಭಕ್ಕನುಸಾರವಾಗಿ ಬದಲಿಸಬೇಕು)

## ಪರಿಚ್ಛೇದ- 3

# ದಾನ

ಬೌದ್ಧರಲ್ಲಿ ದಾನ ಕರ್ಮವು ಅತೀ ಮಹತ್ವದ್ದು ಆಗಿರುತ್ತದೆ. ಬುದ್ಧನಾಗಬೇಕಾದರೆ ಬೋಧಿಸತ್ವನು ದಾನ ಪಾರಮಿತವನ್ನು ಮೊದಲು ಪರಿಪೂರ್ಣಗೊಳಿಸಿದ್ದನು. ಬೌದ್ಧ ಉಪಾಸಕರೂ ಸಹ ಬೋಧಸತ್ವನು ಅನುಸರಿಸುತ್ತಾ ಧರ್ಮದಾನ, ವಸ್ತುದಾನ ಮತ್ತು ಶಾರೀರಿಕ ದಾನಗಳನ್ನು ಮಾಡುತ್ತಾರೆ. ಇಂಥ ದಾನವು ಯೋಗ್ಯರಿಗೆ ಮಾತ್ರ ತಲುಪುತ್ತಿರಬೇಕು. ಜ್ಞಾನದೊಂದಿಗೆ ದಾನ ಮಾಡಿದರೆ ಅದರ ಫಲ ಸಿಹಿ, ಬಡಬಗ್ಗರಿಗೆ ಮಾಡುವ ದಾನವು ಕರುಣೆಯಿಂದೊಡಗೂಡಿದರೆ ಬೌದ್ಧ ಭಿಕ್ಖು ಸಂಘಕ್ಕೆ ಮಾಡುವ ದಾನವು ಶ್ರದ್ಧೆ, ನಿಷ್ಠೆ, ಭಕ್ತಿಯಿಂದೊಡಗೂಡಿರುತ್ತದೆ.

ಬೌದ್ಧರಾದರೊ ಮುಖ್ಯವಾಗಿ ಎರಡು ದಾನಗಳ ಬಗ್ಗೆ ಅರಿತಿರಬೇಕು. ಮೊದಲನೆಯದಾಗಿ ಭಿಕ್ಖುಗಳಿಗೆ ದಿನನಿತ್ಯ ಬೇಕಾಗುವ ಅನ್ನ, ನೀರು, ವಸ್ತ್ರ ಔಷಧಿ, ವಾಸಸ್ಥಾನ ಮತ್ತು ರೇಜರ್ ಬ್ಲೇಡ್, ಟೂತ್-ಪೇಸ್ಟ್, ಸಾಬೂನು, ಪೆನ್ನು, ಚಪ್ಪಲಿ, ಪೋಸ್ಟ್ ಕಾರ್ಡ್ ಇತರ ಕೆಲ ಬಳಕೆಯ ವಸ್ತುಗಳನ್ನು ಭಿಕ್ಖುಗಳಿಗೆ ದಾನವಾಗಿ ಕೊಡಬೇಕು. ಸ್ಥಳದಿಂದ ಸ್ಥಳಕ್ಕೆ ಅಲೆದಾಡುವುದರಿಂದ ಅವರ ಪ್ರವಾಸ ಖರ್ಚನ್ನು ಸಹ ವ್ಯವಸ್ಥೆ ಮಾಡಬೇಕು. ಈ ದಾನವನ್ನು ಉಪಾಸಕರು ವೈಯಕ್ತಿಕವಾಗಿ ತಮ್ಮ ಸಂಸ್ಕಾರ ಕಾಲಕ್ಕೆ ನೀಡುತ್ತಿರಬೇಕು.

ಎರಡನೆಯದಾಗಿ ''ಕಠಿಣ ಚೀವರ ದಾನ'' ಈ ಸಮಾರಂಭವನ್ನು ಅಕ್ಟೋಬರ್ ಪೌರ್ಣಮಿಯ ದಿನ ಕನಿಷ್ಠ ಐದು ಭಿಕ್ಖು ಸಂಘಕ್ಕೆ ಮೇಲಿನ ವಸ್ತ್ರಗಳನ್ನು ವರ್ಷಕ್ಕೆ ಸಾಕಾಗುವಂತೆ ನೀಡಬೇಕು. ಮುಖ್ಯವಾಗಿ ಚೀವರ ದಾನವೆಂದರೆ ಭಿಕ್ಖುಗಳ ಉಡುಪುಗಳನ್ನು ತಯಾರಿಸಿಕೊಡುವುದು.

ಇತರ ಧರ್ಮಗಳಲ್ಲಿಯೂ ಸಹ ತಮ್ಮಗಳಿಕೆಯ ಹತ್ತು ನೂರಾಂಶ ಭಾಗವನ್ನು ಧರ್ಮಕ್ಕೆ ಮುಡುಪಾಗಿ ಇಟ್ಟುಕೊಡುತ್ತಾರೆ. ಬೌದ್ಧರೂ ಸಹ ತಮ್ಮ ಶಕ್ತಿಯಾನುಸಾರವಾಗಿ ದಾನ ಮಾಡುತ್ತಲೇ ಇರಬೇಕು. ಸರ್ವದಾನಗಳಲ್ಲಿ ಧರ್ಮದಾನ ಮಿಗಿಲಾದುದು. ಆದ್ದರಿಂದ ಒಂದು

ಮನೆಯಿಂದ ಒಬ್ಬ ಮಗನನ್ನಾದರೂ ಭಿಕ್ಖು ಸಂಘಕ್ಕೆ ದಾನವಾಗಿ ಅರ್ಪಿಸಬೇಕು. ಬೇರೆ ಧರ್ಮ ಗುರುಗಳು ''ಭೀಕ್ಷಾಂದೇಹಿ''ಯೆಂದು ಕೇಳುತ್ತಿದ್ದರೆ ಬೌದ್ಧಧರ್ಮದಲ್ಲಿ ಭಿಕ್ಖುಗಳು ಏನನ್ನು ತಮ್ಮ ಸ್ವಾರ್ಥಕ್ಕೆ ಕೇಳುವುದಿಲ್ಲ. ಸಾವು ಬರುವವರೆಗೂ ಸುಮ್ಮನಿರುವರು. ಈ ಕಠೋರ ಬೌದ್ಧ ನಿಯಮವನ್ನು ಅರಿತುಕೊಂಡು ಉಪಾಸಕರು ಭಿಕ್ಖುಗಳ ಅವಶ್ಯಕತೆಗಳನ್ನು ಪೂರೈಸಬೇಕು.

ಭಿಕ್ಖುಗಳು ಯಾವ ವಸ್ತು, ಮನೆ, ಹೊಲ, ರಾಜವೈಭವ ಇತ್ಯಾದಿಗಳ ಮೇಲೆ ಸ್ವಾಮಿತ್ವವನ್ನು ಹೊಂದಿರುವುದಿಲ್ಲ. ತನ್ನದೆಂಬುದು ಇಲ್ಲವೇ ಇಲ್ಲ. ಉಪಾಸಕರೂ ಸರ್ವ ವಸ್ತುಗಳ ಮೇಲೆ ಮಾಲಿಕತ್ವವನ್ನು ಪಡೆದಿರುತ್ತಾರೆ. ಅವರಿಗೆ ದಾನ ಕೊಡಲಿಕ್ಕೆ ಸರ್ವ ಅಧಿಕಾರವಿರುತ್ತದೆ.

## ಶೀಲ

ಬೌದ್ಧ ಉಪಾಸಕರು ಐದು ಶೀಲಗಳನ್ನು ಆಚರಿಸಬೇಕಾಗುವುದು, ಅವು ಯಾವುವೆಂದರೆ :

೧) ಪ್ರಾಣ ಹಿಂಸೆಯನ್ನು ಮಾಡದೇ ಇರುವುದು

೨) ಕಳ್ಳತನ ಮಾಡದೇ ಇರುವುದು.

೩) ವ್ಯಭಿಚಾರ ಮಾಡದಿರುವುದು.

೪) ಸುಳ್ಳನ್ನಾಡದೇ ಇರುವುದು.

೫) ನಿಶೆ-ಬಾಜಿ ಮಾಡದಿರುವುದು.

ಈ ಶೀಲಗಳನ್ನು ಭಂತೆಯವರಿಂದ ತಿಸರಣಗಮನದೊಂದಿಗೆ ಪಡೆದು ಹೆಚ್ಚು-ಹೆಚ್ಚು ಕಾಲ ಯಾರು ಪರಿಪಾಲಿಸುವರೊ ಅವರು ಸುಖಿಗಳಾಗಿ ಜೀವಿಸುತ್ತಾರೆ. ಅವರ ಕೀರ್ತಿ ಗೌರವ ವೃದ್ಧಿಯಾಗುತ್ತದೆ. ಧನ-ದೌಲತ್ ತುಳುಕುತ್ತದೆ. ಪರಿಜನರು ನಿರೋಗಿಗಳಾಗುತ್ತಾರೆ. ರಾಜಾಧಿಕಾರವೂ ಲಭಿಸುತ್ತದೆ. ಗೆಳೆಯರು ಸಹಾಯ ಮಾಡುತ್ತಾರೆ. ವಿಷಪ್ರಾಣಿಗಳ ಕಾಟ ಕೊಡುವುದಿಲ್ಲ. ಸುಳ್ಳು ಆಪಾದನೆಗಳೂ ಬರುವುದಿಲ್ಲ. ಹೀಗೆ ಉಪಾಸಕನು ಕಷ್ಟಗಳಿಂದ ಪಾರಾಗಿ ಮುಕ್ತಿಯತ್ತ ಸಾಗುತ್ತಾನೆ. ನಿಬ್ಬಾಣ ಅನುಭವಿಸುತ್ತಾನೆ.

ಕಾರಣಾಂತರಗಳಿಂದ ಮತ್ತು ಅಸಮರ್ಥತತೆಯಿಂದ ಕೆಲ ಶೀಲಗಳು ಯಾವಾಗಲೂ ಮುರಿಯುತ್ತೇವೆ. ಕೂಡಲೇ ಭಿಕ್ಖು ಇದ್ದಲ್ಲಿಗೆ ಹೋಗಿ ಕ್ಷಮೆ ಕೋರಿ ತ್ರಸರಣಗಮನ ಪಂಚಶೀಲ ಗ್ರಹಣ ಪಡೆದುಕೊಂಡು ಬರುವುದು ಬೌದ್ಧ ಉಪಾಸಕರ ಲಕ್ಷಣ ಮತ್ತು ಆದ್ಯ ಕರ್ತವ್ಯ. ಧರ್ಮೋಪದೇಶವಿಲ್ಲದೇ ಮನುಷ್ಯನು ಸುಸಂಸ್ಕೃತನಾಗಲಾರನು. ಪ್ರತಿಯೊಬ್ಬ ಉಪಾಸಕನೂ ಧರ್ಮ ಗುರುವನ್ನು ಹೊಂದಿಕೊಂಡೇ ಇರುವುದೂ ಶೀಲಾಚರಣೆ.

ಇತರ ಧರ್ಮಿಗಳು ಕೆಲ ಧರ್ಮ ಸೂಚಿಗಳನ್ನು ಹಾಕಿಕೊಂಡಿರುತ್ತಾರೆ. ಉದಾ : ನಾಮ, ವಿಭೂತಿ, ಜುಟ್ಟು, ಜಡೆ, ದಾಡಿ ಇತ್ಯಾದಿ. ಬೌದ್ಧರಾದರೋ ಇಂಥ ಯಾವ ಚಿನ್ಹೆಯನ್ನು ಹೊಂದಿರುವುದಿಲ್ಲ. ಆದರೆ ಅವರ ಶೀಲ ಆಚರಣೆಯಿಂದ, ಬೌದ್ಧ ಧ್ಯಾನದಲ್ಲಿ ಸದಾ ಮಗ್ನರಾಗಿರುವುದರಿಂದ, ನಿಕ್ಷಪಟ, ಕರುಣಾಮಯಿ ಹೃದಯದವರಾಗಿರುವುದರಿಂದ ಅವರ ಮುಖದ ಮೇಲೆ ಯಾವಾಗಲೂ ಸಂತುಷ್ಠಿಯ ಕಳೆಯು ತೇಲುತ್ತಿರುತ್ತದೆ. ಅವರ ಮುಖ, ಹಾವಭಾವಗಳನ್ನು ಮತ್ತು ಜ್ಞಾನ ಚತುರತೆಯನ್ನು ಇತರರು ಕಂಡು ಇವರೇ ಬೌದ್ಧರು ಎಂದು ಗುರುತಿಸುತ್ತಾರೆ ಮತ್ತು ಇವರು ಒಳ್ಳೇ ಸ್ವಬಾವದವರು (ಪ್ರೀತಿ-ಗೌರವಕ್ಕೆ)ಅರ್ಹರು ಎಂದು ಎಲ್ಲರೂ ಕೊಂಡಾಡುತ್ತಾರೆ. ಇತರ ಧರ್ಮಿಯರಿಗೆ ಕರ್ತನು ಸಂರಕ್ಷಣೆ ನೀಡಿದರೆ ಬೌದ್ಧರಿಗೆ ತಮ್ಮ ಶೀಲಗಳೇ ಕವಚಗಳಾಗಿರುತ್ತವೆ.

## ಭಾವನ (ಧ್ಯಾನ)

ಬೌದ್ಧರ ಇನ್ನೊಂದು ಮುಖ್ಯ ಆಚರಣೆಯೆಂದರೆ ಧ್ಯಾನ. ಬುದ್ಧನು ಸುಮಾರು ನಲ್ವತ್ತು ಪದ್ಧತಿಯ ಧ್ಯಾನಗಳನ್ನು ಹೇಳಿರುತ್ತಾನೆ. ಉಪಾಸಕನಿಗೆ ಅವು ಎಲ್ಲವುಗಳನ್ನು ಆಚರಿಸಲು ಸಾಧ್ಯವಾಗಲಿಕ್ಕಿಲ್ಲ. ಆದರೆ ಎರಡು ಧ್ಯಾನಗಳನ್ನು ಅಭ್ಯಾಸವನ್ನು ಮಾಡುವುದು ಒಳಿತು.

ಧ್ಯಾನವನ್ನು ಏಕೆ ಮಾಡಬೇಕು ? ಕಾರಣ ಹೀಗೆ ಇದೆ. ಪ್ರತಿಯೊಬ್ಬನು ಕಾಯ-ವಾಚಾ-ಮನಸಾ ಕರ್ಮವನ್ನು ಮಾಡುತ್ತಾನೆ. ಒಳ್ಳೇ ಮನಸ್ಸಿನಿಂದ

ಮಾಡಿದ ಕಾರ್ಯಗಳು ಒಳ್ಳೇ ಫಲವನ್ನು ಕೆಟ್ಟ ಮನಸ್ಸಿನಿಂದ ಮಾಡಿದ ಕರ್ಮವು ಕೆಟ್ಟ ಫಲವನ್ನು ತರುವುದು. ಸಕಲ ಕರ್ಮಗಳಿಗೂ ಮನಸ್ಸೇ ಕಾರಣ. ಆದರೆ ಪ್ರತಿಯೊಂದು ಜೀವಿ ಮಾನವ ಸುಖವನ್ನೇ ಬಯಸುತ್ತಾನೆ. ಹಾಗಿದ್ದರೆ ಮನಸ್ಸನ್ನು ಶುದ್ಧೀಕರಿಸುವುದೇ ಸೂಕ್ತವಲ್ಲವೇ ? ಇದಲ್ಲದೆ ರಾಗ, ದ್ವೇಷ, ಮೋಹಗಳೆಂಬ ವಿಷಯಗಳು ಮನಸ್ಸನ್ನು ಮಲಿಸಗೊಳಿಸುತ್ತವೆ. ಕಬ್ಬಿಣವು ತನ್ನಿಂದಲೇ ಜಂಗನ್ನು (ತುಕ್ಕನ್ನು) ಉತ್ಪತ್ತಿಸುವಂತೆ ಮನಸ್ಸು ಸಹ ಈ ವಿಷಯ ಅಭಿಲಾಷೆಗಲನ್ನು ಉತ್ಪತ್ತಿಸುತ್ತದೆ. ಈ ಮಾನಸಿಕ ರೋಗಗಳನ್ನು ಕೆತ್ತಿ ನಿರ್ಮಲ ಚಿತ್ತ ಹೊಂದುವುದು ಸುಖದ ಹಾದಿ. ಇದು ಬೌದ್ಧ ಧ್ಯಾನದಿಂದ ಮಾತ್ರ ಸಾಧ್ಯ.

೧. **ಆನಾ-ಪಾನಾ-ಸತಿ** : ಅಂದರೆ ನಮ್ಮ ಉಸಿರು ಸದಾ ಒಳಗೆ ಹೋಗುವುದು ಮತ್ತು ಹೊರಗೆ ಬರುವುದು, ಇದರ ಮೇಲೆ ಲಕ್ಷ್ಯವಿಟ್ಟು ನೋಡುವುದು. ಮೂಗಿನ ಬಲ ಹೊರಳೆಯಿಂದಲೊ, ಎಡ ಹೊರಳಿಯಿಂದಲೊ ಉಸಿರಿನ ಓಡಾಟ ನೋಡುವುದು ಮತ್ತು ಅದು ಹೋಗುವಾಗ ಎಲ್ಲಿ ಸ್ಪರ್ಶವಾಗುತ್ತದೆ. ಬರುವಾಗ ಎಲ್ಲಿ ತಲುಪುತ್ತದೆ ಕಾಣುವುದು. ಒಳಗೆ ಹೋಗುವಾಗ ತುಸು ತಂಪಾನಿಯೂ ಹೊರಗೆ ಬರುವಾಗ ತುಸು ಬಿಸಿಯಾಗಿಯೂ ಇರುವುದನ್ನು ಅನುಭವದಿಂದ ಅರಿಯುವುದು. ಒಳಗೆ ಹೋದ ಮೇಲೆ ಸ್ವಲ್ಪ ನಿಲ್ಲುವುದು, ಹೊರಗೆ ಬಂದ ಮೇಲೆ ಸ್ವಲ್ಪ ತಡೆಯುವುದನ್ನು ಗಮನಿಸುವುದು. ಈ ಉಸುರಿನ ನೈಸರ್ಗಿಕ ಅಲೆದಾಟವನ್ನು ಲಕ್ಷ್ಯಗೊಟ್ಟು ನೋಡಿ ಅರಿಯುತ್ತಿರುವುದೇ ಅನಾ ಪಾನಾ ಸತಿ. ಈ ಸಮಯದಲ್ಲಿ ಮನಸ್ಸು ಅತ್ತಿಂದಿತ್ತ ಒಡಾಡುತ್ತಿದೆ. ಅದನ್ನು ಅರಿತು ಪುನಃ ಪುನಃ ಉಸುರಿನ ಮೇಲೆ ಏಕಾಗ್ರಚಿತ್ತಭರಿತನಾಗುವುದು. ಈ ಧ್ಯಾನವು ಮನಸ್ಸನ್ನು ಹಿಡಿತದಲ್ಲಿ ತರುವುದು ಕ್ರಮೇಣ ಸಾಧನೆಗೆ ಒಳಿತು.

೨. **ಮೈತ್ರಿ ಧ್ಯಾನ** : ಈ ತರಹ ಶರೀರ ಮತ್ತು ಮನಸ್ಸು ಶಾಂತವಾಗಿ ಸಮತೆಯಲ್ಲಿದ್ದಾಗ, ತನ್ನ ತಂದೆ, ತಾಯಂದಿರು, ಅಣ್ಣ-ತಮ್ಮಂದಿರು, ಅಕ್ಕ-ತಂಗಿಯರು, ಮಕ್ಕಳು, ಬಂಧುಗಳು, ನೆರೆ ಹೊರೆಯವರು ಜಿಲ್ಲೆಯವರು, ದೇಶಬಾಂಧವರು, ಇಡೀ ವಿಶ್ವದಲ್ಲಿನ ಮಾನವರು, ಹೆಣ್ಣು,

ಗಂಡು. ಭೂಮಿಯ ಮೇಲಿರುವ ಸಕಲ ಪ್ರಾಣಿಗಳು, ಆಕಾಶದಲ್ಲಿ ಹಾರಡುವ ಹಕ್ಕಿಗಳೆಲ್ಲವೂ, ನೀರಿನಲ್ಲಿರುವ ಜಲಚರಗಳು, ವಿಶ್ವದಲ್ಲಿರುವ ದೇವತೆಗಳೂ, ಭೂತಗಳೂ, ಸುಖವಾಗಿರಲೆಂದು ಅಪೇಕ್ಷಿಸಬೇಕು. ಮೈತ್ರಿಯನ್ನು ಎಲ್ಲರ ಮೇಲೆ ಹರಸಬೇಕು. ಸಕಲ-ಕಲ್ಯಾಣ ಬಯಸಬೇಕು. ಇದೇ ಮೈತ್ರಿ ಧ್ಯಾನ.

## ಪರಿಚ್ಛೇದ-೪

# ಬೌದ್ಧ ಸಂಸ್ಕಾರ ವಿಧಿ

ಮಾನವನ ಜೀವನದಲ್ಲಿ ಸಂಸ್ಕಾರಗಳ ಮಹತ್ವ ಮಿಗಿಲಾಗಿದೆ. ಆತನು ಸುಸಂಸ್ಕೃತನಾಗಿ ಬಾಳಬೇಕಾದರೆ ಕಾಲಕಾಲಕ್ಕೆ ಸಂಸ್ಕಾರ ವಿಧಿಗಳನ್ನು ಏರ್ಪಡಿಸಲೇಬೇಕು. ಹುಟ್ಟಿನಿಂದ ಸಾಯುವವರೆಗೆ ಜೀವನದ ಕ್ರಮಗಳನ್ನು ವ್ಯವಸ್ಥಿತಗೊಳಿಸುವುದೇ ಸಂಸ್ಕಾರ. ವಿಶ್ವದ ಎಲ್ಲಾ ಜನಾಂಗಗಳಲ್ಲಿ ಒಂದಲ್ಲ ಒಂದು ತರಹವುಂಟು. ಭಾರತೀಯ ಬೌದ್ಧರಲ್ಲಿಯೂ ಕೆಲ ನಿಯಮಗಳಿವೆ. ಅವು ಕುರುಡು ನಂಬಿಕೆಯಿಂದ ಬಂದಿದ್ದಲ್ಲ. ಬುದ್ಧ ಧರ್ಮದ ತತ್ವಗಳ ಮೇಲೆ ಸ್ಥಾನಿಕ ಪರಿಸ್ಥಿತಿಗೆ ಅನುಗುಣವಾಗಿರಲೆಂದು ಅತಿ ಕಡಿಮೆ ವೆಚ್ಚದಲ್ಲಿ ಉದ್ದೇಶ ಈಡೇರಲೆಂದು ಬೌದ್ಧರಿಗಾಗಿ ಕೆಲ ಸಂಸ್ಕಾರಗಳನ್ನು ಜ್ಞಾನಿಗಳೂ, ನಿಯಮಿಸಿದ್ದಾರೆ.

**1. ಗರ್ಭಮಂಗಲ ಸಂಸ್ಕಾರ :** ಈ ಸಂಸ್ಕಾರ ಸರ್ವ ಪ್ರಥಮವಾಗಿರುತ್ತದೆ. ಗರ್ಭವು ಸಕುಶಲವಾಗಲೆದಂ ಇದರ ಹಾರೈಕೆ. ಸ್ತ್ರೀಯು ಗರ್ಭವಿತಯಾದ ಮೂರನೇ ತಿಂಗಳಲ್ಲಿ ಅನುಕೂಲ ದಿನದಂದು ಏರ್ಪಡಿಸಬೇಕು. ಆ ದಿನ ಗರ್ಭವತಿಯು ಶುದ್ಧ ನೀರಿನಿಂದ, ಸುಗಂಧ ಪೂರಿತ ಸ್ನಾನಾದಿಗಳನ್ನು ಮಾಡಿ ಹೊಸ ಅಥವಾ ಹಸನಾದ ಬಟ್ಟೆಗಳನ್ನು ಧರಿಸಿ, ಪರಿಶುದ್ಧ ಮನಸ್ಕಳಾಗಿರಬೇಕು. ಪತಿಯನ್ನು ಕೃತಜ್ಞಭಾವದಿಂದ ಗೌರವಿಸಬೇಕು. ಮನೆಯ್ಲಲಿ ಬುದ್ಧ ಪೂಜೋೀಯನ್ನು ಏರ್ಪಡಿಸಬೇಕು. ಪೂಜ್ಯ ಭಿಕ್ಕುಗಳನ್ನು ಅಥವಾ ಬೌದ್ಧಾಚಾರ್ಯರನ್ನು ಆಮಂತ್ರಿಸಬೇಕು. ಆ ಸಮಯದ್ಲಿಲ ಗರ್ಭವತಿಯನ್ನು ಮ್ತು ಅವಳ ಪತಿಯನ್ನು ಬುದ್ಧ ಮಾರ್ತಿ ಎದುರು ಸುಂದರ ಆಸನದ ಮೇಲೆ ಕುಳ್ಳಿರಿಸಿರಬೇಕು. ಸಂಸ್ಕಾರ ಕರ್ತನು ಪೂಜೆಗೆ ಇರಿಸಿದ್ದ ದಾರ ಧಮ್ಮ ಸೂತ್ರವೆಂದು ತಿಳಿದು, ಒಂದು ಅಂಚನ್ನು ಬುದ್ಧ ಪ್ರತಿಮೆಗೆ ತಾಗಿಸಿ, ಮುಂದೆ ಇದ್ದ ಕಲಶಕ್ಕೆಸುತ್ತಿಸಿ, ಗರ್ಭವತಿ ಕೈಯಿಂದ ಹಾಯ್ದು ಪತಿಯ ಕೈಯಿಂದ ಇನ್ನೊಂದು ದಾರದ ತುದಿ ಸಂಸ್ಕಾರಕನ ಕೈ ಸೇರಿಸಬೇಕು. ಅದನ್ನು ಹಿಡಿದುಕೊಂಡು, ತಿಸರಣ ಗಮನ, ಪಂಚಶೀಲ ಗ್ರಹಣ, ವಂದನ, ಪರಿತ್ರಾಣ ಪಠಣ ಮಾಡಬೇಕು.

ಬುದ್ಧಚರಿತೆ ಅರಹಂತರ ಸಮರ್ಪಕ ಕತೆಗಳೊಂದಿಗೆ ಧಮ್ಮ ಉಪದೇಶ ಮಾಡಬೇಕು. ನಂತರ ದಾರದ ತುದಿಯಿಂದ ಒಂದು ತುಂಡನ್ನು ಕತ್ತರಿಸಿ ಪಡಿಯ ಕೈಯಿಂದ ಗರ್ಭವತಿ ಎಡಗೈಗೆ ಕಟ್ಟಿಸಬೇಕು. ಇನ್ನೊಂದು ತುಂಡನ್ನು ಅವಳ ಪತಿಯ ಬಲಗೈಗೆ ಸಂಸ್ಕಾರಕನು ಕಟ್ಟಬೇಕು. ಗರ್ಭವತಿಯ ಕೈಗೆ ಕಟ್ಟುವಾಗ ಈ ಕೆಳಗಿನ ಶ್ಲೋಕವನ್ನು ಪಠಿಸಬೇಕು.

**ಇಚ್ಛಿತಂ ಪತ್ಥಿಯಂ ತುಯ್ಹಂ, ಖಿಪ್ಪಮೇವ ಸಮಿಜ್ಝತೋ !**
**ಸಬ್ಬೇ ಪೂರೆಂತೂ ಚಿತ್ತ ಸಂಕಪ್ಪೊ ಚಂದೊ ಪನ್ನರಸೋಯಥಾ !!**

**ಅರ್ಥ** : ನೀನು ಇಚ್ಛಿಸಿದ ಮತ್ತು ಪ್ರಾರ್ಥಿಸಿದ ಸಕಲ ವಸ್ತುಗಳು ಶೀಘ್ರ ಪ್ರಾಪ್ತವಾಗಲಿ, ನಿನ್ನ ಚಿತ್ತದ ಸಕಲ ಸಂಕಲ್ಪವು ಹುಣ್ಣಿಮೆಯ ಚಂದಿರನಂತೆ ಪರಿಪೂರ್ಣಗೊಳ್ಳಲಿ.

ಈ ಸಮಯದಲ್ಲಿ ಸಕಲರೂ ಸಾಧು! ಸಾಧು!! ಸಾಧು!! ಎಂದು ಹೇಳಿ ಸಂಸ್ಕಾರ ಕರ್ತರಿಗೆ ನಮಸ್ಕರಿಸಬೇಕು. ಗರ್ಭವತಿಯ ಪತಿಯು ಭಿಕ್ಖುಗಳಿಗೆ ಸಂಘದಾನ ನೀಡಿ ಕಳಿಸಬೇಕು. ಬೋಧಾಚಾರ್ಯರಿಗೆ ಯಾವ ದಾನವಿಲ್ಲ. ಆದರೆ ಕರೆ-ತರುವ-ಕಳುಹಿಸುವ ವ್ಯವಸ್ಥೆ ಮಾಡಬೇಕು. ಶಕ್ತಿಗನುಸಾರವಾಗಿ ಭೋಜನವಾಗಲಿ, ಹಣ್ಣುಗಳಾಗಲಿ, ಸಿಹಿ ತಿಂಡಿಗಳಾಗಲಿ ಪ್ರಸಾದ ವಿತರಣೆ ಮಾಡಬೇಕು. ಸ್ತ್ರೀಯರು ಗರ್ಭವತಿಯೊಡನೆ ವಿನೋದಾವಳಿಯಲ್ಲಿ ತೊಡಗಬೇಕು. ಹೀಗೆ ಮಾಡಲು ಗರ್ಭವತಿಯ ಮನದಾಳದಲ್ಲಿ ತ್ರಿರತ್ನದ ಧ್ಯಾನವು ಆಳವಾಗುತ್ತಿದ್ದಂತೆ ಗರ್ಭದಲ್ಲಿ ಬೆಳೆಯುತ್ತಿರುವ ಕೂಸಿನ ಮೇಲೆ ಉತ್ತಮ ಪರಿಣಾಮ ಬೀರುವುದು.

**೨. ಜನ್ಮ ಸಂಸ್ಕಾರ** : ಇದು ಎರಡನೆಯ ಪವಿತ್ರ ಸಂಸ್ಕಾರವು. ಮಗು ಜನಿಸಿದ ಐದನೆ ದಿನಕ್ಕೆ ಬುದ್ಧ ಪೂಜೆಯನ್ನು ಏರ್ಪಡಿಸಬೇಕು. ಮನೆಯು ಇನ್ನೂ ಶುಚಿತ್ವ ಇರದ ಕಾರಣ ಭಿಕ್ಖುಗಳನ್ನು ಆಮಂತ್ರಿಸದೇ ಬೌದ್ಧಾಚಾರ್ಯರನ್ನು ಆಮಂತ್ರಿಸಿ ಈ ಕಾರ್ಯವನ್ನು ಏರ್ಪಡಿಸಬೇಕು. ಮಗುವನ್ನು ಎತ್ತಿಕೊಂಡು ಮಾತಾ-ಪಿತರು ತಿಸರಣ ಗಮನ, ಪಂಚಶೀಲ ಗ್ರಹಣ, ವಂದನ, ಪರಿತ್ರಾಣ ಸೂತ್ರ ಪಠಣ ಸಂಸ್ಕಾರಕನೊಂದಿಗೆ ಶುದ್ಧ ಭಾವದಿಂದ ಮಾಡಬೇಕು. ತದನಂತರ ಸಂಸ್ಕಾರಕನು ಈ ಕೆಳಗಿನ ಸೂತ್ರ ನುಡಿಯುತ್ತಾನೆ.

**ಸಬ್ಬೇಸತ್ತಾ ಸುಖೀ ಹೊಂತು, ಸಬ್ಬೆ ಹೊಂತು ಚ ಖೇಮಿನೊ!**
**ಸಬ್ಬೇ ಭದ್ರಾಣಿ ಪಸ್ಸಂತು, ಮಾಕಂಚಿ ದುಃಖಮಾಗ ಮಾ!!**

**ಅರ್ಥ** : ಸಕಲ ಜೀವಿಗಳು ಸುಖವಾಗಿರಲಿ, ಎಲ್ಲವೂ ಕುಶಲ ಕ್ಷೇಮದಿಂದ ಇರಲಿ ತಮ್ಮ ತಮ್ಮೊಳಗೆ ಸಕಲ ಜನರೂ ಕಲ್ಯಾಣ ದೃಷ್ಟಿಯಿಂದ ನೋಡಿಕೊಳ್ಳಲಿ ಯಾರೂ, ಎಂದೂ ದುಃಖಿಯಾಗದಿರಲಿ, ಎಲ್ಲರೂ ಸಾಧು! ಸಾಧು !! ಸಾಧು !!! ಎಂದು ಹೇಳಬೇಕು. ಪೂಜೆಗೆ ಇಟ್ಟ ನೀರಿನಲ್ಲಿ ಸ್ವಲ್ಪ ಬೋಧಿ ಎಲೆಯಿಂದ ಸಿಂಪಡಿಸಿ ಮನೆಯ ನಾಲ್ಕು ಮೂಲೆಗಳಿಗೆ ಸಿಂಪಡಿಸಬೇಕು. ಹೀಗೆ ಎರಡನೆ ಸಂಸ್ಕಾರವನ್ನು ನೆರವೇರಿಸುತ್ತಾ ಲಘು ಸಿಹಿಯನ್ನು ಹಂಚಬೇಕು.

**೩. ನಾಮಕರಣ** : ಇದು ಮೂರನೇ ಮಹತ್ವದ ಸಂಸ್ಕಾರವು. ನಾಮಕರಣ ಸಂಸ್ಕಾರವನ್ನು ಮಗು ಜನಿಸಿದ ಐದನೆ ಸಪ್ತಾಹದಲ್ಲಿ ಏರ್ಪಡಿಸಬೇಕು. ಆಗ ಮಗುವಿನ ತಾಯಿಯ ಆರೋಗ್ಯ ಸುಧಾರಿಸಿ ಮನೆಯಲ್ಲಿ ಶುಚಿತ್ವ ಬರುವುದು, ಅನುಕೂಲ ದಿನದಂದು ಭಿಕ್ಖುಗಳನ್ನು /ಬೌದ್ಧಾಚಾರ್ಯರನ್ನು ಆಮಂತ್ರಿಸಬೇಕು. ತಾಯಿಯು ಆಚಮನಾದಿ ಶುಚಿತ್ವವನ್ನು ಹೊಂದಿ ತನಗೂ, ತನ್ನ ಮಗುವಿಗೂ ಹೊಸ ಬಟ್ಟೆಗಳನ್ನು ತೊಡಿಸಿಕೊಂಡು ಬುದ್ಧ ಪೂಜೆಯನ್ನು ಏರ್ಪಡಿಸಬೇಕು. ಬುದ್ಧ ಪ್ರತಿಮೆಗೂ, ಭಿಕ್ಖುಗಲಿಗೂ ತಾಯಿಯಯೂ ವಂದಿಸಿ, ಮಗುವನ್ನು ತೊಡೆಯ ಮೇಲಿರಿಸಿಕೊಂಡು ಕುಳಿತುಕೊಳ್ಳಬೇಕು. ಎಲ್ಲರೂ ತಿಸರಣ ಗಮನ, ಪಂಚಶೀಲ ಗ್ರಹಣ ಮಾಡಬೇಕು.

ಸಂಸ್ಕಾರ ಕರ್ತರು ಇಪ್ಪತ್ತೆಂಟು ಬುದ್ಧರ ನಾಮಸ್ಮರಣೆ ಮಾಡಿ ವಂದಿಸುವರು. ಆಗ ಅವರು ಧಮ್ಮ ಸೂತ್ರ ಹಿಡಿದಿರುವರು. ನಂತರ ಸಂಸ್ಕಾರಕರು ಒಂದು ಹೆಸರನ್ನು ತಂದೆ ತಾಯಿಗಳು ಒಂದು ಹೆಸರನ್ನು, ಬಂಧು-ಬಳಗದವರು ಇನ್ನೊಂದು ಹೆಸರನ್ನು ಸೂಚಿಸಬಹುದು. ಬಹುಮತ ತೆಗೆದುಕೊಂಡು ಸಂಸ್ಕಾರಕರು ನಿರ್ಣಯಿಸಿ ಮಗುವಿಗೆ ನಾಮಕರಣ ಮಾಡಬೇಕು. ನಂತರ ಈ ಕೆಳಗಿನ ಶ್ಲೋಕವನ್ನು ಸಂಸ್ಕಾರಕರು ನುಡಿಯುವರು.

**ಭವತು ಸಬ್ಬ ಮಂಗಲಂ ರಕ್ಖಂತು ಸಬ್ಬ ದೇವತಾ !**
**ಸಬ್ಬ ಬುದ್ಧಾನು ಭಾವೇನ ಸದಾ ಸೊತ್ಥಿ ಬವಂತು ತೆ !**
**ಸಬ್ಬ ಧಮ್ಮಾನು ಭಾವೇನ ಸದಾ ಸೊತ್ಥಿಬವಂತು ತೆ !!**
**ಸಬ್ಬ ಸಂಘಾನು ಭಾವೇನ ಸದಾ ಸೊತ್ಥಿಬವಂತು ತೆ !!!**

**ಅರ್ಥ** : ಸಕಲರಿಗೂ ಮಂಗಳವಾಗಲಿ. ದೇವತೆಗಳೂ ರಕ್ಷಿಸಲ್ಪಡಲಿ!
ಎಲ್ಲರೂ ಬುದ್ಧನ ಭಾವನೆ ಹೊಂದಿ ಸುಖಿಗಳಾಗಲಿ !!
ಸರ್ವರೂ ಧಮ್ಮದ ಭಾವನೆ ಹೊಂದಿ ಸುಖಿಗಳಾಗಲಿ !!
ಸಕಲರೂ ಸಂಘದ ಭಾವನೆ ಹೊಂದಿ ಸುಖಿಗಳಾಗಲಿ !!

ಸಂಸ್ಕಾರಕನು ಪೂಜೆಗೆ ಇಟ್ಟ ತಾಮ್ರದ ತಂಬಿಗೆಯ ನೀರನ್ನು ಬೋಧಿ ಎಲೆಗಳಿಂದ ಮಗುವಿಗೆ ಸಿಂಪಡಿಸುತ್ತ, ಮೇಲಿನ ಮಂತ್ರವನ್ನು ಪಠಿಸುವರು. ತಾಯಿ ತಂದೆಯವರಿಗೆ ಒಂದೆರಡು ಗುಟುಕು ಪವಿತ್ರ ಜಲವನ್ನು ಕುಡಿಸಬೇಕು. ಎಲ್ಲರೂ ಸಾಧು, ಸಾಧು ಎಂದು ನುಡಿಯಬೇಕು. ಪೂಜೆಗೆ ಹಿಡಿದ ದಾರದ ತುಕಡಿಯನ್ನು ಮಗುವಿನ, ಗಂಡು ಇದ್ದರೆ ಬಲಗೈಗೂ, ಹೆಣ್ಣು ಇದ್ದರೆ ಎಡಗೈಗೂ ಕಂಕಣ ಕಟ್ಟಬೇಕು. ಪವಿತ್ರ ಜಲವನ್ನು ಮಗುವಿನ ತಂದೆ ಮನೆಯ ನಾಲ್ಕು ದಿಕ್ಕಿಗೂ ಸಿಂಪಡಿಸಬೇಕು. ತದನಂತರ ಭಿಕ್ಕುಗಳಿದ್ದರೆ ಸಂಘದಾನ ಮಾಡಿ ಅವರನ್ನು ಬೀಳ್ಕೊಟ್ಟು ಇತರರಿಗೆ ಪ್ರಸಾದ ವಿತರಣೆ ಮಾಡುತ್ತ ಸ್ತ್ರೀಯರೆಲ್ಲರೂ ಮಗುವಿಗೆ ಹಾರೈಸಿ ಪದ್ಯಾವಳಿಗಳನ್ನುರಚಿಸಿ ಹಾಡುತ್ತಿರಬೇಕು. ಹೀಗೆ ಮಗುವು ತ್ರಿರತ್ನ ಭಾವನೆಯಲ್ಲಿಯೇ ಬೆಳೆಯುತ್ತಿರಬೇಕು.

**೪. ಅನ್ನಪ್ರಾಶನ** : ಇದು ನಾಲ್ಕನೇ ಸಂಸ್ಕಾರ, ಮಗುವಿಗೆ ಐದನೆ ತಿಂಗಳಲ್ಲಿ ಅನ್ನ ಪ್ರಾಶನ ಮಾಡಲಾಗುವುದು. ಅನುಕೂಲಕರ ದಿನದಂದು ತಾಯಿ-ಮಗು ಶುಚಿ ಸುಗಂಧ ದ್ರವ್ಯಗಳೊಡಗೂಡಿದ ಜಲದಿಂದ ಸ್ನಾನಾದಿಗಳನ್ನು ಮಾಡಿ ಮಗುವಿಗೆ ಹೊಸ ಬಟ್ಟೆ ತೊಡಿಸಿ, ತಾಯಿಯು ಸಹ ಹೊಸ ಅಥವಾ ಹಸವಾದ ಬಟ್ಟೆ ಧರಿಸಿ, ಬುದ್ಧ ಪೂಜೆಯನ್ನು ಏರ್ಪಡಿಸಬೇಕು. ತಾಯಿಯು ಮಗುವನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು ತಿಸರಣಗಮನ, ಪಂಚಶೀಲಗ್ರಹಣ ಮಾಡಿಕೊಂಡು ಪರಿತ್ರಾಣ ಸೂತ್ರವನ್ನು ಪವಿತ್ರ ಮನಸ್ಸಿನಿಂದ ಆಲಿಸುತ್ತಿರಬೇಕು.

ತದನಂತರ ಭಿಕ್ಷು ಬೋಧಾಚಾರ್ಯರು ಮಗುವಿನ ಬಾಯಿಯೊಳಗೆ ಸ್ವಲ್ಪ ಸ್ವಲ್ಪ ಖೀರನ್ನು ಉಣ ಬಡಿಸುವರು ''ನಮೋ ತಸ್ಸ ಭಗವತೊ ಅರಹತೊ ಸಮ್ಮಾ ಸಂಬುದ್ಧಸ್ಸ !! ಎಂದು ನುಡಿಯುತ್ತ ಅನ್ನಪ್ರಾಸನವನ್ನು ಮಾಡಿಸುವರು. ತಾಯಿಯ ಸಂಸ್ಕಾರಕರಿಗೆ ನಮಸ್ಕರಿಸಿ ಮಗುವಿಗೆ ಬುದ್ಧನ ದರ್ಶನ'' ಮಾಡಿಸಬೇಕು.

**೫. ಕೇಶ ಕಂಪನ ಅಥವಾ ಮಂಡನ ಸಂಸ್ಕಾರ :** ಇದು ಮಗುವಿಗೆ ಐದನೆ ಸಂಸ್ಕಾರ. ಜನ್ಮದಿಂದ ಮೂರು ವರ್ಷ ತುಂಬುವುದರೊಳಗೆ ಈ ಸಂಸ್ಕಾರವನ್ನು ಮಾಡಬೇಕು. ಇದನ್ನು ವಿಹಾರದಲ್ಲಿಯಾಗಲಿ, ಮನೆಯಲ್ಲಿಯೇ ಆಗಲಿ ಮಾಡಬಹುದು. ಅನುಕೂಲ ದಿನದಂದು ಬುದ್ಧ ಪೂಜೆ ಏರ್ಪಡಿಸಬೇಕು. ಭಿಕ್ಷು / ಬೌದ್ಧಾಚಾರ್ಯರು ಮಗುವಿನ ಸುಮಾರು ಐದೆಂಟು ಕೂದಲುಗಳನ್ನು ಕತ್ತರಿಸುವರು.

ಕೂದಲು ಕತ್ತರಿಸುವಾಗ ಈ ವಚನ ನುಡಿಯಬೇಕು.

**ಸಬ್ಬೆ ಬುದಧಾ ಬಲಪ್ಪತಾ ಪಚ್ಚೇಕಾನಂ ಚ ಯಂ ಬಲಂ !**

**ಅರಹಂತಾನಂಚ ತೇಜೇನ ರಕ್ಖಂ ವಂದಾಮಿ ಸಬ್ಬಸೊ !!**

ತದನಂತರ ನಾವಿಯು ಮುಂಡನ ಮಾಡುವನು. ಕೂದಲುಗಳನ್ನು ಗೋದಿ ಹಿಟ್ಟಿನ ಉಂಡೆಯಲ್ಲಿ ಇರಿಸಿ ಅದೆ ಉಂಡೆಯಿಂದ ಮಗುವಿನ ತಲೆಯೆಲ್ಲಾ ಉರುಳಾಡಿಸಿ ಅದನ್ನು ಯಾವುದಾದರೊಂದು ಬಯಲಿನಲ್ಲಿ ಹುಗಿಯಬೇಕು. ಅಥವಾ ನದಿಯಲ್ಲಿ ಬಿಡಬೇಕು. ನಂತರ ಮಗುವಿಗೆ ಸ್ನಾನ ಮಾಡಿಸಿ ಹೊಸ ಬಟ್ಟೆ ತೊಡಿಸಿ ಎಲ್ಲರೂ ತಿಸರಣ ಗಮನ, ಪಂಚಶೀಲ ಗ್ರಹಣ ಮಾಡಬೇಕು. ಪರಿತ್ರಾಣ ಸೂತ್ರ ಪಠಣವಾದ ಮೇಲೆ ಭಿಕ್ಷುಗಳಿದ್ದರೆ ಸಂಘದಾನ ಮಾಡಬೇಕು. ಸಾಯಂಕಾಲ ಬುದ್ಧ ವಿಹಾರಕ್ಕೆ ದರ್ಶನವಿತ್ತು ಹೂ, ಹಣ್ಣು ದೀಪ ಗಂಧಗಳಿಂದ ಪೂಜಿಸಬೇಕು.

**೬. ಕರ್ಣ ಭೇಧನ ಸಂಸ್ಕಾರ :** ಇದು ಮಗುವಿನ ಐದನೇ ವರ್ಷದಲ್ಲಿ ಮುಂಡನ ಸಂಸ್ಕಾರದ ನಂತರ ನೆರವೇರಿಸುವರು. ಕಿವಿ ಚುಚ್ಚುವ ಸಂಸ್ಕಾರವನ್ನು ಹೆಚ್ಚಾಗಿ ಹೆಣ್ಣು ಮಗುವಿಗೇ ಮಾಡಿಸುವರು. ಆದರೂ ಕೆಲ ವೈದ್ಯಕೀಯ ವಿಜ್ಞಾನದಂತೆ ಗಂಡುಮಗುವಿಗೂ ಕಿವಿ ಚುಚ್ಚುವುದು ಕ್ಷೇಮ.

ಅನುಕೂಲ ದಿನದಂದು ಬುದ್ಧಪೂಜೆ ಏರ್ಪಡಿಸಿ ಕಿವಿ ಚುಚ್ಚುವ ತಜ್ಞರನ್ನು ಕರೆಸಬೇಕು. ಅವರು ಮಗುವಿನ ಕಿವಿ ಚುಚ್ಚುತ್ತಿದ್ದಂತೆ, ಸಂಸ್ಕಾರ ಕರ್ತರು ಈ ಕೆಳಗಿನ ಶ್ಲೋಕ ನುಡಿಯುವರು.

**''ಸಬ್ಬೀತ್ತೀಯೊ ವಿವಜ್ಜಂತು ಸಬ್ಬರೋಗೋ ವಿನಸ್ಸತೊ !''**

**ಅರ್ಥ** : ಸಕಲ ಸಂಕಟ ದೂರವಾಗಲಿ, ರೋಗ-ರುಜಿನ ಬಾರದಿರಲಿ, ಆರೋಗ್ಯ ಲಾಭವಾಗಲಿ, ತದನಂತರ ಎಲ್ಲರೂ ತಿಸರಣ ಗಮನ, ಪಂಚಶೀಲ ಗ್ರಹಣ ಪಡೆದು ಪರಿತ್ರಾಣ ಪಠಣ ಕೇಳಬೇಕು. ಮಗು ಸ್ವಲ್ಪ ನೋವಿನಿಂದ ಅಳಬಹುದೆಂತಲೇ ಪೂಜಾ ವಿಧಿಗಳನ್ನು ಏರ್ಪಡಿಸಬೇಕು.

**೭. ವಿಜ್ಜಾರಂಬ ಸಂಸ್ಕಾರ** : ಇದು ಮಗುವಿನ ಜೀವನದ ಏಳನೆ ಮಹತ್ವದ ಸಂಸ್ಕಾರ, ಮಗುವು ಐದು ಅಥವಾ ಏಳನೆ ವರ್ಷದಲ್ಲಿ ನಡೆಯುತ್ತಿದ್ದಾಗ ಈ ಸಂಸ್ಕಾರವನ್ನು ಬುದ್ದ ವಿಹಾರದಲ್ಲಿ ಅಥವಾ ಮನೆಯಲ್ಲಿ ಬುದ್ದ ಪೂಜೆಯೊಂದಿಗೆ ಏರ್ಪಡಿಸಬೇಕು. ಮಗುವಿಗೆ ಶುಚಿ-ಸ್ನಾನಾದಿಗಳನ್ನು ಮಾಡಿಸಿ ಹೊಸ ಅಥವಾ ಹಸನಾದ ಉಡಿಗೆ ತೊಡಿಸಿ ಬುದ್ಧ ಮೂರ್ತಿ ಎದುರು ಕುಳ್ಳಿರಿಸಬೇಕು. ಭಿಕ್ಖು / ಬೋದ್ಧಾಚಾರ್ಯರು ಮಗುವಿನ ಕೈಯಲ್ಲಿ ಪಾಟಿಯನ್ನು ಇಟ್ಟು ಕೈಯಲ್ಲಿ ಪೆನ್ಸಿಲನ್ನು ಕೊಟ್ಟು ಮಗುವಿನ ಮಾತೃ ಭಾಷೆಯಲ್ಲಿ ಮಗುವಿನ ಕೈ ಹಿಡಿದು ಬುದ್ದಂ ಶರಣಂ ಗಚ್ಛಾಮಿ ! ಧಮ್ಮಂ ಸರಣಂ ಗಚ್ಛಾಮಿ !! ಸಂಘಂ ಸರಣಂ ಗಚ್ಛಾಮಿ !!! ಎಂದು ಬರೆಯಿಬೇಕು. ಬುದ್ಧನ ಕಥೆಯನ್ನು ಮಗುವಿಗೆ ಹೇಳಬೇಕು. ತದನಂತರ ಮಗುವನ್ನುತಮಗೆ ಅನುಕೂಲವಾದ ಶಾಲೆಗೆ ಪಾಲಕರು ಸೇರಿಸಬೇಕು. ಹೀಗೆ ಮಗು ತನ್ನ ಧರ್ಮವನ್ನು ವಿದ್ಯಾಲಯದಲ್ಲಿ ಬಲೆಸಲಿಕ್ಕೆ ಹೇಳಲಿಕ್ಕೆ ಹಕ್ಕು ಬರುತ್ತದೆ ಮತ್ತು ಧರ್ಮದೊಂದಿಗೆ ನಿತ್ಯಾರಂಭ ನಡೆಯುತ್ತದೆ.

**೮. ಸಾಮಣೇರ ಪಬ್ಬಜ್ಜ ದೀಕ್ಷಾ ಸಂಸ್ಕಾರ** : ಈ ದೀಕ್ಷೆಯನ್ನು ಬೌದ್ಧ ಬಾಲಕರಿಗೆ ಮಾತ್ರ ಕೊಡಲಾಗುವುದು. ಬಾಲಕರು 7 ರಿಂದ 11 ವರ್ಷದಲ್ಲಿದ್ದಾಗ ಈ ಸಂಸ್ಕಾರ ನೆರವೇರಿಸುವ ಇತರ ಹಿಂದೂ ಬ್ರಾಹ್ಮಣ ಧರ್ಮದಲ್ಲಿ ಮುಂಜಿಯಂದು ಉಪನಯನ ಅಥವಾ ಜನಿವಾರವನ್ನು ಕಟ್ಟುವರು. ಮುಸಲ್ಮಾನರ್ಲಲಿ ಸುಂತಿ ಮಾಡಿಸುವರು. ಕ್ರಿಶ್ಚಿಯನರಲ್ಲಿ

ಬೆಪ್ತಿಸ ಮಾಡುವರು. ಇದರಂತೆ ಸಿಕ್-ಪಾರ್ಸಿ ಜೈನ ಧರ್ಮಗಳಲ್ಲಿಯು ಉಂಟು. ಕಾರಣ ಬಾಲಕನು ತನ್ನ ಧರ್ಮಕ್ಕೆ ಹೊಂದಿಕೊಳ್ಳಬೇಕು. ಆಚರಣೆ ಮಾಡಬೇಕು. ಸುಸಂಸ್ಕೃತನಾಗಬೇಕೆಂದು. ಇದೇ ತರಹ ಬೌದ್ಧರಲ್ಲಿಯೂ ''ಸಾಮಣೇರ'' ದೀಕ್ಷಾ ಆಗಿರದಿದ್ದಲ್ಲಿ ವಧು ಆಗುವಳು ಆತನನ್ನು ನಿರಾಕರಿಸುತ್ತಾಳೆ. ಮತ್ತು ಸಮಾಜದಲ್ಲಿ ಅಧರ್ಮಿಯನೆಂದು ಘನತೆ-ಗೌರವಗಳಿಗೆ ಅರ್ಹನಾಗುವುದಿಲ್ಲ. ಆದ್ದರಿಂದ ಪಾಲಕರಾದವರು ಕುಮಾರನಿಗೆ ಸಾಮಣೇರ ದೀಕ್ಷೆಯನ್ನು ಕೊಡಿಸಿದರೆ ಮಾತ್ರ ಅವರೂ ಬೌದ್ಧರೆಂದು ಪರಿಗಣಿಸಲ್ಪಡುವರು. ಹೀಗೆ ಈ ಸಂಸ್ಕಾರವು ಪಾಲಕರಿಗೂ, ಬಾಲಕನಿಗೂ ಅಷ್ಟೇ ಜವಾಬ್ದಾರಿಯುತವಾದುದು.

**ದೀಕ್ಷಾ ಸಮಾರಂಭ :** ಅನುಕೂಲವಾದ ದಿನದಂದು ಪಾಲಕರು ಬಾಲಕನನ್ನು ಬುದ್ಧ ವಿಹಾರಕ್ಕೆ ಕರೆದುಕೊಂಡು ಹೋಗಿ ಭಿಕ್ಖುಗಳ ಸಮ್ಮುಖದಲ್ಲಿ ಕಾರ್ಯ ನೆರವೇರಿಸುವರು. ಬಾಲಕನ ಮುಂಡನೆ ಮಾಡಿಸಿ ಶುದ್ಧ ಸ್ನಾನಾಧಿಗಳನ್ನು ಮಾಡಿಸಿ ಹೊಸ ಬಿಳಿ ಪಂಜೆಯನ್ನುಡಿಸಿ ಬರಿ ಮೈಯಲ್ಲಿ ಭಿಕ್ಖುಗಳ ಸಮಕ್ಷಮ ಕುಳ್ಳಿರಿಸಬೇಕು. ಬಾಲಕನು ಭಂತೆಯವರಲ್ಲಿ ಈ ರೀತಿ ಪ್ರಾರ್ಥಿಸುವನು.

ಭಂತೆ : ಕಾಯ, ವಾಚಾ, ಮನಸ್ಸಿನಿಂದ ಆಗಿದ್ದ ಅಪರಾಧಗಳನ್ನು ಕ್ಷಮಿಸಿ ನನಗೆ ತ್ರಿಕರಣ ಪಂಚಶೀಲ ಧಮ್ಮವನ್ನು ಅನುಗ್ರಹಿಸಿ ಸಾಮಣೇರನನ್ನಾಗಿ ಮಾಡಿ ಅನುಕಂಪವನ್ನು ತೋರಿಸಿರಿ ಭಂತೆ, ಭಂತೆಯವರು ಕುಮಾರನನ್ನು ಬೌದ್ಧ ಸಾಮಣೇರನಾಗಲಿಕ್ಕೆ ಪಾಲಕರ ಅನುಮತಿ ಕೇಳುವರು. ಕೂಡಲೆ ಪಾಲಕರು ಹಾಗೆ ಆಗಲಿ ಭಂತೆಯೆಂದು ಹೇಳಿ ಕುಮಾರನನ್ನು ಎತ್ತಿಕೊಟ್ಟು ಭಂತೆಯವರ್ಲಿಲ ಅರ್ಪಿಸಬೇಕು.

ನಂತರ ಭಂತೆಯವರು ಭಿಕ್ಷಾ ಪಾತ್ರೆಯನ್ನು, ಕಾವಿ ಬಣ್ಣದ ಚೀವರ (ಉಡುಪು)ವನ್ನು, ಮುಂಡನ ಮಾಡುವ ಸಲಕರಣೆ, ನೀರನ್ನು ಸೋಸಿ ಕುಡಿಯಲಿಕ್ಕೆ ಒಂದು ಬಿಳಿ ವಸ್ತ್ರವನ್ನು ಕುಮಾರನಿಗೆ ನೀಡುವರು. ಇತರ ಶಿಷ್ಯ ಮಂಡಳಿಯಿಂದ ಚೀವರವನ್ನು ಬೌದ್ಧಪದ್ಧತಿಯಲ್ಲಿ ಉಡಿಸಿ, ಕೈಯಲ್ಲಿ ಭಿಕ್ಷಾಪಾತ್ರೆಯನ್ನಿಟ್ಟು ಮತ್ತು ಭಂತೆಯವರ ಸಮ್ಮುಖದಲ್ಲಿ ತುದಿಗಾಲ ಬೆರಳಿನ ಮೇಲೆ ಕುಳಿತುಕೊಂಡು ಧಮ್ಮಯಾಚನೆ ಮಾಡುವರು.

ಭಂತೆಯವರು ಸಾಮಣೇರ ನಿಯಮವನ್ನು ಹೇಳಿಕೊಡುವರು. ಪಂಚಶೀಲ, ಅಷ್ಟಶೀಲ, ದಶಶೀಲದ ಬಗ್ಗೆ, ಧ್ಯಾನಗಳ ಬಗ್ಗೆ, ಸಾಮಣೇರ ನಿಯಮಾವಳಿ ಬಗ್ಗೆ ಹೇಳಿ ಬೌದ್ಧ ಸಂಘಕ್ಕೆ ಸೇರಿಸಿಕೊಳ್ಳುವರು. ಈ ಜೀವನವನ್ನು ಬಾಲಕನು ಕನಿಷ್ಠ ಒಂದು ವಾರದಿಂದ ನಾಲ್ಕು ವಾರದವರೆಗೆ ನಡೆಸಬೇಕು. ಈ ಸಮಯದಲ್ಲಿ ಧಮ್ಮ ಉಪದೇಶ ಶ್ರವಣ, ಮನನ ಭೀಕ್ಷಾಟನೆಯ ಬಗ್ಗೆ, ಉಡುಪುಗಳ ಬಗ್ಗೆ, ವಿನಯದ ಬಗ್ಗೆ, ಅಭ್ಯಾಸ ಕಲಿಸುವರು. ಹೀಗೆ ಬಾಲಕನು ಪವಿತ್ರ ಜೀವನ ಧರ್ಮ ಸಾಧನೆಯನ್ನು ಮಾಡುತ್ತಾನೆ. ಕುಮಾರನ ಮನಸ್ಸನ್ನು ಪರೀಕ್ಷಿಸುತ್ತ ಆತನು ಸಾಧು ಜೀವನವನ್ನು ನಡೆಸಲು ಉತ್ಸಾಹ ತೋರಿದರೆ ಅದನ್ನೇ ಮುಂದುವರಿಸಬೇಕು. ಒಂದು ವೇಳೆ ಗೃಹಸ್ಥ ಜೀವನಕ್ಕೆ ಹಿಂತಿರುಗಲು ಅಪೇಕ್ಷಿಸಿದರೆ ದಾನ ಪಾತ್ರೆ, ಚೀವರಾದಿಗಳನ್ನು ಭಂತೆಯವರಿಗೆ ಮರಳಿಕೊಟ್ಟು ಮನೆಗೆ ಬರಬಹುದು. ಸಾಮಣೇರ ದಿನದಂದು ಪಾಲಕರು ಸಂಘದಾನ, ಪ್ರಸಾದ ವಿತರಣೆ, ಧಮ್ಮ ಚರ್ಚೆಯಲ್ಲಿ ನಿರತರಾಗಬೇಕು. ಬೌದ್ಧ ರಾಷ್ಟ್ರಗಳಲ್ಲಿಯಾದರೂ ಸಾಮಣೇರ ಹೊಂದಿದ ದಿನದಂದು ಸಾಮಣೇರನಿಗೆ ಆನೆಯ ಮೇಲೆ ಕೂಡಿಸಿ ಮೆರವಣಿಗೆಯನ್ನು ನಗರ-ಪಟ್ಟಣದ ರಾಜ ಮಾರ್ಗದಲ್ಲಿ ಮಂಗಳ ವಾದ್ಯಗಳೊಂದಿಗೆ ಹೋಗಿ ಬರುವರು. ಉಪಾಸಕರು ತಮ್ಮ ಮನೆಗಳಿಗೆ ಆಮಂತ್ರಿಸಿ ಭೋಜನ ದಾನ ಮಾಡುವರು. ಹೀಗೆ ಗೌರವ ಆದರಗಳನ್ನು ಮಗುವಿಗೆ ಎಳೆ ವಯಸ್ಸಿನಲ್ಲಿ ತೋರುತ್ತಿದ್ದಂತೆ ಆಧ್ಯಾತ್ಮಿಕ ಜೀವನಲ್ಲಿಯೂ ಅಥವಾ ಲೌಕಿಕ ಜೀವನದಲ್ಲಿಯೂ ನಾಯಕನಾಗಲು ಪ್ರಯತ್ನಿಸುತ್ತಾನೆ.

**೯. ವಿವಾಹ ಸಂಸ್ಕಾರ :** ಈ ಸಂಸ್ಕಾರ ಬಹು ಮುಖ್ಯವಾದುದು. ವಿವಾಹದಿಂದ ಗಂಡು-ಹೆಣ್ಣುಗಳ ಸಂಪರ್ಕವಾಗಿ ಹೊಸ ಪೀಳಿಗೆ ಉತ್ಪತ್ತಿಯಾಗುವುದು. ಎರಡು ಮನೆತನಗಳ ಸಂಬಂಧ ಅವರವರ ಬಂಧುಗಳ ಸಂಬಂಧ ಬೆಳೆಯುತ್ತದೆ. ಇತರರಂತೆ ಬೌದ್ಧರಲ್ಲಿಯೂ ಸಹ ವಿವಾಹವು ಧಾರ್ಮಿಕ ಹಾಗೂ ಸಾಮಾಜಿಕ ಕರ್ಮವಾಗಿದೆ. ವಿವಾಹಕ್ಕೆ ಗಂಡು-ಹೆಣ್ಣುಗಳ ಪ್ರೇಮ ಒಂದೇ ಸಾಲದು ಆದರೆ ಗುರು-ಹಿರಿಯರ, ಬಂಧು-ಬಳಗದ, ಮಿತ್ರ-ಪರಿಜನರ ನೆರೆಹೊರೆಯವರ ಆದರ ಪ್ರೇಮಗಳು ಸದಾ ಇರಲೇಬೇಕು.

ಭಾರತ ದೇಶದಲ್ಲಿ ವರ್ಣ, ಜಾತಿ, ವಂಶ, ಮುಖ್ಯಸಂಗತಿಗಳು ಸ್ವಜಾತಿ ವಿವಾಹ ಅನುಲೋಮ ಮತ್ತು ವಿಜಾತಿ ವಿವಾಹ ಪ್ರತಿಲೋಮವೆಂದು ಹಿಂದೂ ಶಾಸ್ತ್ರಗಳು ಹೇಳುತ್ತವೆ. ಅನುಲೋಮದಿಂದ ಜನಿಸಿದ ಮಗು ಉಚ್ಚನೆಂದೂ ಪ್ರತಿಲೋಮದ ಮಗು ನೀಚನೆಂದು ಶಾಸ್ತ್ರಗಳು ಸಾರಿವೆ. ಮುಸಲ್ಮಾನ-ಸಿಖ್ ಧರ್ಮಗಳಲ್ಲಿ ವರ್ಣಭೇದ ಕಂಡುಬರುವುದು. ಪಾಶ್ಚಾತ್ಯರಲ್ಲಿ ಮದುವೆಯಾದ ಬಂಧನಕ್ಕಿಂತಲೂ ಪರಸ್ಪರ ಸಂಬಂಧವೇ ಬೆಲೆ ಇದೆ. ಬೌದ್ಧರಲ್ಲಿಯಾದರೂ ವರ್ಣ, ಜಾತಿ, ಮತ, ಪಂಗಡಗಳು ಇರುವುದಿಲ್ಲ. ಆದರೆ ವಿವಾಹವಾಗಲಿರುವ ಇಬ್ಬರು ತ್ರಿರತ್ನದಲ್ಲಿ ಶರಣು ಹೋಗುತ್ತಾರೆ. ಬುದ್ಧ ಧರ್ಮವು ಹುಟ್ಟಿನಿಂದ ಬರುವುದಿಲ್ಲ. ಆದರೆ ಒಬ್ಬನು ಅಪ್ಪಿಕೊಳ್ಳುವುದರಿಂದ ಬರುತ್ತದೆ.

ವಿವಾಹವಾಗಲಿಚ್ಛಿಸುವ ವಧು 18 ವರ್ಷ ಮತ್ತು ವರನು 21 ವರ್ಷ ಮೀರಿರಬೇಕು. ವಿವಾಹವು ರಕ್ತ ಸಂಬಂಧಿಕರೊಡನೆ ಆಗುವುದಾದರೆ ವಧು-ವರರು ಏಳು ಪೀಳಿಗೆಯಷ್ಟು ದೂರ ಇರುವುದು ಲೇಸು. ಹೆಚ್ಚು ಹೊರಗಿನ ಸಂಪರ್ಕ ಬೆಳೆಸುತ್ತ ಹೋದಲ್ಲಿ ಬಂಧುಗಳ ಸಂಬಂಧ ಹಿಗ್ಗುತ್ತದೆ. ಮದುವೆಗೆ ಗುರು-ಹಿರಿಯರ ಅಪೇಕ್ಷೆಯಂತೆ ವಧುವರರ ಪರಸ್ಪರ ಇಚ್ಛೆಯೂ ಅವಶ್ಯ. ಅದೇ ರೀತಿ ಸ್ವಯಂವರ ಪ್ರೇಮ ವಿವಾಹಕ್ಕೂ ಗುರು-ಹಿರಿಯರ ಅಪ್ಪಣೆಯೂ ಮುಖ್ಯ. ವಧು-ವರನಿಗಿಂತ 3 ರಿಂದ 5 ವರ್ಷ ಚಿಕ್ಕವಳಿರುವುದು ಉತ್ತಮ. ವಧುವಿಗಿಂತ ವರನ ಶಿಕ್ಷಣ ಹೆಚ್ಚಿದ್ದಷ್ಟು ಚೆನ್ನ. ವರನು ಉದ್ಯೋಗದಲ್ಲಿದ್ದು ಜೀವನೋಪಾಯಕ್ಕೆ ಗಳಿಸುವವನಾಗಿರಬೇಕು.

ಬೌದ್ಧರಲ್ಲಿ ಹೆಣ್ಣು-ಗಂಡುಗಳ ಜಾತಕ ನೋಡುವ ರೂಢಿ ಇಲ್ಲ. ಆದರೆ ಅವರವರ ನೀತಿ-ಸಂಹಿತೆ ಪರಸ್ಪರರನ್ನು ಆಕರ್ಷಿಸುವ ಮೈ-ಬಣ್ಣ, ವ್ಯಕ್ತಿತ್ವ, ಕಲೆ, ವಿದ್ಯಾಭ್ಯಾಸ ಇವೇ ಮುಖ್ಯ. ತಮ್ಮ ತಮ್ಮ ಘನತೆ ಗೌರವಗಳಿಗೆ ತಾವೇ ಕಾರಣರಾಗಿದ್ದರಿಂದ ಹುಟ್ಟುಮನೆತನದ ಇತಿಹಾಸ ನೋಡುವ

**(ಅ) ವಿವಾಹ ಸಂಬಂಧ :-** ಗಂಡು ಹೆಣ್ಣಿನ ಪಕ್ಷದವರಿಬ್ಬರಿಗೂ ಅನುಕೂಲವಾದ ದಿನ ಗಂಡಿನವರು ವರನೊಂದಿಗೆ ಕನ್ಯಾದರ್ಶನಕ್ಕೆ

ಅವಳ ಸ್ವಗೃಹಕ್ಕೆ ತೆರಳಬೇಕು. ವರ-ಕನ್ಯಾ ಪರೀಕ್ಷೆಗಳಾದ ನಂತರ ಅವರವರ ಅಭಿಪ್ರಾಯ ಪಡೆಯಬೇಕು. ಬೌದ್ಧರಲ್ಲಿ ವರದಕ್ಷಿಣೆ ವಿಚಾರವಿರುವುದಿಲ್ಲ. ಆದರೆ ಒಡವೆ ವಸ್ತ್ರಗಳನ್ನು, ಕಾಣಿಕೆಗಳನ್ನು ಕೊಡುವುದು-ಪಡೆಯುವುದು ಎರಡೂ ಪಕ್ಷದವರು ಒಪ್ಪಿಕೊಳ್ಳಬೇಕು. ಗುರು-ಹಿರಿಯರೂ ಈ ಸಂಬಂಧಕ್ಕೆ ಸಮ್ಮತಿ ಕೊಡಬೇಕು.

**(ಆ) ಕನ್ಯಾ ನಿಶ್ಚಯ (ಸಗಾಯಿ)** :- ಪರಸ್ಪರ ಒಪ್ಪಿಗೆಯಾದ ನಂತರ ಅದೇ ದಿನವಾಗಲಿ ಅಥವಾ ಇನ್ನೊಂದು ದಿನವಾಗಲಿ ಕನ್ಯಾ ನಿಶ್ಚಯ ಕಾರ್ಯವನ್ನು ಅವಳ ಸ್ವಗೃಹದಲ್ಲಿ ಏರ್ಪಡಿಸಬೇಕು. ಅಂದು ಬೌದ್ಧಾಚಾರ್ಯರನ್ನು ಆಮಂತ್ರಿಸಿ ಬುದ್ಧ ಪೂಜೆ ಏರ್ಪಡಿಸಬೇಕು. ವರನ ಪಕ್ಷದವರು ಕನ್ಯಾಮಣಿಗೆ ಉಡುಗೊರೆ ಕೊಟ್ಟು ಉಡಿಯಲ್ಲಿ ಹಣ್ಣು-ಕಾಯಿ ತುಂಬಬೇಕು. ಅವಳಿಗೆ ವರನ ಹೆಸರಿನಲ್ಲಿ ಅರಿಶಿಣ-ಕುಂಕುಮ ಇಡಬೇಕು. ಎಲ್ಲರೂ ತಿಸರಣಗಮನ-ಪಂಚಶೀಲ ಗ್ರಹಣ ಮಾಡಬೇಕು. ಪೂಜೆಗೆ ಇರಿಸಿದ್ದ ಸ್ವಲ್ಪ ನೂಲು-ದಾರ ಕತ್ತರಿಸಿ ಅರಿಶಿಣದಲ್ಲಿ ಅದ್ದಿವಧುವಿನ ಎಡಗೈಗೆ ಕಂಕಣ ಕಟ್ಟಬೇಕು. ಎಲ್ಲರಿಗೂ ಸಿಹಿ ಪ್ರಸಾದ ಹಂಚಬೇಕು. ಈ ಕಾರ್ಯಕ್ರಮಕ್ಕೆ ''ಸಾಕ್ಷಗಂಧ'' ''ಸಗಾಯಿ''ಯಂತಲೂ ಅನ್ನುವರು. ವಧುವು ಗುರುಹಿರಿಯರಿಗೆಲ್ಲ ನಮಸ್ಕರಿಸಬೇಕು. ಆಗ ಬೋಧಾಚಾರ್ಯರು ಈ ಕೆಳಗಿನ ಮಂತ್ರ ನುಡಿಯುವರು.

**ಆಯು ಆರೋಗ್ಯ ಸಂಪತ್ತಿ, ಸಗ್ಗ ಸಂಪತ್ತಿ ಮೇವ ಚ !**
**ತತೂ ನಿಬ್ಬಾಣ ಸಂಪತ್ತಿ ಇಮಿನಾ ತೆ ಸಮಿಜ್ಝತು !!**
**ಸಬ್ಬರೋಗ ವಿಮುತ್ತೊ ಸಬ್ಬ ಸಂತಾಪ ವಜ್ಜತೊ !**
**ಸಬ್ಬವೇರ ಮಲೆ ಕಂತೋ ನಿಬ್ಬತೊ ತುವಂ ಭವ !!**

**ಅರ್ಥ** :- ಈ ಪುಣ್ಯದಿಂದ ನಿನಗೆ ಆಯು, ಆರೋಗ್ಯ, ಸ್ವರ್ಗ ಮತ್ತು ನಿಬ್ಬಾಣ ಪ್ರಾಪ್ತಿಯಾಗಲಿ. ನೀನು ಸರ್ವರೋಗದಿಂದ, ಸರ್ವಸಂತಾಪದಿಂದ ಮತ್ತು ವೈರತ್ವದಿಂದ ಮುಕ್ತಿ ಹೊಂದಿ ಪರಮ ಸುಖ ಮತ್ತು ಶಾಂತಿಯ ಲಾಭ ಹೊಂದು.

**(ಇ) ವಿವಾಹ ಮಂಗಲ ಪತ್ರ** : ವನರ ಪಕ್ಷದವರು ವಿವಾಹ ಕಾರ್ಯಕ್ರಮದ ದಿನಾಂಕ, ವಾರ, ಸಮಯ, ಸ್ಥಳ ನಿಶ್ಚಯಿಸಿ ವಧುವಿನ

ಪಕ್ಷದವರಿಗೆ ಪತ್ರ ಕಳುಹಿಸಬೇಕು. ಇವಾಹವು ಕಲ್ಯಾಣ ಮಂಟದಲ್ಲಿಯಾಗಲಿ ವಧುವಿನ ಸ್ವಗೃಹದಲ್ಲಿಯಾಗಲಿ ಅಥವಾ ವರನ ಗೃಹದಲ್ಲಿಯಾಗಲಿ ನೆರವೇರಬಹುದು. ಹಾಗೆ ವಧುವಿನ ಪಕ್ಷದವರು ಪತ್ರಕೆ ಸಹಿ ಹಾಕಿ ಮರಳಿ ವರನ ಪಕ್ಷದವರಿಗೆ ಕಳುಹಿಸಬೇಕು. ನಂತರ ಎರಡೂ ಪಕ್ಷದವರೂ ಆಮಂತ್ರಣ ಪತ್ರ ಛಾಪಿಸಿ (ಮುದ್ರಿಸಿ) ಬಂಧು-ಮಿತ್ರರಿಗೆಲ್ಲ ಹಂಚಬೇಕು. ಆಮಂತ್ರಣದ ಮೇಲೆ ''ನಮೋ ಬುದ್ಧಾಯ'' ಮತ್ತು ಬುದ್ಧನ ಚಿನ್ಹೆಯನ್ನು ಹಾಕಬೇಕು.

**(ಈ) ವಿವಾಹ ಪರಿಗ್ರಹಣ :-** ನಿಶ್ಚಯಿಸಿದ ದಿನದಂದು ನಿರ್ಧರಿಸಿದ ಸ್ಥಳಕ್ಕೆ ಎರಡು ಪಕ್ಷದವರೂ ತಲುಪಿರಬೇಕು. ವಿವಾಹ ಏರ್ಪಡಿಸಿದ ಪಕ್ಷದವರು ತಮ್ಮ ಬೀಗರನ್ನು ಸಡಗರ-ಹರ್ಷದಿಂದ ಎದುರುಗೊಳ್ಳಬೇಕು. ವ್ಯವಸ್ಥಿತ ಸ್ಥಳದಲ್ಲಿ ಹೊಂದಿಕೊಂಡ ನಂತರ ಉಪಾಹಾರ-ಯಹಾ ಆದ ನಂತರ ಮದು ಮಕ್ಕಳನ್ನು ತಯಾರಿಸಬೇಕು.

**(1) ಮಂಗಲ ಸ್ನಾನ :-** ವಧು-ವರರಿಗೆ ಅರಿಶಿಣ-ಗಂಧಾದಿಗಳನ್ನು ಮುಖ, ಮೈ, ಕೈಗೆ ಹಚ್ಚಿ ಸುಗಂಧ ದ್ರವ್ಯಪೂರಿತ ಬಿಸಿ ನೀರಿನಿಂದ ಸ್ನಾನ ಮಾಡಿಸಿ ಬಿಳಿ ವಸ್ತ್ರಗಳನ್ನೇ ಉಡಿಸಬೇಕು. ವಧುವು ಒಡವೆ-ವಸ್ತ್ರಗಳನ್ನು ಧರಿಸಿ ಮುತ್ತಿನ ದಂಡೆಯನ್ನು ಧರಿಸಿ ಹೂ ಮುಡಿದುಕೊಳ್ಳಬೇಕು. ವರನು ತಲೆಗೆ ಕಿರೀಟದ ದ್ಯೋತಕವಾಗಿ ಸ್ಥಳೀಯ ನಿಯಮದಂತೆ ಮುತ್ತಿನ ಸರ ನೇತಾಡುವ ಪೇಠಾ ಧರಿಸಬೇಹುದು. ವಧು-ವರರು ಎಲ್ಲರಿಗಿಂತ ಭೋಜೀತವಾಗಿ ಕಾಣುವಂತಿರಬೇಕು. ಎಲ್ಲರೂ ಶುಭ್ರ ವಸ್ತ್ರ ಧರಿಸಿಕೊಂಡು ಮದು ಮಕ್ಕಳನ್ನು ಮಂಟಪದ ಮೇಲೆ ಕರೆದೊಯ್ಯಬೇಕು. ಆಗ ಮಂಗಳ ವಾದ್ಯಗಳು ನುಡಿಯುತ್ತಿರುತ್ತವೆ.

**(2) ಬುದ್ಧ ಪೂಜೆ :-** ಮಂಟಪದ ಮೇಲೆ ಬುದ್ಧ-ಪೂಜೆ ಏರ್ಪಡಿಸಬೇಕು. ಬಿಕ್ಖು/ಬೋಧಾಚಾರ್ಯರು ಗುರುಸ್ಥಾನದಲ್ಲಿ ಕುಳಿತಿರಬೇಕು. ವಧುವರರು ಬುದ್ಧಮೂರ್ತಿ ಮುಂದೆ ಕೂಡುವರು. ಮಂಟಪದ ಮೇಲೆ ಇತರರು ಇರಕೂಡದು. ಪೂಜೆಗೆ ಇರಿಸಿದ್ದ ಸೂತ್ರದಾರವನ್ನು ಮೂರ್ತಿಗೆ ತಾಕಿಸಿ, ಕಲಸಕ್ಕೆ ಸುತ್ತಿ ವಧು-ವರರ ಕೈಯೊಳಗಿಂದ ಹಾಯಿಸಿ ಒಂದು ಅಂಚನ್ನು ಭಿಕ್ಖು/ಬೋಧಾಚಾರ್ಯರು ತಮ್ಮ ಕೈಯಲ್ಲಿ ಹಿಡಿದುಕೊಂಡಿರುವರು. ವಧು-ವರರು ಧಮ್ಮ ಯಾಚನೆ

ಮಾಡುವರು : ಪೂಜ್ಯರು ತ್ರಿಸರಣ-ಪಂಚಶೀಲಗಳನ್ನು ದಯಪಾಲಿಸುವರು. ಸಕಲರೂ ಮದು ಮಕ್ಕಳೊಡನೆ ನುಡಿಯಬೇಕು. ನಂತರ ಭಿಕ್ಖುಗಳು, ಜಯಮಂಗಳ ಅಠಗಾಥೆಯನ್ನು ಪಠಿಸುವರು. ಅದಾದ ಮೇಲೆ ಹಿಡಿದ ಸೂತ್ರಧಾರದ ಸ್ವಲ್ಪ ಭಾಗವನ್ನು ಕತ್ತರಿಸಿ ವಧುವರರಿಗೆ ಕೊಡುವರು. ಆಗ ಒಬ್ಬರಿಗೊಬ್ಬರು ಕಂಕಣ ಕಟ್ಟಿ ಮೊಟ್ಟ ಮೊದಲಿಗೆ ಕೈಹಿಡಿಯುವರು. ಆಗ ಭಿಕ್ಖುಗಳು ಈ ಕೆಳಗಿನ ವಚನ ನುಡಿಯವರು.

**ಭವತು ಸಬ್ಬ ಮಂಗಳಂ, ರಕ್ಖನ್ತು ಸಬ್ಬದೇವತಾ !**
**ಸಬ್ಬ ಬುದ್ಧಾನು ಭಾವೇನ, ಸದಾ ಸೋತ್ಥಿ ಭವಂತುತೆ !!**
**ಸಬ್ಬ ಧಮ್ಮಾನು ಭಾವೇನ, ಸದಾ ಸೋತ್ಥಿ ಭವಂತುತೆ !**
**ಸಬ್ಬ ಸಂಘಾನು ಭಾವೇನ, ಸದಾ ಸೋತ್ಥಿ ಭವಂತುತೆ !!**

**ಅರ್ಥ :-** ನಿಮಗೆ ಎಲ್ಲಾ ಮಂಗಳಗಳುಂಟಾಗಲಿ, ಎಲ್ಲ ದೇವತೆಗಳೂ ನಿಮ್ಮನ್ನು ಕಾಪಾಡಲಿ, ಎಲ್ಲ ಬುದ್ಧರುಗಳ ಪ್ರಭಾವದಿಂದ ನಿಮಗೆ ಸದಾ ಕ್ಷೇಮವಾಗಲಿ, ಎಲ್ಲ ಧರ್ಮಗಳ ಪ್ರಭಾವದಿಂದ ನಿಮಗೆ ಸದಾ ಕ್ಷೇಮವಾಗಲಿ, ಎಲ್ಲ ಸಂಘಗಳ ಪ್ರಭಾವದಿಂದ ನಿಮಗೆ ಸದಾ ಕ್ಷೇಮವಾಗಲಿ.

**(3) ಮಂಗಳ ಕಾರ್ಯ :-** ಈ ಕಾರ್ಯವನ್ನು ಬೋದಾಚಾರ್ಯರು ನೆರವೇರಿಸುವರು, ಬುದ್ಧ ಪೂಜೆ ತ್ರಿಸರಣ ಗಮನ, ಪಂಚಶೀಲ ಗ್ರಹಣವಾದ ನಂತರ ಮದುಮಕ್ಕಳ ಹಸೆಮಣೆ ಮೇಲೆ ಜನಗಳಿಗೆ ಎದುರು ಮುಖಮಾಡಿ ಕೂಡಬೇಕು. ವಧುವು ಯಾವಾಗಲೂ ವರನ ಎಡಗಡೆ ಇರತಕ್ಕದ್ದು. ಬೋದಾಚಾರ್ಯರು ಸ್ವಲ್ಪ ಎತ್ತರದ ಮೇಲೆ ಮೂರ್ತಿಯ ಎಡಗಡೆ ಕುಳಿತಿರುವರು. ಬುದ್ಧ ಪ್ರತಿಮೆಯ ಮುಂದೆ ಇರಿಸಿದ ಕಲಶವನ್ನು ಕೆಳಗಿಳಿಸಿ ಮದುಮಕ್ಕಳ ಮುಂದುಗಡೆ ಮಧ್ಯಭಾಗದಲ್ಲಿ ಇರಿಸಬೇಕು. ಕನ್ಯಾದಾನ ಸಮಾರಂಭ ನಡೆಯುವುದು ವಧು-ವರರ ಪಿತ-ಪಾಲಕರು ಮಂಟಪದ ಮೇಲೆ ಬಂದು ಮದುಮಕ್ಕಳ ಜೋಡಿ ಕುಳಿತಿರುವರು. ನಾಲ್ಕು ಜನರು ಕಲಶಕ್ಕೆ ಬಲಗೈಯಿಂದ ಸ್ಪರ್ಶಿಸಬೇಕು. ಆಗ ಬೋದಾಚಾರ್ಯರು ವಧುವಿನ ಪಿತನಿಗೆ ಪ್ರತಿಜ್ಞಾ ವಿಧಿಯನ್ನು ನೀಡುವರು. ಅದನ್ನು ಅವರು ವರನ ತಂದೆಯನ್ನು ಉದ್ದೇಶಿಸಿ ಉಚ್ಚರಿಸಬೇಕು.

ನಾನು ಬುದ್ಧ, ಧಮ್ಮ, ಸಂಘವೆಂಬ ತ್ರಿರತ್ನದಲ್ಲಿ ಶ್ರದ್ಧೆ ನಿಷ್ಠೆಯುಳ್ಳವರಾಗಿ, ಗುರು, ಹಿರಿಯರ ಮತ್ತು ಇಲ್ಲಿ ನೆರೆದ ಸಮಸ್ತ ಬಂಧು-ಭಗಿನಿಯರ ಸಾಕ್ಷಿಯಾಗಿ ಇಂದಿನಿಂದ ನನ್ನ ಸುಪುತ್ರಿ "............" ಇವಳನ್ನು ನಿಮ್ಮ ಸುಪುತ್ರ "..............." ಇವನಿಗೆ ವಧುವನ್ನಾಗಿ ಅರ್ಪಿಸುತ್ತೇವೆ. ಇಂದಿನಿಂದ ಅವಳ ಯೋಗ-ಕ್ಷೇಮ ನಿಮ್ಮನ್ನು ಕೂಡಿದೆ. "ಈ ಪವಿತ್ರ ಸಂಬಂಧದಿಂದ ನಮ್ಮ ಎರಡೂ ಮನೆತನಗಳು ಸುಖಸಂಪತ್ತನ್ನು ಹೊಂದಿ ವಂಶ ವೃದ್ಧಿಯಾಗಲಿ."

ಆಗ ವರ ಪಿತನು ಬೋದಾಚಾರ್ಯರ ಆಜ್ಞೆಯಂತೆ ಈ ರೀತಿ ಪ್ರತಿಜ್ಞೆಯನ್ನು ಕೈಗೊಳ್ಳುವನು. "ನಾನು ಬುದ್ಧ, ಧಮ್ಮ, ಸಂಘವೆಂಬ ತ್ರಿರತ್ನದಲ್ಲಿ ಶ್ರದ್ಧೆ-ನಿಷ್ಠೆಯುಳ್ಳವನಾಗಿ ಗುರು-ಹಿರಿಯರ ಮತ್ತು ಇಲ್ಲಿ ನೆರೆದ ಸಮಸ್ತ ಬಂಧು-ಭಗಿನಿಯರ ಸಾಕ್ಷಿಯಾಗಿ ಇಂದಿನಿಂದ ಸುಪುತ್ರಿಯಾದ .........ಇವಳನ್ನು ನಮ್ಮ ಸುಪುತ್ರನಾದ .......... ಇವನಿಗೆ ವಧುವನ್ನಾಗಿ ಸ್ವೀಕರಿಸುತ್ತೇವೆ. ಈ ಪವಿತ್ರ ಸಂಬಂಧದಿಂದ ನಮ್ಮ ಎರಡೂ ಮನೆತನಗಳು ಸುಖ-ಸಂಪತ್ತನ್ನು ಹೊಂದಿ ವಂಶ ವೃದ್ಧಿಯಾಗಲಿ.

ಕೊನೆಗೆ ಎಲ್ಲರೂ ಸಾಧು ! ಸಾಧು ! ಸಾಧು ! ಎಂದು ನುಡಿಯಲಿ.

ಈರ್ವ ಪಿತ/ಪಾಲಕರು ಬುದ್ಧನಿಗೆ ನಮಸ್ಕರಿಸಿ ಮಂಟಪದ ಮಧ್ಯ ಒಂದೆಡೆ ಸರಿಯುವರು.

ನಂತರ ಬೋದಾಚಾರ್ಯರು ವಧು-ವರರಿಗೆ ತಮ್ಮ ತಮ್ಮ ಕರ್ತವ್ಯಗಳ ಬಗ್ಗೆ ಪ್ರತಿಜ್ಞೆ ವಿವರಿಸುವರು.

**ವರನ ಕರ್ತವ್ಯ :-** "ನಾನು ಬುದ್ಧ, ಧಮ್ಮ, ಸಂಘವೆಂಬ ತ್ರಿರತ್ನದಲ್ಲಿ ಶ್ರದ್ಧೆ-ವಿಶ್ವಾಸವುಳ್ಳವನಾಗಿ, ಗುರುಹಿರಿಯರ ಹಾಗೂ ನೆರೆದ ಸಮಸ್ತ ಬಂಧು-ಭಗಿನಿಯರ ಸಾಕ್ಷಿಯಾಗಿ ಪ್ರತಿಜ್ಞೆಗೈಯುವುದೇನೆಂದರೆ,

**(1) ಸನ್ಮಾನ ನಾಯ :-** ನಾನು ಕಾಯಾ ವಾಚಾ ಮನಸ್ಸಿನಿಂದ ನನ್ನ ಪತ್ನಿಯನ್ನು ಸನ್ಮಾನಿಸುವೆನು.

(2) **ಅವಮಾನಾಯಾಯ** :- ನಾನು ನನ್ನ ಪತ್ನಿಯ ಅವಮಾನವೆಂದೂ ಮಾಡುವುದಿಲ್ಲ.

(3) **ಅನತಿಚಾರಿಯಾಮ** :- ನಾನು ಮಿಥ್ಯಾಚಾರ, ಕಾಮ ವ್ಯಭಿಚಾರದಲ್ಲಿ ಎಂದೂ ತೊಡಗುವುದಿಲ್ಲ. ಸದಾ ನನ್ನ ಪತ್ನಿಯ ವಿಶ್ವಾಸಕ್ಕೆ ಪಾತ್ರನಾಗುವೆನು.

(4) **ಇಸವರಿಯ ವೊಸ್ಸಗೇನ** :- ನಾನು ಧನ, ದೌಲತ್ತ ಕೊಟ್ಟು ನನ್ನ ಪತ್ನಿಯನ್ನು ಸಂತುಷ್ಠಳಾಗಿ ಇರಿಸುವೆನು.

(5) **ಅಲಂಕಾರಾನುಪ್ಪದೇನೆನ** :- ನಾನು ನನ್ನ ಪತ್ನಿಗೆ ಅಭಿಲಾಷಾದಿಗಳನ್ನು ಇಟ್ಟು ಸದಾ ಪ್ರಸನ್ನಳಾಗಿರಿಸುವೆನು.

**ವಧುವಿನ ಕರ್ತವ್ಯ** :- ನಾನು ಬುದ್ಧ, ಧಮ್ಮ, ಸಂಘವೆಂಬ ತ್ರಿರತ್ನದಲ್ಲಿ ಶ್ರದ್ಧೆ, ವಿಶ್ವಾಸವುಳ್ಳವಳಾಗಿ ಗುರುಹಿರಿಯ ಮತ್ತು ಇಲ್ಲಿ ನೆರೆದ ಸಮಸ್ತ ಬಂಧುಭಗಿನಿಯರ ಸಾಕ್ಷಿಯಾಗಿ ಪ್ರತಿಜ್ಞೆಗೈಯುವುದೇನೆಂದರೆ -

(1) **ಸುಸಂಹಿತಾ ಕಮ್ಮಂತಾ** :- ನಾನು ಕಾಯಾ, ವಾಚಾ, ಮನಸ್ಸಿನಿಂದ ನನ್ನ ಗೃಹ ಕಾರ್ಯಗಳನ್ನು ಆಲಸ್ಯರಹಿತಳಾಗಿ ಅಚ್ಚುಕಟ್ಟುತನದಿಂದ ಮಾಡುವೆನು.

(2) **ಸಂಗಹಿತ ಪರಿಜನ** :- ನಾನು ನನ್ನ ಅತ್ತೆ-ಮಾವಂದಿರನ್ನು ಮತ್ತು ಪತಿಯ ಸರ್ವಸಂಬಂಧಿಕರನ್ನು ನನ್ನ ವ್ಯವಹಾರ ನಡತೆಯಿಂದ ಸದಾ ಸಂತೋಷದಲ್ಲಿ ಇರಿಸುವೆನು. ಸೇವಕರನ್ನು ವಶದಲ್ಲಿ ಇಟ್ಟುಕೊಳ್ಳುವೆನು.

(3) **ಅನತಿ-ಚಾರಿಣಿ** :- ನಾನು ಕಾಯಾ, ವಾಚಾ, ಮನಸ್ಸಿನಿಂದ ಮಿಥ್ಯಾಚಾರ, ಕಾಮ ವ್ಯಭಿಚಾರದಿಂದ ದೂರವಿದ್ದು ಸದಾ ನನ್ನ ಪತಿಯ ವಿಶ್ವಾಸಕ್ಕೆ ಪಾತ್ರಳಾಗುವೆನು.

(4) **ಸಂಬತಂ ಅನುರಕ್ಷಂ** :- ನಾನು ನನ್ನ ಮನೆಯ ಸಂಪತ್ತನ್ನು ಸುರಕ್ಷಿತವಾಗಿಡಲು ಸದಾ ಯತ್ನಿಸುವೆನು.

(5) **ದಕ್ಖಾಚ-ಆನಲಸಾಚ ಸಬ್ಬಕಿಚ್ಚೇಸು** :- ನನ್ನ ಮನೆಯ ಎಲ್ಲ

ಚಿಕ್ಕ-ದೊಡ್ಡ ಕಾರ್ಯಗಳನ್ನು ದಕ್ಷತೆಯಿಂದ ಆಲಸ್ಯರಹಿತಳಾಗಿ ನಿರ್ವಹಿಸುವೆನು.

ಕರ್ತವ್ಯವಿಧಿಯ ನಂತರ ವಧು-ವರರು ಎದ್ದು ಎದುರು ಬದುರು ನಿಲ್ಲುವರು. ಕಲಶವು ಅವರಿಬ್ಬರ ಮಧ್ಯದಲ್ಲಿರಬೇಕು. ವಧು ತನ್ನ ಎಡಗೈ ಮುಂದೆ ಮಾಡುವಳು, ವರನು ಅವಳ ಕೈ ಹಿಡಿದು ಪಾಣಿಗ್ರಹಣ ಮಾಡಿ ಹೊನ್ನುಂಗುರ ತೊಡಿಸುವನು. ನಂತರ ವಧುವು ವರನ ಬಲಕ್ಕೆ ಹಿಡಿದು ಹೊನ್ನುಂಗುರ ತೊಡಿಸುವಳು. ಆ ಸಮಯದಲ್ಲಿ ಬೋಧಾಚಾರ್ಯರು ಮಂಗಳಸೂತ್ರ ಸರವನ್ನು ಎಲ್ಲರಿಗೂ ತೋರಿಸಿ ವರನ ಕೈಯಲ್ಲಿ ಕೊಡುವರು. ವರನು ವಧುವಿನ ಕೊರಳಿಗೆ ಮಂಗಳ ಸೂತ್ರ ಕಟ್ಟುವನು. ವಧುವು ವರನ ಕೊರಳಿಗೆ ಹೂವಿನ ಹಾರ ಹಾಕುವಳು. ಕೈಯಲ್ಲಿ ಒಬ್ಬರಿಗೊಬ್ಬರು ಪುಷ್ಪ ಗುಚ್ಛಗಳನ್ನು ಕೊಡುವರು. ಇದೇ ಸಮಯದಲ್ಲಿ ಸಕಲರೂ ವಧು-ವರರಿಗೆ ಪುಷ್ಪಗಳನ್ನು ಅಕ್ಕಿಕಾಳುಗಳನ್ನು ಹಾಕಿ ಕಲ್ಯಾಣವಾಗಲೆಂದು ಆಶೀರ್ವದಿಸುವರು. ಮಂಗಲವಾದ್ಯಗಳು ಮದುಮಕ್ಕಳು ಎದ್ದು ನಿಂತಾಗಿನಿಂದಲೂ ಮೊಳಗುತ್ತಿರಬೇಕು. ಸಕಲರೂ ಸಾಧು ! ಸಾಧು ! ಸಾಧುಯೆಂದು ಅನ್ನುವರು.

ವಧು-ವರರು ಬುದ್ಧನಿಗೆ, ಭಿಕ್ಖುಗಳಿಗೆ, ಬೋಧಾಚಾರ್ಯರಿಗೆ ತಮ್ಮ ಮಾತಾ-ಪಿತರಿಗೆ ಕ್ರಮವಾಗಿ ''ನಮಸ್ಕಾರ ಮಾಡಿ ಆಶೀರ್ವಾದ ಪಡೆಯಬೇಕು. ಭಿಕ್ಖುಗಳಿಗೆ ಯತೇಚ್ಛ ದಾನವನ್ನು ವಧುವರರು ಕೊಡಬೇಕು. ಆ ಭಿಕ್ಖುಗಳು ಈ ವಚನ ನುಡಿಯುವರು.

**ಸಬ್ಬ ಪಾಪಸ್ಸ ಅಕರಣಂ, ಕುಸಲಸ್ಸ ಉಪ ಸಂಪದಾ !**
**ಸಚಿತ್ತ ಪರಿಯೋದಪನಂ, ಏತಂ ಬುದ್ಧಾನು ಸಾಸನಂ !!**
**ಧಮ್ಮಂ ಚರೆ ಸುಚರಿತಂ, ನತಂ ದುಚರಿತಂ ಚರೆ!**
**ಧಮ್ಮಚಾರಿ ಸುಖಂ ಸೇತಿ ಅಸ್ಮಿಲೋಕೆ ಮರವ ಹಿ ಚ!!**

**ಅರ್ಥ** :- ಸರ್ವ ಪಾಪಕಾರ್ಯ ಮಾಡಿದಿರುವುದು, ಕುಶಲವಾದುದನ್ನೆ ಸಂಪಾದಿಸುವುದು, ಚಿತ್ತ ಪರಿಶುದ್ಧ ಹೊಂದುವುದು. ಇದೇ ಬುದ್ಧ ಶಾಸನ.

ಸುಚರಿತ್ರೆಯನ್ನು ಹೊಂದಿ ಧಮ್ಮದಲ್ಲಿ ನಡೆಯಿರಿ. ದುಷ್ಟ ಚರಿತ್ರೆಯುಳ್ಳವರಾಗಿ ನಡೆಯಬೇಡಿರಿ. ಕಾರಣ ಧಮ್ಮಾಚಾರಿಯಾದವರು ಸುಖವನ್ನೇ ಪಡೆಯುತ್ತರೆ. ಅದರಿಂದ ಲೋಕಕ್ಕೂ ಹಿತವಾಗುತ್ತದೆ.

ಭಿಕ್ಷು ಅಥವಾ ಬೋಧಾಚಾರ್ಯರು ನವ ದಂಪತಿಗಳಿಗೆ ಆಶೀರ್ವದಿಸಿ ನಿಧಾನವಾಗಿ ಹೊರಡುವರು. ಅವರಿಗೆ ಸಮಯತಕ್ಕದಾದರೆ ಭೋಜನ ದಾನ ಮಾಡಬಹುದು.

ನಂತರ ಪತಿ-ಪತ್ನಿಯರನ್ನು ಕೂಡಿಸಿ ಸ್ಥಳಿಕ ರೂಢಿಗಳಿದ್ದರೆ, ಹಾಲನ್ನು ಅವರ ಕೈಯಲ್ಲಿ ಹೊಯ್ದು ಯುವಕ-ಯುವತಿಯರು ಅವರೊಡನೆ ಮೋಜು ಮಾಡುವರು, ಅನೇಕರು ಕಾಣಿಕೆ ಕೊಡುವರು. ಸಕಲ ಬಂಧು-ಭಗಿನಿಯರಿಗೆ, ಮಿತ್ರರಿಗೆ ಭೋಜನೋಪಚಾರಗಳನ್ನು ಮಾಡಿಸಬೇಕು.

ಸಕಲ ಭೋಜನವಾದ ಮೇಲೆ ಇನ್ನುಳಿದ ಜನರ ಸಮಕ್ಷಮ ನವ ದಂಪತಿಗಳ ಮಾತಾ-ಪಿತರಿಗೆ ಪ್ರಿಯ ಬಂಧು-ಭಗನಿಯರಿಗೆ ವೇಷ ಭೂಷಣಾದಿಗಳನ್ನು ಕಾಣಿಕೆಯಾಗಿ ಕೊಟ್ಟು ಸನ್ಮಾನಿಸಬೇಕು.

ಸಾಯಂಕಾಲ ನವ ದಂಪತಿಗಳು ಇತರ ಬಂಧು-ಮಿತ್ರಿಗೆ ಸ್ವಾಗತ ಬಯಸಿ ಅವರಿತ್ತ ಕಾಣಿಕೆಗಳನ್ನು ಸ್ವೀಕರಿಸಬಹುದು. ಉಪಹಾರ ಮೆಲಿಯುತ್ತ ವಿನೋದಾವಳಿಯಲ್ಲಿ ಸುಮಾರು ರಾತ್ರಿಯವರೆಗೆ ನಲಿಯಬಹುದು.

**ಗೃಹಪ್ರವೇಶ :-** ವಿವಾಹ ಸಂಪನ್ನವಾದಂತೇ ಸತಿಯನ್ನು ಪತಿಗೃಹಕ್ಕೆ ಕರೆತರಬೇಕು. ಸಖಿಯರು ಈರ್ವರಿಗೂ ಮಂಗಳಾರತಿ ಬೆಳಗುವರು.

ನಮೋ ಬುದ್ಧಾಯ ! ನಮೋ ಧಮ್ಮಾಯ! ನಮೋ ಸಂಘಾಯ ಎನ್ನುತ್ತ ಸತಿಯು ತನ್ನ ಪತಿಯ ಗೃಹ ಪ್ರವೇಶ ಮಾಡಬೇಕು. ಅಂದಿನಿಂದ ಸತಿ-ಪತಿಯರ ಸಹಬಾಳ್ವೆ ಸಾಗಬೇಕು. ಯಾವಾಗಲೂ ಪ್ರಸನ್ನ ಚಿತ್ತದವರಾಗಿರಬೇಕು. ಸುಖ ದುಃಖಗಳು ಯಾವಾಗಲೂ ಅಸ್ಥಿರವಾದವುಗಳೆಂದು ಕುಟುಂಬ ಕಲ್ಯಾಣದತ್ತ ಅವಲೋಕಿಸುತ್ತಿರಬೇಕು. ಬೋಧಿಸತ್ವರಂತ ಮಕ್ಕಳನ್ನು ಹೆರಬೇಕು.

'ಚಿಕ್ಕ ಸಂಸಾರ, ಚೊಕ್ಕ ಸಂಸಾರ'

ಇದನ್ನು ನೆನೆಯುತ್ತ ಕುಟುಂಬ ಕಲ್ಯಾಣದ ವಿಧಿಯನ್ನು ಅನುಸರಿಸುತ್ತಿರಬೇಕು, ಅಂದರೆ ವಿವಾಹಗಳು ಸುಖ ತರುತ್ತವೆ.

**೧೦. ಉಪಸಂಪದ :-** ಈ ಸಂಸ್ಕಾರವು ಸರ್ವಶ್ರೇಷ್ಠವಾದುದು, ಪಬ್ಬಜ್ಜ ಸಾಮಣೇರ ಸಂಸ್ಕಾರದಿಂದ ಕುಮಾರನಿಗೆ ಎರಡು ಮಾರ್ಗಗಳುಂಟು. ಪಬಜ್ಜದಿಂದ ಉಪಸಂಪದ ಪಡೆದುಕೊಂಡು ಪವಿತ್ರವಾದ ಭಿಕ್ಖು ಜೀವನ ನಡೆಸುವುದು, ಅಥವಾ ಪಬಜ್ಜದಿಂದ ಮರಳಿ ಒಬ್ಬ ಸ್ತ್ರೀಯೊಂದಿಗೆ ವಿವಾಹವಾಗಿ ಪ್ರಪಂಚ ಜೀವನ ನಡೆಸುವುದು, ಈ ಎರಡರಲ್ಲಿ ಒಂದನ್ನು ಆರಿಸಿಕೊಳ್ಳಲು ವ್ಯಕ್ತಿ ಸ್ವಾತಂತ್ರನಾಗಿರುತ್ತಾನೆ. ಪಬಜ್ಜ ಅಥವಾ ಸಾಮಣೇರ ಜೀವನವನ್ನು ಶಖ್ಯನುಸಾರ ಮಾಡಿ ಪ್ರಪಂಚಕ್ಕೆ ಮರಳಬಹುದು. ಅದೇ ರೀತಿ ದ್ಾಂಪತ್ಯ ಜೀವನ ತೊರೆದು ಸಾಮಣೇರ ಜೀವನ ಕೆಲದಿನ ನಡೆಯಿಸಿ ಮತ್ತೆ ದಾಂಪತ್ಯ ಜೀವನಕ್ಕೆ ಮರಳಬಹುದು. ಆದರೆ ಒಮ್ಮೆ ಉಪಸಂಪದ ಪಡೆದ ವ್ಯಕ್ತಿ ಭಿಕ್ಖೂ ಜೀವನವನ್ನೇ ಅರಸುತ್ತಲೇ ಇರಬೇಕು. ಈ ಜೀವನ ದೃಢ ನಿಶ್ಚಯದಿಂದ ಕೈಕೊಳ್ಳಬೇಕು. ಆದ್ದರಿಂದ ಉಪಸಂಪದ ಸಂಸ್ಕಾರವನ್ನು 20 ವರ್ಷ ತುಂಬಿದ ನಂತರವೇ ನೆರವೇರಿಸುವರು.

ಭಿಕ್ಖು ಜೀವನ ಬಹು ಕಠಿಣವಾದುದು, ಸಕಲ ತೃಷ್ಣೆಗಳಿಂದ ಮುಕ್ತನಾಗಿರುವುದು, ಬುದ್ಧತ್ವದೆಡೆ ಸಾಗುತ್ತಿರುವುದು, ದಾನ, ಶೀಲ, ಅಧಿಟ್ಠಾಣ, ಸಚ್ಚ, ವೀರ್ಯ, ನೆಕ್ಖಮ್ಮ, ಖಂತಿ, ಮೈತ್ರಿ, ಪ್ರಜ್ಞ, ಉಪೇಖೆ. ಈ ಹತ್ತು ಪಾರಮಿಗಳನ್ನು ಪರಿಪೂರ್ಣಗೊಳಿಸುವುದಕ್ಕೆ ಭಿಕ್ಖೂ ಜೀವನ ಸಹಾಯವಾಗುತ್ತದೆ. ತ್ರಿಪಿಟಕದ 227 ವಿನಯ ನಿಯಮಗಳನ್ನು ಪರಿಪಾಲಿಸುವುದರಿಂದ ಸಾಮಾನ್ಯ ಮಾನವನಿಗಿಂತ ಎತ್ತರದ ಜೀವನ ಅವರದು ಎಂತಲೇ ರಾಜ ಮಹಾರಾಜರುಗಳು, ತಂದೆ-ತಾಯಿಗಳು, ಹಿರಿಯರು-ಕಿರಿಯರು, ಭಿಕ್ಖುವಿಗೆ ನಮಸ್ಕರಿಸಿ ಗೌರವಿಸುವರು.

ಈ ಉಸಂಪದ ದೀಕ್ಷೆಯನ್ನು ಕಮ್ಮಿಯೆಂದರೆ ಐದೂ ಜನ ಹಿರಿಯ ಭಿಕ್ಷುಗಳು ಕೂಡಿ ದಯಪಾಲಿಸುವರು. ಅಂದಿನಿಂದ ಧರ್ಮಪೀಠ

ಅಲಂಕರಿಸುವ, ಧಮ್ಮ ಉಪದೇಶ ನೀಡುವ ಜನಗಳನ್ನು ಬೌದ್ಧ ಧರ್ಮಕ್ಕೆ ಸೇರಿಸುವ ಅಧಿಕಾರ ಪ್ರಾಪ್ತವಾಗುತ್ತದೆ. ಈ ಉಪಸಂಪದ ಸಂಸ್ಕಾರವನ್ನು ಬೌದ್ಧರ ಪವಿತ್ರ ಸ್ಥಳಗಳಾದ ಬುದ್ಧಗಯೆ, ಸಾರನಾಥ, ಕುಶಿನಗರ, ಲುಂಬಿಣಿ, ''ಸೀಮಾ'' ಇದ್ದಂಥ ವಿಹಾರದಲ್ಲಿ ಅಥವಾ ನದಿಯ ಮಧ್ಯದಲ್ಲಿ ನಾವೆಯ ಮೇಲೆ ಕುಳಿತುಕೊಂಡು ನೆರವೇರಿಸುವರು. ಈ ಸಂಸ್ಕಾರದ ನಿಯಮವು ಸಹ ಪಬಜ್ಜ ಸಂಸ್ಕಾರದಂತೆ ಇದ್ದು ಇನ್ನೂ ಅನೇಕ ನಿಯಮಗಳನ್ನು, ಪ್ರತಿಜ್ಞಾ ವಿಧಿಗಳನ್ನು ಸಿಕ್ಖಾಪದಗಳನ್ನು ಭಿಕ್ಖುವಿಗೆ ದಯಪಾಲಿಸುವರು. ಅಂದು ಸಂಘದಾನ ಏರ್ಪಡಿಸುವರು.

ಹೆಣ್ಣುಮಕ್ಕಳು ಸಹ ಭಿಕ್ಖುಣಿಯಾಗಬಹುದು. ಆದರೆ ಭಾರತದಲ್ಲಿ ಭಿಕ್ಖುಣಿಯರಿಗೆ ಸಂಘಾರಾಮಗಳು ಇರುವುದಿಲ್ಲ. ಅವರು ಅಲೆದಾಟದಲ್ಲಿ ಸುರಕ್ಷಿತರವಾಗಿರುವುದಿಲ್ಲ. ಬುದ್ಧನ ಕಾಲದಲ್ಲಿ ಭಿಕ್ಖುಣಿ ಸಂಘವು ತಲೆ ಎತ್ತಿ ಮುಂದೆ ಮಾಯವಾಯಿತು. ಅನೇಕ ಮಹಿಳೆಯರು ಮುಂದೆ ಬಂದು ತರಬೇತಿ ಪಡೆದು ಈ ಸಂಸ್ಕೃತಿಯನ್ನು ಬೆಳೆಸಬೇಕಾಗಿದೆ.

**೧೧. ದಾಹಕಮ್ಮ :-** ಇದು ವ್ಯಕ್ತಿಗೆ ಅಂತಿಮ ಸಂಸ್ಕಾರ. ಮನುಷ್ಯರು ಸಾವನ್ನು ಸಮೀಪಿಸುತ್ತ ಕೊನೆ ಘಳಿಗೆಯಲ್ಲಿದ್ದಾಗ ಪರಿತ್ರಾಣ ಸೂತ್ರ ಏರ್ಪಡಿಸಬೇಕು. ಅದನ್ನು ಕೇಳುತ್ತ ಮರಣವನ್ನಪ್ಪಿದರೆ ಅದು ಶುಭವೆಂದು ತಿಳಿಯುವರು.

ಜೀವಂತ ಮನುಷ್ಯನೆಂದರೆ ನಾಮ ಮತ್ತು ರೂಪ ಇವುಗಳ ಸಂಯೋಜನೆ. ನಾಮವೆಂದರೆ ಮನಸ್ಸು, ರೂಪವೆಂದರೆ ಶರೀರ, ಒಂದರಿಂದ ಇನ್ನೊಂದು ವಿಂಗಡನೆ ಆದೊಡನೆ ಜೀವ ಹೋಗುತ್ತದೆ. ಅಥವಾ ಮರಣವಾಗುತ್ತದೆ. ನಾಮವು ಮುಖ್ಯವಾಗಿ ನಾಲ್ಕು ಭಾಗಗಳಿಂದ ಕೂಡಿದೆ. ವೇದನ, ಸಂಜ್ಞಾ, ಸಂಖಾರ ಮತ್ತು ವಿಜ್ಞಾನ. ಅದೇ ರೀತಿ ರೂಪವು ಸಹ ನಾಲ್ಕು ಗುಣಗಳಿಂದ ಕೂಡಿದೆ. ಪೃಥ್ವಿ, ಅಪೊ, ತೋಜೋ, ವಾಯು, ಕಾರಣ ಕಾರ್ಯದ ನಿಯಮದಂತೆ ಪ್ರತಿಯೊಂದು ಜೀವಿ ಮತ್ತೆ ಮಾರ್ಪಾಡು ಆಗಲೇಬೇಕು.

ಸಂಯೋಜನೆ ಆದದ್ದಿ ವಿಂಗಡನೆ ಆಗಲೇಬೇಕು. ಅದೇ ರೀತಿ

ಎಂಗಡನೆ ಅದದ್ದು ಸಂಯೋಜನೆ ಆಗಲೇಬೇಕು. ಇದೆಲ್ಲ ಕರ್ತೃವಿನಿಂದ ಆಗುವುದೆಂದಾಗಲಿ ಅಥವಾ ಕಾರಣ-ಕಾರ್ಯದ ನಿಯಮದಂತೆ ಆಗುವುದೆಂದಾಗಲಿ ಎರಡೂ ಒಂದೇ ಅರ್ಥ. ಈ ರೀತಿ 'ಪರಿವರ್ತಿತ ಜೀವನ' ಮತ್ತು ಸತ್ತಮೇಲೆ 'ಜೀವನ ಪರಿವರ್ತನ' ಸದಾ ಸಾಗುತ್ತಲೇ ಇದೆ. ಇದಕ್ಕೆ ಪುನರ್ಜನ್ಮ ಅನ್ನುವುದಕ್ಕಿಂತಲೂ 'ಪುನರ್ಭವ' ಎಂದು ಪಾಲಿಯಲ್ಲಿ ಹೇಳಲ್ಪಟ್ಟಿದೆ. ಈ ಸತ್ಯವನ್ನು ಅರಿತುಕೊಂಡು ಮೃತರಾದವರ ಬಗ್ಗೆ ದುಃಖಪಡುವುದು, ಅಳುವುದೂ ಉಪಯೋಗವಿಲ್ಲ. ಆದ್ದರಿಂದ ಮನಸ್ಸನ್ನು ಸಮತೋಲನದಲ್ಲಿ ಇರಿಸಬೇಕು.

ವ್ಯಕ್ತಿಯು ಮೃತನಾದ ಮೇಲೆ ಸಾಧ್ಯವಾದಷ್ಟು ಬೇಗನೆ ಮೃತ ದೇಹವನ್ನು ಸುಗಂಧ ದ್ರವ್ಯಗಳಿಂದೊಡಗೂಡಿದ ನೀರಿನಿಂದ ಚೆನ್ನಾಗಿ ತೊಳೆದು ಹೊಸ ಬಿಳಿ ಬಟ್ಟೆಯನ್ನು ಹೊದಿಸಬೇಕು. ಮೃತ ಶರೀರವನ್ನು ಸ್ಥಳಿಕ ರೂಢಿಯಂತೆ ಗೋಡೆಗೆ ಪದ್ಮಾಸನದಲ್ಲಿ ಕೂಡಿಸಬಹುದು ಅಥವಾ ಮಂಚದ ಮೇಲೆ ನಾಲ್ಕನೆ ಭಾಗವನ್ನು ತುಸು ಎತ್ತರ ಮಾಡಿ ಮಲಗಿಸಬಹುದು. ಸುವಾಸಿತ, ಹೂ, ಸುಗಂಧ ದ್ರವ್ಯಗಳಿಂದ ಶವವನ್ನು ಶುಚಿತ್ವವಾಗಿಡಬೇಕು. ಭಿಕ್ಖು ಬೌದ್ಧಾಚಾರ್ಯರನ್ನು ಆಮಂತ್ರಿಸಬೇಕು. ಆಗ ಅಲ್ಲಿ ನೆರೆದವರೆಲ್ಲರೂ ತ್ರಿಸರಣ ಗಮನ, ಪಂಚಶೀಲ ಗ್ರಹಣ ಪಡೆಯಬೇಕು. ಭಿಕ್ಖುಗಳು ಈ ವಚನದಿಂದ ಧಮ್ಮೋಪದೇಶ ನೀಡುವರು.

**ಅನಿಚ್ಚಾವತ ಸಂಖಾರಾ ಉಪ್ಪಾದವಯ ಧಮ್ಮಿನೋ**
**ಉಪ್ಪಜ್ಜಿತ್ವಾ ನಿರುಂಜ್ಝಂತೆ ತೇಸಂವೂಪಸಮೊ ಸುಖೊ!**
**ಅದ್ಧುವಂ ಜೀವಿತಂ, ಧುವಂ ಮರಣಂ ಅವಸ್ಯಂ ಮಯಾ!**
**ಮರಿತಬ್ಬಂ ಮರಣಂ ಪಿರಯೋಸಾನಂ ಎಂ ಜೀವಿತಂ !**
**ಜೀವಿತ ಮೇವ ಅನಿಯತಂ, ಮರಣಂ ನಿಯತಂ !**
**ಮರಣಂ ನಿಯತಂ, ಮರಣಂ ನಿಯತಂ!!**

**ಅರ್ಥ** :- ಆಹಾ! ಸಂಸ್ಕಾರಗಳು ಅನಿತ್ಯವಾದವು ಹುಟ್ಟು ಮತ್ತು ನಾಶದ ಸ್ವಭಾವವು ಹುಟ್ಟಿಕೊಂಡು ಅಡಗಿ ಹೋಗುತ್ತವೆ. ಅವುಗಳ ಉಪಶನವೇ ಸುಖ.

ಜೀವನ ಸ್ಥಿರವಲ್ಲ, ಮರಣ ಸ್ಥಿರವಾದುದು. ನಾನು ಮರಣ ಹೊಂದಿಯೇ ತೀರುತ್ತೇನೆ. ನನ್ನ ಬಾಳು ಸಾವಿನಲ್ಲಿ ಕೊನೆಗಾಣುತ್ತದೆ. ಜೀವಿತ ನಿಶ್ಚಿತವಾದುದಲ್ಲ. ಮರಣ ನಿಯತವಾದುದು. ಮರಣ ನಿಯತವಾದುದು. ಮರಣ ನಿಯತವಾದುದು!

ಆಗ ಮೃತರ ಮನೆಯವರು ಭಿಕ್ಖುಗಳಿಗೆ ಒಂದು ಶ್ವೇತ ವಸ್ತ್ರದಾನ ನೀಡುವರು. ಇದಕ್ಕೆ ಮೃತರ ವಸ್ತ್ರವೆಂದು ಅನ್ನವರು. ಸಂಬಂಧಿತರನೇಕರು ಮೃತನ ಶರೀರದ ಮೇಲೆ ಒಂದು ತಟ್ಟೆಯನ್ನು ಎತ್ತಿ ಹಿಡಿದು ಒಂದು ಲೋಟ ನೀರನ್ನು ಮೆಲ್ಲಗೆ ಸುರಿಯುತ್ತಿರಬೇಕು. ಆಗ ಎಲ್ಲರೂ ಈ ಕೆಳಗಿನ ಶ್ಲೋಕವನ್ನು ನುಡಿಯವರು.

**ಇದಂ ಮೆ ಞಾತಿನಂ ಹೋತು, ಸುಖಿತಾ ಹೊಂತು ಞಾತಯೊ!**

**ಅರ್ಥ :-** ಈ ಪುಣ್ಯ ಕರ್ಮವು ನಮ್ಮ ಬಂಧುಗಲಿಗೆ ಉಂಟಾಗಲಿ, ನಮ್ಮ ಬಂಧುಗಳೆಲ್ಲರೂ ಸುಖಿಯಾಗಲಿ ನಂತರ ತಟ್ಟೆಯಲ್ಲಿರುವ ನೀರನ್ನು ಮನೆಯ ಮಾಳಿಗೆಯ ಮೇಲೆ ಚೆಲ್ಲಬೇಕು.

ನಂತರ ಭಿಕ್ಖುಗಳು ಕೆಳಗಿನ ವಚನ ನುಡಿಯವರು.

**ಎನ್ನಮೆ ಉದಕಂ ವಟ್ಟಂ ಯಥಾ ನಿನ್ನಂ ಪವತತಿ!**
**ಏವಮೇವ ಇತೊ ದಿನ್ನೆ ಪೇತಾನಂ ಉಪಕಪ್ಪತು!!**
**ಚಥಾವಾರವಹಾ ಪೂರಾ ಪರಿಪೂರೆಂತಿ ಸಾಗರಂ!**
**ಏವ ಮೇವ ಇತೊ ದಿನ್ನೆ ಪೇತಾನಂ ಉಪಕಮ್ಮತಿ!!**

**ಅರ್ಥ :-** ಯಾವ ತರಹ ವೇಲಿನಿಂದ ಬಿದ್ದ ನೀರು ಹರಿದುಹೋಗುತ್ತದೆಯೋ ಅದೇ ತರಹ ಇಲ್ಲಿ ಇತ್ತ ಪುಣ್ಯವು ಮೃತರಿಗೆ ಪ್ರಾಪ್ತವಾಗುತ್ತದೆ. ಯಾವ ತರಹ ತುಂಬಿದ ನದಿ ಸಮುದ್ರವನ್ನು ತುಂಬುತ್ತಿದೆಯೋ, ಅದೇ ತರಹ ಇಲ್ಲಿ ಇತ್ತ ಪುಣ್ಯವು ಲಭಿಸುತ್ತದೆ.

ಹೀಗೆ ಧರ್ಮೋಪದೇಶದ ನಂತರ ಶವವನ್ನು ಸ್ಮಶಾನದತ್ತ ಸಾಗಿಸಬೇಕು. ದಾರಿಯುದ್ದಕ್ಕೂ ಎಲ್ಲರೂ 'ನಮೋ ಬುದ್ಧಾಯ! ನಮೋ ಧಮ್ಮಾಯ! ನಮೋ ಸಂಘಾಯ' ಎಂದು ಮೃದು ಸ್ವರದಲ್ಲಿ ಪಠಿಸುತ್ತ

ನಡೆಯುತ್ತಿರಬೇಕು. ಸ್ಮಶಾನದಲ್ಲಿ ಸಿದ್ದಪಡಿಸಿದ ಚಿತೆಯ ಮೇಲೆ ಇಟ್ಟು, ಹೂ, ಸುಗಂಧ ದ್ರವ್ಯಗಳನ್ನು ಸುರಿಯಬೇಕು. ಸುತ್ತಲೂ ನಿಂತುಕೊಂಡು ಎಲ್ಲರೂ ತ್ರಿಸರಣಗಮನ, ಪಂಚಶೀಲ ಗ್ರಹಣ ಪಡೆಯಬೇಕು. ಹೀಗೆ ಪಠಿಸುತ್ತ ಮೂರು ಸಲ ಚಿತೆಯ ಸುತ್ತ ಪ್ರದಕ್ಷಿಣೆ ಹಾಕಬೇಕು. ತುಪ್ಪ, ಸೀಮೆಎಣ್ಣೆ, ಸುರಿಯುತ್ತ ಸಂಬಂಧಿಕರಿಂದ ಚಿತೆಗೆ ಬೆಂಕಿ ಇಡಬೇಕು. ಇಂತರ ಎಲ್ಲರೂ ಮನೆಗೆ ಮರಳಿ ಸ್ನಾನಾದಿಗಳನ್ನು ಮಾಡಿ ಶುಚಿತ್ವ ಪಡೆಯಬೇಕು. ಮರು ದಿನ ಶವ ದಹನವಾದ ಭಸ್ಮವನ್ನು ಒಂದುಗೂಡಿಸಿ ಅಸ್ಥಿಯನ್ನು ಒಂದು ಹೊಸ ಮಡಿಕೆಯಲ್ಲಿರಿಸಿ ನದಿಗೆ ಬಿಡಬೇಕು. ಕೆಲವೆಡೆ ಅಸ್ಥಿಯನ್ನಿರಿಸಿ ಸ್ತೂಪ ನಿರ್ಮಿಸುತ್ತಾರೆ. ಚಿತೆಯನ್ನು ಮಾಡಲು ಸಾಮರ್ಥ್ಯ ಇಲ್ಲದವರು ಶವವನ್ನು ಭೂಮಿಯಲ್ಲಿ ಹುಗಿಯುವರು. ನಗರಗಳಲ್ಲಿಯ ವಿದ್ಯುತ್ ಶವಾಗಾರದಲ್ಲಿ ಇದೇ ಪದ್ಧತಿ ಅನುಸರಿಸಬಹುದು.

**೧೨. ಮತಕ ಭತ್ತ :-** ಮೃತನ ಪುಣ್ಯಾನುಮೋದನೆ ಸಂಘದಾನ ''ಮತಕ ಭಿತ್ತ'' ಶ್ರಾದ್ಧವನ್ನು ಏರ್ಪಡಿಸಬೇಕು. ಮೃತ್ಯು ಆದ ಏಳನೆ, ಹತ್ತನೆ ಅಥವಾ ಹನ್ನೆರಡನೆ ದಿನ ಮನೆಯನ್ನು ತೊಳೆದು-ಬಳಿದು ಶುಚಿಗೊಳಿಸಬೇಕು. ಭಿಕ್ಖು ಸಂಘವನ್ನು ಆಮಂತ್ರಿಸಬೇಕು. ತ್ರಿಸರಣ ಗಮನ, ಪಂಚಶೀಲ ಗ್ರಹಣ ಮಾಡಿ, ಈ ರೀತಿ ಉಪಾಸಕರು ನುಡಿಯಬೇಕು.

**ಕಾಲಕತಾನಂ ಅಮಾಹಕಂ ಞಾತಿನಂ ಪುಞತ್ಥಾಯ ಇಮಂ ದಾನಂ ।**
**ಮಹಾ ಸಂಘಸ್ಸ ನಾಮೇನ ಭಿಕ್ಖು ಸಂಘಸ್ಸ ದೇಮ ॥**

**ಅರ್ಥ :-** ತೀರಿ ಹೋದ ನಮ್ಮ ಬಂಧುವಿನ ಪುಣ್ಯಾನುಮೋದನಕ್ಕಾಗಿ ಈ ಭಿಕ್ಷೆಯನ್ನು ಮಹಾಸಂಘದ ಹೆಸರಿನಲ್ಲಿ ಭಿಕ್ಖು ಸಂಘಕ್ಕೆ ನೀಡುತ್ತೇವೆ ಎನ್ನುತ್ತ ಭಿಕ್ಖು ಸಂಘಕ್ಕೆ ಒಂದು ಬಿಳಿ ಬಟ್ಟೆ, ದಿನ ಬಳಕೆಗೆ ಅವಶ್ಯಕವಿದ್ದ ವಸ್ತುಗಳನ್ನು ಕೊಟ್ಟು ಭಿಕ್ಖುಗಳಿಗೆ ಭೋಜನ ನೀಡಬೇಕು. ನಂತರ ಬಂಧುಗಳು ಒಂದು ಲೋಟ ನೀರನ್ನು ತಟ್ಟೆಯಲ್ಲಿ ನಿಧಾನವಾಗಿ ಸುರಿಯುತ್ತ,

**ಇದಂ ಮೆ ಞಾತಿನಂ ಹೊತು, ಸುಖಿತಾ ಹೊಂತು ಞಾತಯೊ!**

ತದನಂತರ ಭಿಕ್ಕುಗಳು ಪರಿತ್ರಾಣ ಪಾಠ ಮಾಡುವರು. ಅವರು ಹೊರಟುಹೋಗುವಾಗ ಈ ಆಶೀರ್ವಚನ ನುಡಿಯುವರು.

**ಅಭಿವಾದ ಶೀಲಿಸ್ಸ ನಿಚ್ಚಂ ವುಢ್ಢಾಪಚಾಯಿನೊ!**

**ಚತ್ತಾರೊ ಧಮ್ಮಾ ಪಡ್ಡಂತತಿ-ಆಯು, ವಣ್ಣಂ, ಸುಖಂ ಬಲಂ!!**

**ಅರ್ಥ :-** ಯಾರು ಅಭಿವಾದನ ಶೀಲಗಳನ್ನು ಆಚರಿಸುತ್ತಾರೋ, ಯಾರು ವಾವಾಗಲೂ ವೃದ್ಧರ ಸೇವೆಯನ್ನು ಮಾಡುತ್ತಾರೋ ಅವರಿಗೆ ನಾಲ್ಕು ವರಗಳು ಹೆಚ್ಚಿಸುತ್ತವೆ. ಆಯು, ವರ್ಣ, ಸುಖ ಮತ್ತು ಬಲ.

ಹೀಗೆ ಬೌದ್ಧರಿಗಾಗಿ ಹನ್ನೆರಡು ಸಂಸ್ಕಾರ ವಿಧಿಗಳನ್ನು ನಿಯಮಿಸಲಾಗಿದೆ. ಪ್ರತಿ ಸಂಸ್ಕಾರದಲ್ಲಿಯೂ ಬುದ್ದ ಪೂಜೆ, ತ್ರಿಸರಣಗಮನ, ಪಂಚಶೀಲಗ್ರಹಣ ಪ್ರಾಮುಖ್ಯವಾದುದು. ಈ ಸಂಸ್ಕಾರಗಳನ್ನು ಏರ್ಪಡಿಸುವುದು ಪ್ರತಿಯೊಬ್ಬ ಬೌದ್ಧನ ಆದ್ಯ ಕರ್ತವ್ಯ. ಇಂಥ ಆಲೋಚನೆ ಕರ್ಮಗಳಿಂದ ಬೌದ್ಧ ಸಮಾಜ ಭಾರತದಲ್ಲಿ ಶೀಘ್ರ ನೆಲೆಯೂರುತ್ತದೆ. ಸ್ಥಳಿಕ ರೂಢಿ ವ್ಯಕ್ತಿಯ ಅನುಕೂಲತೆಗಳಿಗೆ ಸಮರ್ಪಕವಾಗುವಂತೆ ಸೂಕ್ಷ್ಮ ಬದಲಾವಣೆಗಳನ್ನು ಮಾಡಬಹುದು.

ಪರಿಚ್ಛೇದ - ೫

# ಬೌದ್ಧರ ನೀತಿನಿಯಮಗಳು ಮತ್ತು ಕುರುಹುಗಳು

**೧) ಜನ್ಮ ದಿನಾಚರಣೆ :** ವ್ಯಕ್ತಿಯು ವರ್ಷಕ್ಕೊಮ್ಮೆ ತಾನು ಹುಟ್ಟಿದ ದಿನವನ್ನು ನೆನೆಯುವುದು. ಚಿಕ್ಕ ಮಕ್ಕಳ ಹುಟ್ಟಿದ ದಿನಾಚರಣೆಯನ್ನು ಹಿರಿಯರು ಏರ್ಪಡಿಸಬೇಕು. ಆ ದಿನ ಜನ್ಮ ತಾಳಿದವರು ಶುಚಿತ್ವ ಹೊಂದಿ, ಹೊಸ ಹಸನಾದ ಬಟ್ಟೆ ಧರಿಸಿ, ಬುದ್ಧ ಪೂಜೆ ಏರ್ಪಡಿಸಬೇಕು ಮತ್ತು ವಿಹಾರಕ್ಕೆ ದರ್ಶನ ಕೊಟ್ಟು ತ್ರಿಸರಣ ಗಮನ, ಪಂಚಶೀಲ ಗ್ರಹಣ ಪಡೆಯಬೇಕು. ಸಂಘದಾನ ಮಾಡಿ ಗುರು-ಹಿರಿಯರ ಆಶೀರ್ವಾದ ಹೊಂದಿ ದೀರ್ಘಾಯುವಾಗಲೆಂದು ಹಾರೈಸಿಕೊಳ್ಳಬೇಕು. ಬಂಧುಮಿತ್ರ, ನೆರೆ ಹೊರೆಯವರನ್ನು ಆಹ್ವಾನಿಸಬೇಕು.

**೨) ಮೃತ ಮಾತಾ ಪಿತರ ಮತ್ತು ಹಿರಿಯ ಪುಣ್ಯದಿನ :** ಮನೆಯಲ್ಲಿ ಮಾತಾ ಪಿತರನ್ನು ಹಿಡಿದು ಅನೇಕ ಜನ ಮರಣವನ್ನು ಅಪ್ಪಿರುತ್ತಾರೆ. ಎಲ್ಲರ ಪುಣ್ಯದಿನಗಳು ಬೇರೆ-ಬೇರೆ ಮಾಡುತ್ತಿದ್ದರೆ ವರ್ಷದ ದಿನಗಳೆಲ್ಲವೂ ಸಾಲುವುದಿಲ್ಲ. ಆದ್ದರಿಂದ ವರ್ಷಕ್ಕೆ ಒಮ್ಮೆ ಹಿರಿಯರ ಪುಣ್ಯದಿನ ಆಚರಿಸುವುದು ಯೋಗ್ಯ. ತಮಗೆ ಅನಕೂಲವಾದ ದಿನ ಮನೆಯಲ್ಲಿ ಬುದ್ಧ ಪೂಜೆ ಏರ್ಪಡಿಸಿ ಭಿಕ್ಖುಗಣ ಆಮಂತ್ರಿಸಬೇಕು. ತ್ರಿಸರಣ ಗಮನ, ಪಂಚಶೀಲ ಗ್ರಹಣವಾದ ಮೇಲೆ, ಭಿಕ್ಖುಗಳು ಪರಿತ್ರಾಣ ಪಠಣ ಮಾಡುವರು, ನಂತರ ಭಿಕ್ಖುಗಳಿಗೆ ಭೋಜನದಾನ ಇತರ ದಾನ ನೀಡಬೇಕು. ಬಂಧುಗಳೆಲ್ಲರೂ ಒಂದು ಲೋಟ ನೀರನ್ನು ಒಂದು ತಟ್ಟೆಯಲ್ಲಿ ಸುರಿಯುತ್ತ 'ಇದಂ ಮೆ ಞಾತಿನಂ ಹೋತು ಸುಖಿತಾ ಹೊಂತು ಞಾತಯೊ!' ಲೋಟದಲ್ಲಿಯ ನೀರು ಮುಗಿಯುವವರೆಗೆ ನುಡಿಯಬೇಕು. ಭಿಕ್ಖುಗಳು ಧಮ್ಮ ಉಪದೇಶ ಮಾಡಿ ನುಡಿಯುವರು. ಅಂದು ಇತರರಿಗೂ ಭೋಜನದಾನ ನೀಡಬಹುದು.

**೩) ಮನೆ ತರ ಹಾಕುವುದು :** ಅನುಕೂಲದ ದಿನದಂದು ಗೃಹಸ್ಥನು ತರಹಾಕುವ ಸ್ಥಳದಲ್ಲಿ ಬುದ್ಧ ಪೂಜೆ ಏರ್ಪಡಿಸಬೇಕು. ಭಿಕ್ಖು

ಬೌದ್ಧಾಚಾರ್ಯರನ್ನು ಆಮಂತ್ರಿಸಿ ತ್ರಿಸರಣ ಗಮನ ಪಂಚಶೀಲ ಗ್ರಹಣ ಹೊಂದಿ ತ್ರಿರತ್ನ ಗುಣಗಾನ ಮಾಡಬೇಕು. ಸ್ವಲ್ಪ ಭೂಮಿಯನ್ನು ಪೂಜ್ಯರೂ, ಗೃಹಸ್ಥರೂ ಅಗೆದು ಕಲ್ಲು, ಮಣ್ಣು, ನೀರನ್ನು ಸುರುವಿ, ಹೂಗಳನ್ನು ಹಾರ-ಗಂಧ ದೀಪಾದಿಗಳನ್ನು ಹಚ್ಚಬೇಕು. ಭಿಕ್ಷುಗಳು ರತನ ಸೂತ್ರ ಪಠಿಸುವರು. ಭಿಕ್ಷು ಭೋಜನ-ಸಂಘದಾನವಾದ ಮೇಲೆ ಅವರು ಆಶೀರ್ವದಿಸಿ ತೆರಳುವರು.

**೪) ಗೃಹಪ್ರವೇಶ :** ಗೃಹ ಪತಿಯು ಹೊಸ ಮನೆಯನ್ನು ಶುಚಿತ್ವಗೊಳಿಸಿ ಬುದ್ಧ ಪೂಜೆ ಏರ್ಪಡಿಸಬೇಕು. ಭಿಕ್ಷು ಅಥವಾ ಬೌದ್ಧಾಚಾರ್ಯರನ್ನು ಆಮಂತ್ರಿಸಿ ತ್ರಿಸರಣ ಗಮನ ಪಂಚಶೀಲ ಗ್ರಹಣ ಎಲ್ಲರೂ ಪಡೆಯಬೇಕು. ಭಿಕ್ಷುಗಳು ಪರಿತ್ರಾಣ ಸೂತ್ರ ಪಠಣ ಮಾಡುವರು. ಬುದ್ಧ ಪೂಜೆಗೆ ಇರಿಸಿದ್ದ ನೀರನ್ನು ಮನೆಯ ಎಲ್ಲಾ ಭಾಗ-ವಿಭಾಗಗಳಲ್ಲಿ ನಾಲ್ಕೂ ಮೂಲೆಗೆ, ಕೆಳಗೆ ಮೇಲೆ ಬೋಧಿ ಎಲೆಯಿಂದ ಸಿಂಪಡಿಸಬೇಕು. ಆಗ ಅವರು ಈ ಶ್ಲೋಕ ನುಡಿಯುವರು.

**ಸಬ್ಬೆ ಬುದ್ಧಬಲಪತ್ತಾ ಪಚ್ಚೇಕಾನಂ ಚಯಂ ಬಲಂ!**
**ಅರಹಂತಾ ನಂ ಚ ತೇಜೇನ ರಕ್ಖಂ ಬಂದಾಮಿ ಸಬ್ಬಸೊ!!**
**ಸಬ್ಬೆ, ಧಮ್ಮಾ ಬಲಪತ್ತಾ ಅರಿಯ ಸಚ್ಚಾನುಂ ಚ ಯಂ ಬಲಂ !**
**ಧಮ್ಮ ಚಕ್ಕಾನು ತೇಜೇನ ರಕ್ಖಂ ಬಂದಾಮಿ ಸಬ್ಬಸೊ !!**
**ಸಬ್ಬೆ, ಸಂಘಾ ಬಲಪತ್ತಾ ವಿಮುತ್ತಾ ನಂ ಚ ಯಂ ಬಲಂ !**
**ಸಾಸನಸ್ಸ ಚ ತೇಜೇನ ರಕ್ಖಂ ಬಂದಾಮಿ ಸಬ್ಬಸೊ!!**

**ಅರ್ಥ :** ಸಕಲ ಸಮ್ಮಾ ಸಂಬುದ್ಧರ, ಪಚ್ಚೇಕ ಬುದ್ಧರ ತೇಜಸ್ಸಿನ ಬಲವು ಸಕಲರನ್ನು ರಕ್ಷಿಸುವಂತಾಗಲಿಯೆಂದು ಬುದ್ಧನಿಗೆ ವಂದಿಸೋಣ.

ಸರ್ವಧರ್ಮಗಳ ಬಲದಿಂದ, ನಾಲ್ಕು ಅರಿಯ ಸತ್ಯಗಳ ಬಲದಿಂದ, ಧಮ್ಮ ಚಕ್ಷುವಿನ ತೇಜಸ್ಸಿನಿಂದ ಎಲ್ಲರೂ ರಕ್ಷಿಸಲ್ಪಡಲಿಯೆಂದು ಧಮ್ಮಕ್ಕೆ ವಂದಿಸೋಣ.

ಸರ್ವ ಸಂಘದ ಬಲದಿಂದ ಮತ್ತು ವಿಮುಕ್ತಿಯ ಬಲದಿಂದ ಧರ್ಮ ಸಾಸನ ರತ್ನದ ತೇಜಸ್ಸಿನಿಂದ ಎಲ್ಲರೂ ರಕ್ಷಿಸಲ್ಪಡಲಿಯೆಂದು ಸಂಘಕ್ಕೆ ವಂದಿಸೋಣ. ಮನೆಯ ಮುಂಭಾಗದಲ್ಲಿ ಧರ್ಮಚಕ್ರದ ಚಿಹ್ನೆಯನ್ನು

ಇರಿಸಬೇಕು.

ನಂತರ ಭಿಕ್ಖು ಭೋಜನ, ಸಂಘದಾನ ಮಾಡಿ ಅವರನ್ನು ಕಳುಹಿಸಬೇಕು. ಬಂಧು-ಮಿತ್ರರು ಭೋಜನ ಮಾಡುವರು. ಸಕಲರೂ ಶಾಂತಿಯನ್ನು ಹಾರೈಸುವರು.

**೫) ಮಂಗಳ ಸೂತ್ರ :** ಇದು ಮದುವೆಯಾದ ಸ್ತ್ರೀಯು ಧರಿಸುವಂತ ಆಭರಣ. ಮಂಗಳಸೂತ್ರ ಅಥವಾ ತಾಳಿಯ ಚೈನು ಅಥವಾ ಮಣಿಸರದಲ್ಲಿ ಕಟ್ಟಿಕೊಳ್ಳುವರು. ಈ ಮಂಗಳ ಸೂತ್ರವೆಂದರೆ ಧರ್ಮದ ಗುರುತು. ಆದ್ದರಿಂದ ಆ ತಾಳಿಯ ಮೇಲೆ ಧರ್ಮಚಕ್ರವನ್ನು ಅಚ್ಚುಹಾಕಿಸಬೇಕು. ಕೆಲವು ಕಡೆ ಎರಡು ತಾಳಿಗಳನ್ನು ಪೋಣಿಸಿದ ಸರವನ್ನು ಧರಿಸುವ ರೂಢಿಯುಂಟು. ಒಂದರ ಮೇಲೆ ಧರ್ಮಚಕ್ರ, ಇನ್ನೊಂದರ ಮೇಲೆ ಸ್ವಾಸ್ತಿಕ ಚಿಹ್ನೆಯನ್ನು ಅಚ್ಚು ಹಾಕಿಸಬೇಕು. ಇವೆರಡೂ ಚಿಹ್ನೆಗಳು ಬೌದ್ಧರಿಗಾಗಿವೆ.

**೬) ಅರಿಶಿಣ ಕುಂಕುಮ :** ಇವು ಸ್ತ್ರೀಯರಿಗೆ ಮುತ್ತೈದೆತನವನ್ನು ತೋರಿಸಿಕೊಡುತ್ತವೆ. ಈ ಬಣ್ಣಗಳು ಬುದ್ಧನ ಶರೀರದಿಂದ ಚಿಮ್ಮುತ್ತಿದ್ದ ಆರು ಬಣ್ಣಗಳಲ್ಲಿ ಇವು ಎರಡು ಬಣ್ಣಗಳು. ಸ್ತ್ರೀಯರು ಹಣೆಯ ಮೇಲೆ, ಬೈತಲೆಯಲ್ಲಿ, ಮೂಗಿನ ಮೇಲೆ ಧರಿಸುವುದುಂಟು. ಈ ಬಣ್ಣಗಳು ಬೌದ್ಧರಿಗೆ ಪವಿತ್ರ.

**೭) ಬೌದ್ಧರ ಸಂಕಲ್ಪ :** ಬೌದ್ಧರಾದವರು ಈ ಕೆಳಗಿನ ಸಂಕಲ್ಪ ಕೈಗೊಳ್ಳಬೇಕು.

**ನತ್ಥಿಮೆ ಸರಣಂ ಅಞ್ಞಂ ಬುದ್ಧೋಮಿ ಸರಣಂ ವರಂ!**
**ನತ್ಥಿಮೆ ಸರಣಂ ಅಞ್ಞಂ ಧಮ್ಮೋಮೆ ಸರಣಂ ವರಂ!**
**ನತ್ಥಿಮೆ ಸರಣಂ ಞ್ಞಂಸಂಘೋಮೆ ಸರಣಂ ವರಂ!**
**ಏತೇನ ಸಚ್ಚ ವಜ್ಜೇನ ಹೋತಿ ಮೆ ಜಯಮಂಗಳಂ!!**

**ಅರ್ಥ :** ಬೇರೆಲ್ಲೂ ನನಗೆ ರಕ್ಷಣೆಯಿಲ್ಲ. ಬುದ್ಧರೇ ನನ್ನ ಶ್ರೇಷ್ಠ ರಕ್ಷಣೆ. ಧರ್ಮವೇ ನನ್ನ ಶ್ರೇಷ್ಠ ರಕ್ಷಣೆ. ಸಂಘವೇ ನನ್ನ ಶ್ರೇಷ್ಠ ರಕ್ಷಣೆ.

ಈ ಸತ್ಯವಚನದಿಂದ ನನಗೆ ಜಯಮಂಗಳವಾಗಲಿ.

**೮) ಬೌದ್ಧರ ಪ್ರತಿಜ್ಞೆಗಳು :**

**ಇಮಾಯ ಧಮ್ಮಾನು ಧಮ್ಮ ಪಟಿಪತ್ತಿಯಾ ಬುದ್ಧಂ ಪೂಜೇವಿ!**
**ಇಮಾಯ ಧಮ್ಮಾನು ಧಮ್ಮ ಪಟಿಪತ್ತಿಯಾ ಧಮ್ಮಂ ಪೂಜೇಮಿ!**
**ಇಮಾಯ ಧಮ್ಮಾನು ಧಮ್ಮ ಪಟಿಪತ್ತಿಯಾ ಸಂಘಂ ಪೂಜೇಮಿ!**
**ಅದ್ಧಾಇಮಾಯ ಪಟಿಪತ್ತಿಯಾ ಜಾತಿ, ಜರಾ, ಮರಣಂ, ಪರಿಮುಂಚ ಸ್ಸಾಮಿ!!**

**ಅರ್ಥ** : ಈ ಧಮ್ಮಾನುಸಾರ ಆಚರಣೆಯಿಂದ ನಾನು ಬುದ್ಧನನ್ನು ಪೂಜಿಸುತ್ತೇನೆ.

ಈ ಧಮ್ಮಾನುಸಾರ ಆಚರಣೆಯಿಂದ ನಾನು ಧಮ್ಮವನ್ನು ಪೂಜಿಸುತ್ತೇನೆ.

ಈ ಧಮ್ಮಾನುಸಾರ ಆಚರಣೆಯಿಂದ ನಾನು ಸಂಘವನ್ನು ಪೂಜಿಸುತ್ತೇನೆ.

ನಿಶ್ಚಯವಾಗಿಯೂ ಈ ಧರ್ಮ ಪ್ರತಿಜ್ಞೆಯಿಂದ ನನಗಿರುವ ಜನ್ಮ ಮುಪ್ಪು ಮತ್ತು ಮೃತ್ಯುವಿನಿಂದ ಮುಕ್ತನಾಗುವೆನು.

**ಇಮಿನಾ ಪುಞ್ಞಕಮ್ಮೇನೆ ಮಾಮೆ ಬಾಲ ಸಮಾಗಮೋ!**
**ಸತಂ ಸಮಾಗಮೊ ಹೋತು ಯಾವ ನಿಬ್ಬಾಣ ಪತ್ತಿಯಾ!!**

**ಅರ್ಥ** : ಈ ಪುಣ್ಯ ಕರ್ಮದಿಂದ ನನಗೆ ನಿರ್ವಾಣ ಪ್ರಾಪ್ತಿಯಾಗುವವರೆಗೂ ಮೂರ್ಖರ ಸಹವಾಸವಾಗದಿರಲಿ, ಮತ್ತು ಸದಾ ಸತ್ಪುರುಷರ ಸಂಘ ದೊರೆಯಲಿ.

**೯) ಬೌದ್ಧರ ತತ್ವ** : ಲೋಕದಲ್ಲಿ ಪ್ರತಿ ಜೀವಿ ಮತ್ತು ಮನಸ್ಸು, ಶರೀರ ಸದಾ ಮಾರ್ಪಾಟನ್ನು ಹೊಂದುತ್ತಲೇ ಇರುವುದು, ನಿತ್ಯವಾದುದು ಯಾವುದೂ ಇಲ್ಲ. ಈಶ್ವರನು ನಿತ್ಯನಲ್ಲ ನಿರೀಶ್ವರನೂ ಸತ್ಯವಲ್ಲ, ಭವ, ಪುನರ್ಭವ, ಬದಲಾವಣಿ ಮಾರ್ಪಾಟು ಮಾತ್ರ ಸತ್ಯ.

**ದುಃಖ** : ಈ ಬದಲಾವಣೆಯ ಸತ್ಯವನ್ನು ಅರಿಯದೇ ಎಲ್ಲವೂ ನಿತ್ಯವಾದುದೆಂದು ಬಗೆದು ತೃಷ್ಣೆಯನ್ನು ಅಂಟಿಸಿದಾಗ ಆಗುವ ಮಾನಸಿಕ ಅಸಮಾಧಾನವೇ ದುಃಖ. ಹುಟ್ಟು, ವ್ಯಾಧಿ, ಮುಪ್ಪು, ಮರಣ, ದುಃಖ, ಪ್ರಿಯರಿಂದ ಅಗಲವದೂ ಅಪ್ರಿಯರಿಂದ ಕೂಡಿರುವುದೂ, ಇಚ್ಛೆ ಈಡೇರಲಾರದ್ದು ದುಃಖ.

**ಅನತ್ತ** : ಆತ್ಮನೆಂಬುದು ಇಲ್ಲ ಅರ್ಥಾತ್ ತಾನು, ತನ್ನದೆಂಬುದು ಇರುವುದಿಲ್ಲ. ಹುಟ್ಟು-ಸಾವು, ನಾಮ ರೂಪಗಳ ಸಂಯೋಜನೆ ಮತ್ತು ವಿಂಗಡನೆ ಕಾರಣ-ಕಾರ್ಯದ ನಿಯಮದಂತೆ ಸದಾ ನಡೆದೇ ಇರುತ್ತದೆ.

**೧೦) ಬೌದ್ಧರ ತಿಳುವಳಿಕೆ** : ಪ್ರತಿಯೊಂದು ಕರ್ಮವು ಫಲವನ್ನು ಉತ್ಪತ್ತಿ ಮಾಡುತ್ತದೆ. ಪುಣ್ಯ ಕರ್ಮವು ಉತ್ತಮ ಫಲವನ್ನು, ಪಾಪ ಕರ್ಮ ಕೆಟ್ಟ ಫಲವನ್ನುಕೊಡುತ್ತದೆ. ಕರ್ಮದ ಉಗಮ ಮನಸ್ಸಿನ ಒಂದು ಭಾಗದಿಂದ ಆಗುತ್ತದೆ.

**೧೧) ಬೌದ್ಧರ ಅನಿಸಿಕೆಗಳು** : ಅಹಿಂಸೆ, ರಾಗ-ದ್ವೇಷ, ಮೋಹದಿಂದೊಡಗೂಡಿದ ಕಾಯ-ವಾಯಾ-ಮನಸ್ಸಿನಿಂದ ಇತರ ಜೀವಿಗಳಿಗೆ ಕಷ್ಟ ಕೊಡದೆ ಇರುವುದು. ಅವಶ್ಯವಿದ್ದರೆ ಸಹಾಯವಾಗು. ಆದರೆ ಕೊಲ್ಲುವ ಬಗ್ಗೆ ಮನಸ್ಸು ಎಂದೂ ಮಾಡಬೇಡ.

**೧೨) ಬೌದ್ಧರ ವಿಚಾರ** : ಬುದ್ಧ ಧರ್ಮವೇ ಮಾನವ ಧರ್ಮ, ಯಾರು ಧರ್ಮ ರಕ್ಷಿಸುತ್ತಾರೊ, ಅವರು ಧರ್ಮದಿಂದ ರಕ್ಷಿಸಲ್ಪಡುತ್ತಾರೆ.

**೧೩) ಬೌದ್ಧರ ನಂಬಿಕೆ** : ಎಲ್ಲರಲ್ಲಿಯೂ ಬೋಧಿಯ ಬೀಜವಿದ್ದು ಎಲ್ಲರೂ ಜ್ಞಾನೋದಯವನ್ನು ಪಡೆಯಬಹುದು.

**೧೪) ಬೌದ್ಧರ ಸತ್ಯ** : ದುಃಖ, ದುಃಖಕ್ಕೆ ಕಾರಣ, ದುಃಖ ನಿವಾರಣ; ದುಃಖ ನಿವಾರಣ ಮಾರ್ಗ.

**೧೫) ಬೌದ್ಧರ ಗುರಿ** : ನಿಬ್ಬಾಣ, ಎಲ್ಲ ದುಃಖಗಳ ಮುಕ್ತಿ.

**೧೬) ಬೌದ್ಧರ ಆಲೋಚನೆ** : ಮೈತ್ರಿ ಮತ್ತು ಕರುಣೆಯಿಂದ ದುಃಕತಪ್ತವಾದ ಜಗತ್ತನ್ನು ವಿಮೋಚನಗೊಳಿಸುವುದು.

**೧೭) ಬೌದ್ಧರ ಪೂಜಾ ಸ್ಥಳಗಳು** : ಬುದ್ಧ ವಿಹಾರ, ಬುದ್ಧ ಮೂರ್ತಿ, ಸ್ತೂಪ, ಬೋಧಿವೃಕ್ಷ ಮತ್ತು ಭಿಕ್ಖು

**೧೮) ಬೌದ್ಧರ ಧರ್ಮ ಗ್ರಂಥಗಳು** : ತಿಪಿಟಕ ಅಂದರೆ ವಿನಯ ಪಿಟಕ, ಸುತ್ತ ಪಿಟಕ ಮತ್ತು ಅಭಿಧಮ್ಮ ಪಿಟಕ.

**೧೯) ಬೌದ್ಧರ ಧರ್ಮ ಚಿನ್ಹೆ** : ಧರ್ಮಚಕ್ರ, ಎಂಟು ಭಾಗದ್ದಾಗಲಿ, ಇಪ್ಪತ್ನಾಲ್ಕು ಭಾಗವುಳ್ಳದ್ದಾಗಲಿ, ಇರುವ ವರ್ತುಲಾಕಾರದ ಗೋಲ ಚಕ್ರ.

**೨೦) ಬೌದ್ಧ ಧ್ವಜ** : ಪಂಚ ವರ್ಣಗಳಿಂದ ಕೂಡಿದ್ದು, ನೀಲಿ, ಕೆಂಪು, ಹಳದಿ, ಬಿಳಿ ಮತ್ತು ಕಿತ್ತಳೆ. ಈ ಬಣ್ಣಗಳು ಬುದ್ಧನ ಶರೀರದಿಂದ ಹೊರಹೊಮ್ಮಿದ್ದವು. ಈ ಬಣ್ಣಗಳಿಂದ ಕೂಡಿದ ಧ್ವಜ ಅಂತರರಾಷ್ಟ್ರೀಯ ಬೌದ್ಧ ಧ್ವಜವಾಗಿದೆ.

**೨೧) ಬೌದ್ಧ ಮಹಾರಾಜರು** : ಶುದ್ಧೋಧನ, ಬಿಂಬಿಸಾರ, ಪ್ರಸೇನಜೇತ, ಅಶೋಕ, ಕಾನಿಷ್ಕ, ಹರ್ಷ, ಅಜಾತಶತ್ರು, ಉದೇನ.

**೨೨) ಬೌದ್ಧ ರಮಣಿಯರು** : ಪ್ರಜಾಪತಿ ಗೌತಮಿ, ಯಶೋಧರೆ, ಸುಜಾತ, ಪ್ರಕೃತಿ, ಅಮ್ರಪಾಲಿ, ವಿಶಾಖ, ವಿಧಿಶಾ.

**೨೩) ಬೌದ್ಧ ಭಿಕ್ಖು** : ಇವರು ಲೌಕಿಕ ಜೀವನದ ಆಕರ್ಷಣೆಯನ್ನು ತೃಷ್ಣೆಯನ್ನು ತ್ಯಾಗ ಮಾಡಿ ಬುದ್ಧನು ಹಾಕಿಕೊಟ್ಟ ಆಧ್ಯಾತಮಿಕ ಪರಿಶುದ್ಧ ಜೀವನಮಾರ್ಗ ಅನುಸರಿಸಿ ಕಾವಿ ವಸ್ತ್ರಧರಿಸಿ ಸಾಧು ಜೀವನ ಕೈಗೊಂಡವರು. ತ್ರಿಪಿಟಕದ 227 ನಿಯಮಗಳನ್ನು ಪಾಲಿಸುವವರು. ಭಿಕ್ಷೆಯಿಂದ ದೊರೆತದ್ದನ್ನು ಮಾತ್ರ ಊಟ ಮಾಡುವರು. ಇವರಿಗೆ ಭಿಕ್ಖು, ಭಂತೆ, ಬದಂತ, ಗುರು ಇತ್ಯಾದಿಯಾಗಿ ಕರೆಯುತ್ತಾರೆ. ಇರ ಸಹ ಜೀವನವೇ ''ಬೌದ್ಧ ಸಂಘ''. ಟಿಬೆಟ್ ಇನ್ನು ಕೆಲವೆಡೆ ಇವರಿಗೆ ಲಾಮಾಗಳೆಂದೂ ಹೇಳುವರು. ಭಿಕ್ಖು ಸಂಘದ ಮುಖಂಡರಿಗೆ ''ಸಂಘ ನಾಯಕ''ರೆಂದು ಕರೆಯುವರು.

**೨೪) ಧಮ್ಮಾಚಾರಿ** : ಭಾರತದಲ್ಲಿ ಭಿಕ್ಖುಗಳ ಸಂಖ್ಯೆ ತುಂಬಾ ಕಡಿಮೆ ಇರುತ್ತದೆ. ಎಲ್ಲಾ ಸಂಸ್ಕಾರಗಳಿಗೂ ಭಿಕ್ಕುಗಳು ಸಿಗುವುದು ವಿರಳ.

ಸಂಸ್ಕಾರ ವಿಧಿಗಳು ಸಾಗಿಕೊಂಡು ಹೋಗಲೆಂದು ಬೌದ್ಧ ಮಹಾ ಉಪಾಸಕರಲ್ಲಿ ಧರ್ಮಾಚಾರಿಗಳೂ ಆಗಬಹುದು. ಇವರು ತಮ್ಮ ಪ್ರಾಪಂಚಿಕ ಜೀವನ ನಡೆಸುತ್ತ ಧಮ್ಮದ ತಿರುಳನ್ನು ಅರಿತುಕೊಂಡು ಅದರಂತೆ ನಡೆದುಕೊಂಡು ಇತರರಿಗೂ ಧಾರ್ಮಿಕ ನಿಯಮಗಳನ್ನು ತಿಳಿಸಿ, ಸಂಸ್ಕಾರಗಳನ್ನು, ಸಮಾರಂಭಗಳನ್ನು ನೆರವೇರಿಸಲು ಸಮರ್ಥರಾದವರು ಧಮ್ಮಾಚಾಯರಿಗಳು ಎಂದು ಕರೆಸಿಕೊಳ್ಳುವರು. ಇವರಿಗೆ ಪುರೋಹಿತ ಶಾಹಿಯನ್ನು ಕಟ್ಟುವುದಿಲ್ಲ.

**೨೫) ಬೌದ್ಧ ಉಪಾಸಕ-ಉಪಾಸಕಿಯರು :** ಬುದ್ಧ, ಧಮ್ಮ ಮತ್ತು ಸಂಘವೆಂಬ ತ್ರಿರತ್ನಗಳಲ್ಲಿ ಶ್ರದ್ಧೆ-ನಿಷ್ಠಯುಳ್ಳವರೂ ಪಂಚಶೀಲಗಳನ್ನು ಬೌದ್ಧಧ್ಯಾನಗಳನ್ನು ಅನುಸರಿಸುವರೂ ಮತ್ತು ಭಿಕ್ಖು ಧಮ್ಮಾಚಾರ್ಯರ ಆದೇಶದಂತೆ ಧಾರ್ಮಿಕ ಸಂಸ್ಕಾರಗಳನ್ನು ನೆರವೇರಿಸುವವರು ಬೌದ್ಧ ಉಪಾಸಕ-ಉಪಾಸಕಿಯರೆಂದು ಅನ್ನಿಸಿಕೊಳ್ಳುವರು, ಅವರಲ್ಲಿ ಹಿರಿಯರಿಗೆ ಮಹಾ-ಉಪಾಸಕರೆಂದು ಕರೆಯುವರು.

**೨೬) ಬೌದ್ಧರ ಆಹಾರ-ಪೇಯಗಳು :** ಸಾಮಾನ್ಯವಾಗಿ ಬೌದ್ಧರು ಸಸ್ಯಹಾರಿಗಳು. ಸಸ್ಯ ಆಹಾರವು ಸಾಕಷ್ಟು ಇಲ್ಲದ ಸಮಯದಲ್ಲಿ ಮಾಂಸಾಹಾರಿಗಳೂ ಆಗಿರುತ್ತಾರೆ. ಆದರೆ ಮಾಂಸ ತಮಗೆ ಬೇಕಿದ್ದರೂ, ಎಂದು ಅವರು ಪ್ರಾಣಿ ಹಿಂಸೆ ಮಾಡುವುದಿಲ್ಲ. ಧಾರ್ಮಿಕ ಸಮಾರಂಭಕ್ಕೂ ಬೌದ್ಧರೂ ಎಂದೂ ಪಶು ಬಲಿ ಕೊಡುವುದಿಲ್ಲ. ಆದ್ದರಿಂದ ಆಹಾರ ಪೇಯಗಳು ಶರೀರದ ಅವಶ್ಯಕತೆ, ಪ್ರದೇಶಗಳ ಪರಿಸ್ಥಿತಿ-ಜನಗಳ ಬಾಯಿ ಚಟಗಳನ್ನೇ ಅವಲಂಬಿಸಿರುವುದರಿಂದ ಬೌದ್ಧರು ಸಸ್ಯಹಾರಿಗಳಾಗಿರುವುದೇ ಮೇಲು. ಧಾರ್ಮಿಕ ವಿಧಿ ಕಾಲದಲ್ಲಿ ಶುದ್ಧವಾದ ಸಸ್ಯ ಆಹಾರವನ್ನೇ ತಯಾರಿಸಬೇಕು.

**೨೭) ಬುದ್ಧ ಮೂರ್ತಿ :** ಬೌದ್ಧರಲ್ಲಿ ಮೂರ್ತಿ ಪೂಜೆ ನಿಸಿದ್ಧವೆಂದು ಕೆಲವರ ಭಾವನೆ, ಆದರೆ ಮೂರ್ತಿಯು ಮನುಷ್ಯನ ಆಕಾರದಲ್ಲಿ ಇದ್ದು ಧ್ಯಾನರೂಢನಾಗಿರುವುದು. ಬುದ್ಧ ಮೂರ್ತಿಯು ಬುದ್ಧನ ಚಿನ್ಹೆ ಅದು ಬುದ್ಧನ ಗುಣಗಳನ್ನು ತನ್ನಲ್ಲಿ ಬೆಳೆಸಿಕೊಳ್ಳಲು ಸಹಾಯಕವಾಗುತ್ತದೆ.

ಕಾರಣ ಮಾನವರೂ ತಾವೂ ಸಹ ಬುದ್ಧನಂತೆ ಶರೀರವುಳ್ಳವರೂ ಆಗಿದ್ದು ಬುದ್ಧನೆತೆ ಧ್ಯಾನದಲ್ಲಿ ತೊಡಗಲೆಂದು ಮನುಷ್ಯನ ಮನಸ್ಸನ್ನು ಧರ್ಮದತ್ತ ಕೊಂಡೊಯ್ಯಲಿಕ್ಕೆ ಸಹಾಯಕವಾಗುತ್ತದೆ. ಮೂರ್ತಿ ಪೂಜೆಯೇ ಗುರಿಯಲ್ಲ. ಆದರೆ ಇದೊಂದು ಬೌದ್ಧ ಸಂಸ್ಕೃತಿಗೆ ಸಾಧನೆ.

**೨೮) ಭಿಕ್ಖು ಸ್ವಾಗತ :** ಭಿಕ್ಖುಗಳು ಉಪಾಸಕರ ಮನೆಗೆ ಆಮಂತ್ರಣ ಮೇರೆಯಾಗಲಿ ಅಥವಾ ಸ್ವ-ಇಚ್ಛೆಯಿಂದ ಆಗಲಿ ಭೇಟಿ ಕೊಡುವ ರೂಢಿಯುಂಟು. ಅವರು ಮನೆಯ ಮುಂದೆ ಬಂದಾಗ ಒಂದು ಹಸೆಮಣೆಯಾಗಲಿ, ಚಪ್ಪಡಿ ಕಲ್ಲುಗಳ ಮೇಲೆ ನಿಲ್ಲಿಸಿ ಅವರ ಕಾಲಿಗೆ ನೀರು ಹಾಕಿ ''ವಂದಾಮಿ ಭಂತೆ'' ಎಂದು ನಮಸ್ಕರಿಸಿ ಮನೆಯೊಳಗೆ ಸ್ವಾಗತಿಸಬೇಕು. ಕಾಲಿಗೆ ನೀರು ಹಾಕುವ ಕಾರಣವೇನೆಂದರೆ ಆರೋಗ್ಯದ ದೃಷ್ಟಿಯಿಂದ, ಪೂಜ್ಯರಿಗೆ ಗೌರವ ಸೂಚಿಸುವುದಕ್ಕೋಸ್ಕರ ಉಪಾಸಕ-ಉಪಾಸಕಿಯರ ಅಹಂಕಾರ ಕಮ್ಮಿಗೊಳಿಸುವುದಕ್ಕೋಸ್ಕರ ಈ ನಿಯಮವಿದೆ.

**೨೯) ಬೌದ್ಧ ಪದ್ಧತಿಯೆ ನಮಸ್ಕಾರಗಳು :** ಜಗತ್ತಿನ ಎಲ್ಲಾ ಸುಸಂಸ್ಕೃತ ಜನಾಂಗಗಳಲ್ಲಿ ಬಗೆ ಬಗೆಯ ನಮಸ್ಕಾರ ರೂಢಿಗಳುಂಟು. ಅದೇ ರೀತಿ ಬೌದ್ಧರಲ್ಲಿಯೂ ನಮಸ್ಕಾರ ಪದ್ಧತಿಗಳುಂಟು. ಆದರೆ ಭಾರತೀಯರಿಗೆ ಒಗ್ಗುವ ಕೆಲಬಗೆಯ ನಮಸ್ಕಾರಗಳನ್ನು ವಿವರಿಸಲಾಗಿದೆ.

**ಅ) ತ್ರಿಸರಣ ಗಮನ, ಪಂಚಶೀಲ ಗ್ರಹಣ ಕಾಲಕ್ಕೆ ನಮಸ್ಕರಿಸುವ ಬಗೆ :-** ಇದಕ್ಕೆ ಪಂಜಾಂಗ ಪ್ರಮಾಣವೆಂದು ಕರೆಯುವರು. ಎರಡೂ ಕೈಗಳನ್ನು ಜೋಡಿಸಿ ಹಣೆಗೆ ಹಚ್ಚಿಕೊಂಡು ಮಂಡಿಗಾಲಿನ ಮೇಲೆ ಕುಳಿತುಕೊಳ್ಳಬೇಕು. ಎರಡನೆ ಹಂತದಲ್ಲಿ ಜೋಡಿಸಿದ ಕೈಗಳನ್ನು ಎದೆ ಮುಂದೆ ತರಬೇಕು. ಮೂರನೆ ಹಂತದಲ್ಲಿ ಜೋಡಿಸಿದ ಕೈಗಳನ್ನು ಭೂಮಿಗೆ ಹಚ್ಚಿ ತಲೆಯನ್ನು ಕೈಗಳನ್ನು ತಲುಪುವವರೆಗೆ ಬಗ್ಗಿ ಮಂಡಿಕಾಲಿನ ಮೇಲಿದ್ದೇ ತ್ರಿಸರಣ, ಪಂಚಶೀಲ ಮತ್ತು ಧರ್ಮವನ್ನು ಯಾಚಿಸಬೇಕು. ಭಿಕ್ಖುಗಲು ದಯಪಾಲಿಸಿ ಧಮ್ಮವನ್ನು ನೀಡುವರು. ಅದನ್ನು ಗ್ರಹಿಸಬೇಕು. ಒಂದು ವೇಳೆ ಈ ರೀತಿ ಕೂಡಲು ಅತಿ ಕಷ್ಟವಾದರೆ ಕಾಲುಗಳನ್ನು ಮಡಚಿ ತಮಗೆ ಅನುಕೂಲವಾದ ರೀತಿಯಲ್ಲಿ ಕೂಡಬಹುದು.

ಆ) ಭಿಕ್ಖುಗಳ ದರ್ಶನ ದಾರಿಯಲ್ಲಿ ಅಥವಾ ಬಯಲಿನ ಹೊರಗಡೆ ಆದಾಗ್ಗೆ ನಿಂತುಕೊಂಡೇ ಎರಡು ಕೈ ಜೋಡಿಸಿ ಹಣೆಗೆ ಹಚ್ಚಿ ಬಲಗಾಲನ್ನು ಮುಂದೆ ಇಟ್ಟು ತುಸು ಮಣಿದು 'ವಂದಾಮಿ ಭಂತೆ' ಎಂದು ಗೌರವ ಸೂಚಿಸಬೇಕು.

ಇ) ಹಿರಿಯರ ದರ್ಶನವಾದಾಗ ಮತ್ತು ತಂದೆ-ತಾಯಿಗಳಿಗೆ, ಅಣ್ಣ-ಅಕ್ಕಂದಿರುಗಳಿಗೆ ಬಾಗಿ ಅವರ ಪಾದ ಮುಟ್ಟಿ ನಮಸ್ಕರಿಸಬೇಕು.

ಈ) ಮಿತ್ರರು, ಅಧಿಕಾರಿಗಳ ದರ್ಶನವಾದಾಗ ನಿಂತುಕೊಂಡು ಎರಡು ಕೈಗಳನ್ನು ಜೋಡಿಸಿ 'ವಂದಾಮಿ' ಎಂದು ಹೇಳಬೇಕು.

**೩೦) ಬುದ್ಧ ವಿಹಾರಕ್ಕೆ ದರ್ಶನ :-** ಉಪಾಸಕ-ಉಪಾಸಕಿಯರು ತಮ್ಮ ಪರಿಜನರೊಂದಿಗೆ ಪ್ರತಿ ಪೌರ್ಣಮಿ, ಅಮಾವಾಸ್ಯೆ, ಅಷ್ಟಮಿಗೆ ಅಥವಾ ರವಿವಾರ ರಜೆ ದಿನಗಳಂದು ಕಡ್ಡಾಯವಾಗಿ ಬುದ್ಧ ವಿಹಾರಕ್ಕೆ ದರ್ಶನವನ್ನೀಯಬೇಕು. ಹೂ-ಹಣ್ಣು, ಊದಬತ್ತಿ, ಮೇಣದ ಬತ್ತಿಗಳನ್ನು ತೆಗೆದುಕೊಂಡು ಹೋಗಬೇಕು. ಬುದ್ಧ ಪ್ರತಿಮೆಗೆ ಸರಿಯಾದ ರೀತಿಯಲ್ಲಿ ಅರ್ಪಿಸಬೇಕು. ಸಾಧ್ಯವಿದ್ದರೆ ಮನೆಯಲ್ಲಿ ತಯಾರಿಸಿದ ಪವಿತ್ರ ಆಹಾರವನ್ನು ಒಯ್ಯಬೇಕು. ಭಿಕ್ಖುಗಳು ಇದ್ದರೆ ಆಹಾರ-ಹಣ್ಣು-ಹಂಪಲುಗಳನ್ನು ದಾನವಾಗಿ ನೀಡಬೇಕು. ತ್ರಿಸರಣಗಮನ, ಪಂಚಶೀಲ ಗ್ರಹಣ ಮಾಡಬೇಕು. ದಾನಪೆಟ್ಟಿಗೆಯಲ್ಲಿ ಶಕ್ತಿಗನುಸಾರವಾಗಿ ಹಣವನ್ನು ಹಾಕಬೇಕು.

**೩೧) ಬೋಧಿ ದರ್ಶನ :-** ವಿಹಾರ ದರ್ಶನದ ನಂತರ ಬೋಧಿ ವೃಕ್ಷದ ದರ್ಶನ ಪಡೆಯಬೇಕು. ಪುಷ್ಪ-ಗಂಧದ ಬತ್ತಿಗಳ್ನು ಹಚ್ಚಬೇಕು. ಆ ಸಮಯದಲ್ಲಿ ಈ ಹಿಂದೆ ಹೇಳಿದಂತೆ ''ಯಸ್ಸ ಮೂಲೆ ನಸಿನ್ನೊವ'' ............ ಎಂಬ ಮಂತ್ರವನ್ನು ನುಡಿಯಬೇಕು.

**೩೨) ಸ್ತೂಪ ದರ್ಶನ :-** ಬೋಧಿ ದರ್ಶನ ಪಡೆದ ನಂತರ ಸ್ತೂಪ ದರ್ಶನ ಪಡೆಯಬೇಕು. ಪುಷ್ಪ, ಧೂಪ, ದೀಪ, ಗಂಧದ ಬತ್ತಿಗಳನ್ನು ಹಚ್ಚಿ ಮೂರು ಸುತ್ತು ಪ್ರದಕ್ಷಿಣೆ ಹಾಕಬೇಕು. ಆ ಕಾಲಕ್ಕೆ ವಂದಾಮಿ ಚೇತಿಯಂ............ ಎಂಬ ಸೂತ್ರವನ್ನು ಪಠಿಸಬೇಕು, ನಮಸ್ಕರಿಸಬೇಕು.

**೩೩) ಬೌದ್ಧರ ಯಾತ್ರಾ ಸ್ಥಳಗಳು** :- ಲುಂಬಿ, ಬುದ್ಧಗಯಾ, ಸಾರನಾಥ, ಕುಶಿನಗರ.

(i) ಲುಂಬಿಣಿ : ರಾಜಕುಮಾರ ಸಿದ್ಧಾರ್ಥ ಗೌತಮ ಮಹಾರಾಣಿ ಮಾಯೆಯ ಉದರದಿಂದ ಜನಿಸಿದ ಸ್ಥಳ ಇದು ಈಗ ಭಾರತ-ನೇಪಳ ಗಡಿಯಲ್ಲಿದೆ.

(ii) ಬುದ್ಧಗಯಾ : ಸಿದ್ಧಾರ್ಥ ಗೌತಮನು ಬೋಧಿ ವೃಕ್ಷದ ಅಡಿಯಲ್ಲಿ ಬೋಧಿಯನ್ನು ಪಡೆದು ''ಬುದ್ಧ''ನಾದ ಸ್ಥಳ, ಅರಳೀ ಮರವೇ ಬೋಧಿ ವೃಕ್ಷ. ಇದು ಈಗ ಬಿಹಾರ ಪ್ರಾಂತ್ಯದ ಗಯೆ ಜಿಲ್ಲೆಯಲ್ಲಿದೆ.

(iii) ಸಾರನಾಥ : ಬುದ್ಧನು ಮೊಟ್ಟಮೊದಲು ಐದು ಜನ ಶಿಷ್ಯರಿಗೆ ಬುದ್ಧ ಧರ್ಮವನ್ನು ಬೋಧಿಸಿದ ಸ್ಥಳ. ಇದೇ ಧರ್ಮ ಚಕ್ರವು ಇಂದಿಗೂ ಜಗತ್ತಿನಲ್ಲಿ ಉರುಳುತ್ತಲೇ ಇದೆ. ಇದು ಈಗ ಉತ್ತರ ಪ್ರದೇಶದಲ್ಲಿ ಬನಾರಸ, ಕಾಶಿ, ವಾರನಾಸಿಯಾಗಿದೆ.

(iv) ಕುಶಿನಗರ : ಬುದ್ಧನು ಮಹಾಪರಿ ನಿಬ್ಬಾಣ ಹೊಂದಿದ ಸ್ಥಳ. ಇದು ಉತ್ತರ ಪ್ರದೇಶದ ಗೋರಖಪುರ ಜಿಲ್ಲೆಯಲ್ಲಿದೆ.

**೩೪) ಬೌದ್ಧರ ಮಹತ್ವದ ಸ್ಥಳಗಳು** : ಪಾಟಲಿ ಪುತ್ರ, ನಾಲಂದ, ವೈಶಾಲಿ, ರಾಜಗೃಹ, ಸಾಕೆ, ಮಹೇತ, ಕಪಿಲವಸ್ತು, ಅಯೋಧ್ಯ, ದೆಹಲಿ, ತಕ್ಷಶಿಲ, ಉಜ್ಜೈನಿ, ಸಾಂಚಿ, ನಾಗಪುರ, ಅಜಂತಾ, ಎಲ್ಲೋರಾ, ಔರಂಗಬಾದ, ಮುಂಬಯಿ, ಕಾರ್ಲಾ ಕನ್ಹೇರಿ, ಭಾಜಾ, ನಾಶಿಕ, ಅಮರಾವತಿ, ನಾಗಾರ್ಜುನ ಸಾಗರ, ತಿರುಪತಿ, ಮದುರೈ ಮೀನಾಕ್ಷಿ ಕಾಂಚಿ, ಶಬರಿಮಲೈ.

**೩೫) ಬೌದ್ಧರ ಹಬ್ಬ ಉತ್ಸವಗಳು** : ಹಬ್ಬ ಉತ್ಸವಗಳೆಂದರೆ ಸ್ತ್ರೀಯರಿಗೂ,ಚಿಕ್ಕ ಮಕ್ಕಳಿಗೂ ಸಡಗರ ಸಂತೋಷ ತರುವ ದಿನಗಳು. ಉಪಾಸಕ-ಉಪಾಸಕಿಯರು ಸಂತಸದಿಂದ ಇರುವ ದಿನ ಸಕಲರೂ ಸಾಧ್ಯವಿದ್ದಷ್ಟು ಹೊಸ-ಹಸನಾದ ಉಡುಪು. ಒಡವೆಗಳನ್ನು ಧರಿಸಿಕೊಂಡು, ಪಕ್ವಾನ್ನ ತಯಾರಿಸಿ ಬುದ್ಧ ಪೂಜೆ ಏರ್ಪಡಿಸಬೇಕು. ಮೇಲಿಂದ ಮೇಲೆ

ಭಿಕ್ಕುಗಳನ್ನು ಆಮಂತ್ರಿಸಿ ತ್ರಿಸರ ಗಮನ, ಪಂಚಶೀಲ ಗ್ರಹಣಪಡೆಯುತ್ತಲೇ ಇರಬೇಕು. ಅಷ್ಟಶೀಲಗಳನ್ನು ಕೈಕೊಳ್ಳಬೇಕು. ವಿಶೇಷ ಹಣಕಾಸಿನ ಖರ್ಚು ಇಲ್ಲದೆ ಹೆಚ್ಚುಕಾಲ ಶೀಲ, ಧ್ಯಾನ ಧರ್ಮಾಚರಣೆಯಲ್ಲಿ ತೊಡಗುವುದೇ ಇದರ ಉದ್ದೇಶ.

ನಿಯಮಿತ ದಿನಗಳೆಂದರೆ ಪ್ರತಿ ಹುಣ್ಣಿಮೆ, ಅಮಾವಾಸ್ಯೆ ಮತ್ತು ಅವೆರಡರ ಮಧ್ಯೆ ಬರುವ ಅಷ್ಟಮಿಗಳು ಇವು ಮಂಗಳ ದಿನಗಳು. ಬೌದ್ಧ ರಾಷ್ಟ್ರಗಳಲ್ಲಿ ಇವು ಪೋಯಾದಿನವೆದಂ ಸರಕಾರಿ ರಜೆ ದಿನಗಳಾಗಿ. ಅನೇಕ ಧರ್ಮೀಯರಿದ್ದ ಭಾರತದಲ್ಲಿ ಬೌದ್ಧರು ತಮ್ಮ ಹಬ್ಬಗಳನ್ನು ಸುವ್ಯವಸ್ಥಿತ, ಅರ್ಥಪೂರ್ಣವಾಗಿ ಆಚರಿಸಬೇಕು.

ಅ) ವೈಶಾಕ ಪೌರ್ಣಿಮೆ (ಆಗಿ ಹುಣ್ಣಿಮೆ) : ಬುದ್ಧ ಜಯಂತಿ.

ಇದೇ ಪೌರ್ಣಮಿಯ ದಿನ ಸಿದ್ಧಾರ್ಥ ಗೌತಮನು ಹುಟ್ಟಿದ್ದು, ಬೋಧಿಯನ್ನು ಪಡೆದು, ಬುದ್ಧನಾದದ್ದು, ಮತ್ತು ಮಹಾ ಪರಿನಿಬ್ಬಾಣ ಹೊಂದಿದ್ದು, ಈ ಮೂರು ವಿಶೇಷ ಘಟನೆಗಳು ಇದೇ ಪೌರ್ಣಮಿಯ ದಿನ ಆಗಿದ್ದರಿಂದ ಬೌದ್ಧರಿಗೆ ಅತೀ ದೊಡ್ಡ ಹಬ್ಬ, ಜಗತ್ತಿನ ಮೂಲೆ, ಮೂಲೆಯಲ್ಲಿ ಈ ಹಬ್ಬವನ್ನು ''ವೈಸಾಕಿ'ಪ ''ವೈಸಾಕ್'' ಎಂದು ಆಚರಿಸುವರು.

ಆ) ಜ್ಯೇಷ್ಠ ಪೌರ್ಣಿಮೆ (ಕಾರಹುಣ್ಣಿಮೆ) : ಈ ಪೌರ್ಣಿಮಿಯ ದಿನದಂದು ಬುದ್ಧನು ಮಹಾಸಮಯ ಸುತ್ತವನ್ನು ಉಪದೇಶಿಸಿದನು. ದಶದಿಕ್ಕುಗಳಲ್ಲಿ ದೇವತೆಗಳು ಅದನ್ನು ಲಾಲಿಸಿ ಉದ್ಧಾರ ಹೊಂದಿದರು. ಆ ದಿನ ಬುದ್ಧ ಪೂಜೆ, ಮಹಾ ಸಮಯ ಸೂತ್ರವನ್ನು ಪಠಿಸಬೇಕು.

ಇ) ಆಷಾಡ ಪೌರ್ಣಿಮೆ (ಕಡ್ಲಿ ಕಡಬ ಹುಣ್ಣಿಮೆ) : ಬುದ್ಧ ಧರ್ಮ ಚಕ್ರ ಪ್ರವರ್ತನ ಆದ ದಿನ. ಸಾರನಾಥ (ವಾರಣಾಸಿ) ಮೃಗವನದಲ್ಲಿ ಈ ಪವಿತ್ರ ದಿನದಂದು ಬುದ್ಧನು ಪ್ರಪ್ರಥಮವಾಗಿ ಐದು ಜನ ಋಷಿಗಳಿಗೆ ಬುದ್ಧ ಧರ್ಮದ ಉಪದೇಶ ನೀಡಿದನು. ಇದೇ ದಿನ ಮಹಾ ಮಾಯೆಯು ಗರ್ಭ ಧರಿಸಿದ್ದಳು. ಸಿದ್ಧಾರ್ಥ ಗೌತಮನು ಗೃಹತ್ಯಾಗ ಮಾಡಿದ ದಿನ. ಈ ಪೌರ್ಣಿಮೆಯ ದಿನ ಭಿಕ್ಕುಗಲು ವರ್ಷಾವಾಸ ಅಂದರೆ ಮಳೆಗಾಲದಲ್ಲಿ

ಒಂದೇ ಸ್ಥಳದಲ್ಲಿದ್ದು, ಧರ್ಮಶ್ರವಣ-ಉಪದೇಶ ಮಾಡುತ್ತಾ ಇರುವರು.

ಈ) ನಾಗಪಂಚ : ನಾಗ ಜನರಿಂದ ಪರಂಪರೆಯಿಂದ ಆಚರಿಸುತ್ತ ಇದ್ದ ದಿನ.ನಾಗರು ಬುದ್ಧನ ಮಹಾ ಅನುಯಾಯಿಗಳಾಗಿದ್ದರು. ಸಿಹಿಉಂಡೆ, ತಂಬಿಟ್ಟು, ಮೆಲುತ್ತ, ನಾಗಗಳಿಗೆ ಹಾಲನ್ನು ಹಾಕುತ್ತಾ, ಉಯ್ಯಾಲೆ ತೂಗುತ್ತಾ ಸಂತಸದಲ್ಲಿರಬೇಕು.

ಉ) ಶ್ರಾವಣ ಪೌರ್ಣಿಮೆ (ನೂಲ ಹುಣ್ಣಿಮೆ) : ಉಪೋಸತ ದಿನ, ಅಕ್ಕ-ತಂಗಿಯರನ್ನು ಗಂಡನ ಮನೆಯಿಂದ ತೌರೂರಿಗೆ ಕರೆಯಿಸಿ ಕಾಣಿಗೆ ಕೊಡುವ ದಿನ. ಬುದ್ಧ ಪೂಜೆ.

ಊ) ಭಾದ್ರಪದ ಪೌರ್ಣಿಮೆ (ಅನಂತ ಹುಣ್ಣಿಮೆ): ಉಪೋಸತ ದಿನ, ಬುದ್ಧ ಪೂಜೆ.

ಎ)ವಿಜಯದಶಮಿ : ಸಾಮಾನ್ಯವಾಗಿ ಅಕ್ಟೋಬರ್‌ತಿಂಗಳಲ್ಲಿ ಬರುವುದು. ಅಶೋಕ ಮಹಾರಾಜನು ಯುದ್ಧವನ್ನು ನಿಲ್ಲಿಸಿ ಬೌದ್ಧ ಧರ್ಮ ಸ್ವೀಕರಿಸಿ ಭ್ರಾತೃತ್ವವನ್ನು ಸ್ಥಾಪಿಸಿದ ದಿನ. ಬಾಬಾಸಾಹೇಬ ಅಂಬೇಡ್ಕರವರು 1956ರಲ್ಲಿ ನಗಪುರದಲ್ಲಿ ಲಕ್ಷೋಪಲಕ್ಷ ಜನಸಮೂಹದೊಂದಿಗೆ ಬೌದ್ಧ ಧರ್ಮ ಸ್ವೀಕರಿಸಿದ ದಿನ. ಈ ವಿಜಯ ದಶಮಿಯನ್ನು ಮಹಾ ವೈಭವದಿಂದ ಆಚರಿಸಬೇಕು. ಅದಕ್ಕೆ ಧರ್ಮ ಪರಿವರ್ತನ ದಿನವೆಂದೂ ಹೇಳುವರು.

ಏ) ಆಶ್ವಿಜ ಪೌರ್ಣಿಮೆ (ಶೀಗೆ ಹುಣ್ಣಿಮೆ): ಈ ದಿನ ಪೂಜ್ಯ ಭಿಕ್ಕುಗಳು ವರ್ಷಾವಾಸ ಸಮಾಪ್ತಿಗೊಳಿಸಿ, ಧರ್ಮಪ್ರಚಾರಕ್ಕೆ ಭ್ರಮಣ ಮಾಡುವರು. ಅದೇ ದಿವಸದಿಂದ ಹಿಡಿದು ಮುಂದಿನ ಹುಣ್ಣಿಮೆಯವರೆಗೆ ಯಾವುದಾದರೂ ಒಂದು ದಿನದಂದು ಕಠಿಣ ಚೀವರ ದಾನವನ್ನು ಏರ್ಪಡಿಸುವರು.

ಐ) ದೀಪಾವಳಿ : ಇದಕ್ಕೆ ನಾಗಾ ದೀಪಾವಳಿಯೆಂದು ಕರೆಯುವರು. ನಾಗರು ಪರಂಪರೆಯಿಂದ ಆಚರಿಸುತ್ತಾ ಬಂದಿರುವ ದಿನ. ಮುಂಗಾರು ಬೆಳೆಯು ಫಸರಿಸುವುದು. ಸ್ವಲ್ಪ ಫಸಲನ್ನು ಕಿತ್ತು ಹಳದಿ ಹೂವಿನೊಂದಿಗೆ ಇರಿಸಿ ಬುದ್ಧ ಪೂಜೆ ಮಾಡುವರು ಮನೆಯು ಸದಾ

ಬೆಳಕಿನತ್ತ ಸಾಗಲೆಂದು ಸ್ತ್ರೀಯರು-ಮಕ್ಕಳು ಮನೆ ಅಂಗಳ ಶೃಂಗರಿಸಿ ಸಾಲು ದೀಪಗಳನ್ನು ಉರಿಸುವರು. ದೀಪೋತ್ಸವವೆಂದೂ ಆಚರಿಸುವರು. ಮೋಜಿಗಾಗಿ ಮಕ್ಕಳು ಪಟಾಕಿಗಳನ್ನು ಹಾರಿಸಬಹುದು.

ಒ) ಕಾರ್ತಿಕ ಪೌರ್ಣಿಮೆ (ಗೌರಿ ಹುಣ್ಣಿಮೆ): ಉಪೋಸತ ದಿನ. ಬದಂತ ಸಾರಿಪುತ್ರ ಮತ್ತು ಮೊಗ್ಗಲಾಯನ ಪರಿನಿರ್ವಾಣ ಹೊಂದಿದ ದಿನ.

ಒ) ಮಾರ್ಗಶಿರ ಪೌರ್ಣಮಿ (ಹೊಸ್ತಿಲ ಹುಣ್ಣಿಮೆ) : ಉಪೋಸತ ದಿನ. ಆ ದಿನ ಸೂರ್ಯನು ಅತೀ ದಕ್ಷಿಣಕ್ಕೆ ಮಕರ ವೃತ್ತದ ಮೇಲೆ ಇರುವನು. ಅತೀ ಚಿಕ್ಕ ಹಗಲೂ ಅತಿ ದೊಡ್ಡ ರಾತ್ರಿಯಾಗಿರುವುದು.

ಔ) ಪುಶ್ಪ ಪೌರ್ಣಮಿ (ಬನದ ಹುಣ್ಣಿಮೆ) : ಉಪೋಸತ ದಿನ. ಬುದ್ಧ ಪೂಜೆ.

ಅಂ) ಮಾಘ ಪೌರ್ಣಮಿ (ಭಾರತ ಹುಣ್ಣಿಮೆ) : ಭಗವಾನ್ ಬುದ್ಧರು ವೈಶಾಲಿ ನಗರ ಬಿಟ್ಟನಂತರ ಆಯುಷ್ಯ ಸಂಸ್ಕಾರ ಮಾಡಿದರು. ಮತ್ತು ಅಂದಿನಿಂದ ಮೂರು ತಿಂಗಳ ನಂತರ ತಾವು ಮಹಾ ಪರಿ ನಿಬ್ಬಾಣ ಹೊಂದುವರೆಂದು ಘೋಷಿಸಿದರು.

ಅಃ) ಫಾಲ್ಗುಣ ಪೌರ್ಣಮಿ (ಹೋಳಿ ಹುಣ್ಣಿಮೆ) : ಉಪೋಸತ ದಿನ. ಪೂಜ್ಯ ಆಚಾರ್ಯ ಬುದ್ಧರಕ್ಷಿತರವರ ಜನ್ಮದಿನ. ಭಿಕ್ಕುಗಳು ಉಪ ಸಂಪದ ಪಡೆದ ದಿನ, ಅಂದು ಮೈತ್ರಿ ಧ್ಯಾನವನ್ನು ಪಠಿಸಬೇಕು.

ಕ) ಚೈತ್ರ ಪೌರ್ಣಮಿ (ದವನದ ಹುಣ್ಣಿಮೆ) : ಉಪೋಸತ ದಿನ ಬುದ್ಧ ಪೂಜೆ.

ಖ) ಜನವರಿ ದಿನಾಂಕ 26 : ಇದು ರಾಷ್ಟ್ರೀಯ ಹಬ್ಬ, ಭಾರತ ರತ್ನ ಡಾ ಬಿ.ಆರ್. ಅಂಬೇಡ್ಕರ್‌ರವರು ಸಂವಿಧಾನವನ್ನು ರಚಿಸಿ ಜಗತ್ತಿನಲ್ಲಿಯೇ ಅತಿ ದೊಡ್ಡಪ್ರಜಾತಂತ್ರವನ್ನು ರಚಿಸಿ ಸ್ವಾತಂತ್ರ್ಯ, ಸಮಾನತೆ, ಬ್ರಾತೃತ್ವ ಮತ್ತು ನ್ಯಾಯವನ್ನು ಸ್ಥಾಪಿಸಿದ ದಿನ. ಧಮ್ಮದ ಡಿಪಾಯದ ಮೇಲೆ ರಾಜ್ಯ ಘಟನೆಯನ್ನು ಸ್ಥಾಪಿಸಿದ ದಿನ. ಪ್ರತಿ ಮನೆಯಲ್ಲೂ ಆಡಂಬರದಿಂದ

ಆಚರಿಸಬೇಕು.

ಗ) ಆಗಸ್ಟ್ ದಿನಾಂಕ 15 : ಇದೂ ಕೂಡ ರಾಷ್ಟ್ರೀಯ ಹಬ್ಬ-ಧರ್ಮ ಚಕ್ರವನ್ನು ಹೊತ್ತ ರಾಷ್ಟ್ರಧ್ವಜವು ಮೇಲೆ ಏರಿದ ದಿನ. ರಾಜಕೀಯ ಸ್ವಾತಂತ್ರ್ಯದ ದಿನ. ಇದನ್ನು ವಿಜೃಂಭಣೆಯಿಂದ ಆಚರಿಸಬೇಕು.

# ಬೌದ್ಧ ಮಕ್ಕಳಿಡುವ ನಾಮಾಂಕಿತಗಳು

## ಬೌದ್ಧ ಮಗನಿಗೆ

ಅಶ್ವಜಿತ, ಅಭಯ, ಅಜೇಯ, ಅಜೀತ, ಅತುಲ, ಅಂಗುಲಿಮಾಲ, ಅನುರುದ್ಧ, ಅಮರ, ಅಮೃತ, ಅಮಿತ, ಅಶೋಕ, ಅಶ್ವಘೋಷ, ಆದಿತ್ಯ, ಆನಂದ, ಆರ್ಯವೇವ, ಅನಂತ, ಅಹಿಂಸಕ,. ಅಜೀವಕ, ಅನಮೋಲ, ಅನಾಥಪಿಂಡಕ, ಅನುಪಮ, ಅಶ್ವತ್ಥಯನ, ಅಶಿತ, ಅಲಾವಕ, ಅಮೋಲ, ಅಭಿಜೀತ, ಅಭಿಧಮ್ಮ, ಅನಿತ್ಯ, ಅಭಿಕ್ರಾಂತ, ಅಚಲ, ಅಶ್ಮಕ, ಅವಿನಾಶ, ಅಕ್ಕಾಧರ, ಅಮಿಷ, ಅಜಪಾಲ, ಅಜಾತ, ಅಲಾರಕಲಮ, ಅರುಣ, ಅಮಿತಾಬ, ಉಪಸೇನ, ಇಂದರಜಿತ, ಉಪಶುಪ್ತ, ಉಗ್ರಸೇನ, ಉಪಯನ, ಉದಯ, ಉಪಶಿಷ್ಯ, ಉಪನಂದ, ಉಪಾಲಿ, ಉಪಕ್ಷಮ, ಉರುವೇಲ, ಕಮಲಾಕರ, ಕಮಲದೇವ, ಕಮಲರತ್ನ, ಕೀರ್ತಿರಾಜ, ಕೀರ್ತಿವರ್ದನ, ಕುಮಾರಗುಪ್ತ, ಕುಲದೀವ, ಕುಣಾಲ, ಕುಲಾನಂದ, ಕಪಿಲ, ಕಲ್ಯಾಣ, ಕುಶಲ, ಕಾತ್ಯಾಯನ, ಕಾಂಡಿಣ್ಯ, ಗುಣಾನಂದ, ಚಕ್ರಪಾಲ, ಚಂದ್ರಗುಪ್ತ, ಚಂದ್ರರಾಜ, ಚಂದ್ರಭಾನ, ಚಿತ್ರಸೇನ, ಚಕ್ರವರ್ತಿ, ಚಿಂತಾಮಣಿ, ಚೇತನ, ಛತ್ರ, ಜೀವಕ, ಜಯಕುಮಾರ, ಜೀತಕುಮಾರ, ಜಯಸೇನ. ಜಯವರ್ದನ, ಜಿತೇಂದ್ರ, ಜಯದೇವ, ಜಯಪ್ರಕಾಶ, ಜಯರತ್ನ, ಜಯಂತ, ಜೀನಭದ್ರ, ತಥಾಗತ, ತುಷಿತ, ದಿವ್ಯ, ದಯಾನಂದ, ತಿಷ್ಯಚಕ್ಕು, ದೀರ್ಘಕುಮಾರ, ದಿವಾಕರ, ದಾನರಾಜ, ದಂಡಪಾಣಿ, ದರ್ಶನ. ದಿನಂಪತಿ, ದೀಪಂಕರ, ದೇವಾನಂದ, ದೇವರಾಜ,, ದೇವೇಂದ್ರ, ಧಮ್ಮಕುಮಾರ, ಧಮ್ಮಪಾಲ, ಧಮ್ಮದರ, ಧಮ್ಮರಕ್ಷಿತ, ಧಮ್ಮಸೇನ, ಧಮ್ಮಸ್ವಾಮಿ, ಧಮ್ಮನಂದ, ಧಮ್ಮದೀಪ, ಧಮ್ಮರತ್ರ, ಧಮ್ಮಮಿತ್ರ, ಧಮ್ಮಕ್ಷೇಪ, ಧಮ್ಮ ಕೀರ್ತಿ, ಧಮ್ಮರಕ್ಷಕ, ನಂದವರ್ದನ, ನಂದದೀಪ, ನಂದನ, ನರೇಂದ್ರ, ನಾಗಸೇನ, ನಾಗಾರ್ಜುನ, ವೀರಸೇನ, ವೀರಭದ್ರ, ವಿವೇಕ, ವಿದ್ಯಾಧರ, ವಿಮಲ, ಶಾಖ್ಯಸಿಂಹ, ಶಾಕ್ಯಮುನಿ, ಶಾಂತಿರಕ್ಷಕ, ಶಾಂತಿಕುಮಾರ, ಶೀಲಾನಂದ, ಶೀಲಭದ್ರ, ಶೀಲಸಾಗರ, ಶೀಲಸೇನ, ಶೀಲರತ್ನ, ಶಿಲೇಂದ್ರ, ಸುಗತ, ಸಂಘಸೇನ, ಸಂಘರಕ್ಷಿತ, ಸಂಘಪಾಲ, ಸಂಘರತ್ನ, ಸಂಘಮಿತ್ರ, ಸತ್ಯಶೀಲ, ಸತ್ಯಜೀತ, ಸೋನ,

ಸಾರಿಪುತ್ರ, ಶಾಸನವಂಶ, ಸಮನ, ಸುರೇಂದ್ರ, ಶಿಸುಪಾಲ, ಶುದ್ಧೋಧನ, ಹೇಮಂತಸ ಪದಮುಪಾಣಿ, ಪದಮುಸೇನ, ಪ್ರತಮು, ಪರಾಕ್ರಮು, ಪುರುಷೋತ್ತಮು, ಪ್ರಕಾಶ, ಸುಶೀಲ, ಪ್ರಜ್ಞಾವಂತ, ಪ್ರತಕ್ರಾಂದನ, ಪ್ರಮೋದ, ಪ್ರಭಾಕರ, ಪ್ರಸೇನಜಿತ, ಪ್ರಿಯದರ್ಶಿನಿ, ಬಾಲಭದ್ರ, ಬಲಭೀಮು, ಬಲದೇವ, ಬಿಂಬಸಾರ, ಬುದ್ಧರತ್ನ, ಬುದ್ಧಘೋಷ, ಬುದ್ಧಪ್ರಿಯ, ಬೋಧಿನಂದ, ಬೋಧಿಕುಮಾರ, ಬುದ್ಧ ರಕ್ಷಿತ, ಭದ್ರಸೇನ, ಸದಾನಂದ, ಸರ್ವಜ್ಞ, ಸಿಂಹ, ದೀರ್ಘಾಯು, ಮಹಾನಾಮ, ಮಡಿಪಾಲ, ಮಹೇಂದ್ರ, ಯಶಪಾಲ, ಯುವರಾಜ, ಯಶವಂತ, ರತ್ನಾಕರ, ರಾಷ್ಟ್ರಪಾಲ, ರಾಜೇಶ್ವರ, ರಾಜೇಂದ್ರ, ರಾಹುಲ, ರೇವತ, ಲೋಕಮಿತ್ರ, ಮಹಾನಾದ, ವಿಜಯ, ವಿಶ್ವಾಸ, ವಿನಯ, ವಿಜಯಾನಂದ, ವಿನೀತ, ವಿಭೂತಿ, ವಿಮಲಕೀತಿದ, ವಿಶಾಲ, ಮೊಗ್ಗಲಾಯನ, ಸುದತ್ತ, ಸುನೀತ, ಸುಮಂಗಲ, ಕಾಶ್ಯಪ, ಸಕಲ, ಹರ್ಷವರ್ಧನ, ಕನಿಷ್ಕಾ, ಮಾತುಂಗ, ವಿಶುದ್ಧ.

# ಬೌದ್ಧ ಮಗಳಿಗೆ ಇಡುವ ನಾಮಾಂಕಿತಗಳು :

ಅರುಣಾ, ಅಸ್ಮಿತಾ, ಅಪರ್ಣಾ, ಅಭಿಜ್ಞಲ, ಅನುರಾಧಾ, ಅಂಕಿತಾ, ಅಲಕಾ, ಅರ್ಚನಾ, ಅನಿತಾ, ಅನುಪ್ರಿಯಾ, ಆಶಾ, ಅಭಯಾ, ಅಭಿರುಚಿ, ಅಮ್ರಪಾಲಿ, ಅನೋಮಾ, ಆವಂತಿ, ಅಷ್ಟಶೀಲಾ, ಉತ್ಪಲವರ್ಣಾ, ಉತ್ಕರ್ಷಿ, ಉತ್ತರಾ, ಉಜ್ವಲಾ, ಉತ್ತಮಾ, ಊರ್ಮಿಲಾ, ಉಷಾ, ಉಪಶೀಲಾ, ಉಪೇಕ್ಷಾ, ಕಾಂತಾ, ಕಲ್ಪರಾಣಿ, ಕಲ್ಪನಾ, ಕಾಂ, ಕುಂಡಲಕೇಲಿ, ಕುಶಿನಾರಾ, ಕಲ್ಯಾಣಿ, ಕುಸುಮ, ಕಮಲ, ಕರುಣಾ, ಕಿಸಾಗೌತಮಿ, ಕಪಿಲಾಮಣಿ, ಕಮಲನಯನಿ, ಖೇಮಾ, ಗೌತಮಿ, ಗುಣಪ್ರಿಯಾ, ಚಾಣಾಕ್ಷ, ಚಂಪಾ, ಚಂದ್ರಪ್ರಭಾ, ಚಂಪಾವತಿ, ಚಂದ್ರಶೀಲಾ, ಚಂದ್ರಕಿರಣ, ಚಾರುಮಿತ್ರ, ಚಾರುಶೀಲ, ಜಯಾ, ಜಯಾನಂದಾ, ಚಿತ್ರಲೇಖ, ಚಾರಿತ್ರಿ, ಚೇತನಾ, ಜಯಂತಿ, ಜೋತಿ, ಜೋತಸ್ನಾ, ತಿಲೋತ್ತಮಾ, ತಕ್ಷಶಿಲಾ, ತಪಸ್ವಿನಿ, ತೃಪ್ತಿ, ತೃಷ್ಣಾ, ತೇಜಸ್ವಿನಿ, ದರ್ಶನಾ, ದೀಪಾ, ಧಮ್ಮದಿನ್ನಾ, ಧಮ್ಮಸ್ವಾಮಿನಾ, ಧಮ್ಮಸ್ಮೃತಿ, ಧಮ್ಮಶೇವಿಕಾ, ನಿಶಾ, ಧಮ್ಮನಂದಾ, ಧಮ್ಮರಕ್ಷಿತಾ, ಧಮ್ಮಪಾಲಿನಿ, ಧಮ್ಮದತ್ತಾ, ನಂದಾ, ನಂದರಾಣಿ, ನಂದಿನಿ, ನಾಗಕುಮಾರಿ, ನಾಗೋಣ, ನೀಲಮಣಿ, ನಿತಾ ನಿರ್ಮಲಾ, ನಾಲಂದಾ, ನಾಗಿನಿ, ಪದ್ಮಿನಿ, ಪದ್ಮರಾಣಿ, ಪಾರಮಿತ್ರಾ, ಪ್ರತಿಜ್ಞಾ ವಜ್ರಪಾಲಿ, ವಜೀರಾ, ವಿನಯಾ, ವಿನಿತಾ, ವಿದ್ಯಾ, ವಿಮುಕ್ತಿ, ವಂದನಾ, ಸಂಘಮಿತ್ರಾ, ಶಾಂತಿ, ಶಿಲ್ಪಾ, ಶಿಲ್ಪಲತಾ, ಶ್ರದ್ಧಾ, ಸಂಗೀತಾ, ಸಮಾಧಿ, ಸುದರ್ಶಿನಿ, ಸ್ಮೃತಿ, ಸುವರ್ಣಾ, ಸ್ವರ್ಣಪ್ರಭಾ, ಸಾಂಚಿ, ಸುಲಕ್ಷಣ, ಸ್ವಾತಿ, ಸುಜಾತಾ, ಸುನಿತಾ, ಸುಲೋಚನಾ, ಸುಮಂಗಲಾ, ಸುಪ್ರಿಯ ಸುಧಾಮತಿ, ಶೀಲಾ, ಸ್ನೇಹ, ಪ್ರಭಾ, ಸುಧಮ್ಮಾ, ಸೋನಾ, ಶಶೀಕಲಾ, ಸ್ನೇಹಲತಾ, ಸ್ಫೂರ್ತಿ, ಸುಭಾಷಿಣಿ, ಶ್ರಾವತಿ, ಶೈಲಾ,ಸಂಭೋಧಿನಿ, ಸುಶೀಲಾ, ಸಾಧಾನಾ, ಕ್ಷೇಮಾ, ಶೋಭ, ಸುಮೇಕಾ, ಮಲ್ಲಿಕಾ, ಹೇಮಂತಾ, ಹಸ್ತಿನಿ, ಲುಂಬಿಣಿ, ರಾಜಶ್ರಿ, ಪ್ರತಿಮಾ, ಪ್ರತಿಬಿಂಬಾ, ಮಾಯಾವತಿ, ಪ್ರಜಾವತಿ, ಧಮ್ಮಯಾನಿ, ಮಹಿಷಾ, ಯಶೋಧರಾ, ಮೈತ್ರಾ, ಮೈನಾ, ರಂಭಾ, ರತ್ನಾ, ಚಂದ್ರಿಕಾ, ಬಿಂಬಾ, ಪ್ರಕೃತಿ, ಸುಭದ್ರಾ, ಪದ್ಮಾ, ಜಮುನಾ, ಸರಸತಿ, ತುಂಗಾ.

## ಅಟ್ಠವೀಸತಿ ಪರಿತ್ತಂ

1. ತಣ್ಹಂಕರೋ ಮಹಾವೀರೋ ಮೇಧಂಕರೊ ಮಹಾಯಸೊ,
ಸರಣಂಕರೊ ಲೋಕಹಿತೊ ದೀಪಂಕರೊ ಜುತಂಧರೊ.

2. ಕೊಣ್ಣಞ್ಞೋ ಜನಪಾಮೊಕ್ಖೊ ಮಙ್ಗಲೊ ಪುರಸಾಸಭೋ,
ಸುಮನೊ ಸುಮನೊ ಧೀರೊ ರೇವತೊ ರತಿ ವಡ್ಢನೊ.

3. ಸೋಬಿತೊ ಗುಣಸಮ್ಪನ್ನೋ ಅನೋಮದಸ್ಸೀ ಜನುತ್ತಮೊ,
ಪದುಮೊ ಲೋಕಪಜ್ಜೋತೋ ನಾರದೊ ವರ ಸಾರಥೀ.

4. ಪದುಮುತ್ತರೊನೆ ಸತ್ತಸಾರೊ ಸುಮೇಧೊ ಅಗ್ಗಪುಗ್ಗಲೊ,
ಸುಜಾತೊ ಸಬ್ಬಲೋಕಗ್ಗೊ ಪಿಯದಸ್ಸೀ ನರಾಸಭೊ.

5. ಅತ್ಥದಸ್ಸೀ ಕಾರುಣಿಕೊ ಧಮ್ಮದಸ್ಸೀ ತಮೋನುದೊ,
ಸಿದ್ಧ ತ್ಥೊ ಅಸಮೊಲೋಕೆ ತಿಸ್ಸೊ ವರದಸಂವರೊ.

6. ಪುಸ್ಸೊ ವರದಸಂಬುದ್ಧೊ ವಿಪಸ್ಸೀಚ ಅನೂಪಮೊ,
ಸಿಖೀ ಸಬ್ಬಹಿತೊ ಸತ್ಥಾ ವೆಸ್ಸಭೂ ಸುಖದಾಯಕೊ.

7. ಕಕುಸನ್ಧೊ ಸತ್ಥವಾಹೊ ಕೋಣಾಗಮನೊ ರಣಞ್ಜಹೊ,
ಕಸ್ಸಪೊ ಸಿರಿಸಮ್ಪನ್ನೊ ಗೋತಮೊ ಸಕ್ಕ ಪುಙ್ಗಮೊ.

8. ತೇಸಂ ಸಚ್ಚೇನ ಸೀಲೇನ ಖನ್ತಿಮೆತ್ತಬಲೇನ ಚ,
ತೇಪಿ ಮಂ ಅನುರಕ್ಖನ್ತು ಆರೋಗ್ಯೇನ ಸುಕೇನ ಚಾತಿ

## ಇಪ್ಪತ್ತೆಂಟು ರಕ್ಷಣೆಗಳು

(ಇಪ್ಪತ್ತೆಂಟು ಬುದ್ಧರ ಹೆಸರು)

**ಅರ್ಥ :-**

1. ಮಹಾವೀರನಾದ ತಣ್ಹಂಕರ ಮಹಾಯಶನಾದ ಮೇಧಂಕರ, ಲೋಕಹಿತನಾದ ಶರಣಂಕರ, ಜ್ಯುತಿಂಧರನಾದ ದೀಪಂಕರ.

2. ಜನಪ್ರಾಮುಖ್ಯನಾದ ಕೊಂಡಣ್ಣ, ಪುರುಷರಲ್ಲಿ ವೃಷಭನಾದ ಮಂಗಳ, ಸಂತೋಷಚಿತ್ತನೂ ಧೀರನೂ ಆದ ಸುಮನ, ಸಂತೋಷವರ್ಧಕನಾದ ರೇವತ.

3. ಗುಣ ಸಂಪನ್ನನಾದ ಶೋಭಿತ, ಜನುತ್ತಮನಾದ ಅನೋಮದಸ್ಸಿ ಲೋಕಕ್ಕೆ ಬೆಳಕಾದ ಪದುಮ, ಶ್ರೇಷ್ಠ ಸಾರಥಿಯಾದ ನಾರದ.

4. ಸತ್ವಸಾರನಾದ ಪದುಮುತ್ತರ, ಅಗ್ರ ಪುಥ್ಗಲನಾದ ಸುಮೇಧ, ಸರ್ವಲೋಕಾಗ್ರನಾದ ಸುಜಾತ, ನರರಲ್ಲಿ ವೃಷಭನಾದ ಪಿಯದಸ್ಸೀ.

5. ಕಾರುಣಿಕನಾದ ಅತ್ಥದಸ್ಸೀ, ಕತ್ತಲೆಯನ್ನು ಹೋಗಲಾಡಿಸುವ ಧಮ್ಮದಸ್ಸೀ, ಲೋಕದಲ್ಲಿ ಅಸಮಾನನಾದ ಸಿದ್ಧತ್ಥ, ವರವನ್ನು ಕೊಡುವ ಮತ್ತು ಸಂಯಮಿಯಾದ ತಿಸ್ಸ.

6. ವರವನ್ನು ದಯಪಾಲಿಸುವ ಸಂಬುದ್ಧನಾದ ಪುಸ್ಸ, ಉಪಮಾತೀತನಾದ ವಿಪಸ್ಸೀ, ಎಲ್ಲರ ಹಿತಕಾರಿ ಗುರುವಾದ ಸಿಖೀ, ಸುಖದಾಯಕನಾದ ವೆಸ್ಸಭೂ.

7. ಸಾರ್ಥವಾಹನಾದ ಕುಕುಸನ್ಧ ರಣವಿಜಯಿಯಾದ ಕೋಣಾಗಮನ, ಸಿರಿಸಂಪನ್ನವಾದ ಕಸ್ಸಪ, ಸಾಕ್ಯಪುಂಗವನಾದ ಗೌತಮ.

8. ಅವರ ಸತ್ಯ, ಶೀಲ, ಕ್ಷಾಂತಿ ಮತ್ತು ಮೈತ್ರಿಗಳ ಬಲದಿಂದ ನನ್ನ ಆರೋಗ್ಯವನ್ನು ಮತ್ತು ಸುಖವನ್ನು ಕಾಪಾಡಲಿ.

**-: ಭವತು ಸಬ್ಬ ಮಂಗಳಂ :-**

With bad advisors forever left behind,
From paths of evil he departs for eternity,
Soon to see the Buddha of Limitless Light
And perfect Samantabhadra's Supreme Vows.

The supreme and endless blessings of Samantabhadra's deeds,
I now universally transfer.
May every living being, drowning and adrift,
Soon return to the Land of Limitless Light!

~ The Vows of Samantabhadra ~

I vow that when my life approaches its end,
All obstructions will be swept away;
I will see Amitabha Buddha,
And be born in his Land of Ultimate Bliss and Peace.

When reborn in the Western Land,
I will perfect and completely fulfill
Without exception these Great Vows,
To delight and benefit all beings.

~ The Vows of Samantabhadra
Avatamsaka Sutra ~

# DEDICATION OF MERIT

May the merit and virtue
accrued from this work
adorn Amitabha Buddha's Pure Land,
repay the four great kindnesses above,
and relieve the suffering of
those on the three paths below.

May those who see or hear of these efforts
generate Bodhi-mind,
spend their lives devoted to the Buddha Dharma,
and finally be reborn together in
the Land of Ultimate Bliss.
Homage to Amita Buddha!

**NAMO AMITABHA**

**南無阿彌陀佛**

《印度 KANNADA 文：BUDDHIST DAILY CEREMONIES》

財團法人佛陀教育基金會 印贈

台北市杭州南路一段五十五號十一樓

Printed and donated for free distribution by

**The Corporate Body of the Buddha Educational Foundation**

11F., 55 Hang Chow South Road Sec 1, Taipei, Taiwan, R.O.C.
Tel: 886-2-23951198 , Fax: 886-2-23913415
Email: overseas@budaedu.org
Website: http://www.budaedu.org
Mobile Web: m.budaedu.org

**This book is strictly for free distribution, it is not to be sold.**

ಈ ಪುಸ್ತಕ ಕೇವಲ ಉಚಿತ ಹಂಚಿಕೆಗಾಗಿ. ಮಾರಾಟ ಮಾಡಕೂಡದು

Printed in Taiwan
10,000 copies; November 2015
**IN024 - 13691**